21 November 2025 Friday

SINCE 1957

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

# ವರ್ತಮಾನ

ಸಂಪಾದಕ: ಕೆ.ಎನ್.ರವಿ

ಭವಿಷ್ಯದ ಮುನ್ನುಡಿ

**ಭಾವನಾಂತರಂಗ**

ಮನಸ್ಸು ಖಾಲಿ ಎನಿಸಿದಾಗ ನೆನಪುಗಳು ತುಂಬಿಕೊಳ್ಳುತ್ತವೆ! ಹೃದಯ ಖಾಲಿ ಅನಿಸಿದಾಗ ಕಣ್ಣು ತುಂಬಿ ಬರುತ್ತವೆ!

*ಸ್ನೇಹಾ ಆನಂದ್*

**ಒಂದೊಳ್ಳೆ ಮಾತು**

ಪ್ರತಿಫಲ ಅಪೇಕ್ಷೆಸದೆ ಮಾಡಿದ ಸಹಾಯ.. ಸುಮ್ಮನೆ ವ್ಯರ್ಥವಾಗುವುದಿಲ್ಲ, ಬದಲಿಗೆ ಭವಿಷ್ಯದಲ್ಲಿ ನಿರೀಕ್ಷೆಗೂ ಮೀರಿದ ಫಲ ಕೊಡುತ್ತದೆ

ಮೈಲಾರ ಸಾವಿತ್ರಿಬಾಯಿ

info.varthaman@gmail.com

9742504916 | ಮೈಸೂರು | ಮಂಡ್ಯ | ಬೆಂಗಳೂರು | ಹಾಸನ | ಚಾಮರಾಜನಗರ | ರಾಮನಗರ | ಬೆಂಗಳೂರು ಗ್ರಾಮಾಂತರ | ಕೊಡಗು | ಕಾರ್ಯನಿರ್ವಾಹಕ ಸಂಪಾದಕ - ಕೆ.ಆರ್.ಮಿಹಿರ್ ಆಕಾಶ್

VARTHAMAN Volume: 69 Issue: 38 Pages: 06 KA/SK/MYS/1098/2023-2025 R.N.I. No.3577/1957 www.varthaman.in Price-3







# ನವೆಂಬರ್ ಕ್ರಾಂತಿ 'ಮಾಧ್ಯಮ ಸೃಷ್ಟಿ'

## ನನ್ನ ಸಿಎಂ ಸ್ಥಾನ ಈಗಲೂ ಗಟ್ಟಿ: ಸಿದ್ದರಾಮಯ್ಯ ಭರವಸೆ


**ಚಾಮರಾಜನಗರ:** ನವೆಂಬರ್ ಕ್ರಾಂತಿ ವಿಚಾರವನ್ನು ಸ್ಪಷ್ಟವಾಗಿ ತಳ್ಳಿಹಾಕಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು, ಇದು ಕೇವಲ ಮಾಧ್ಯಮ ಸೃಷ್ಟಿ ಎಂದು ಟೀಕಿಸಿದರು.

ನಗರದಲ್ಲಿ ಸುದ್ದಿಗಾರರ ಜೊತೆ ಗುರುವಾರ ಮಾತನಾಡಿದ ಅವರು, ನನ್ನ ಸ್ಥಾನ ಮೊದಲಿನಿಂದಲೂ ಗಟ್ಟಿಯಾಗಿದೆ. ಈಗಲೂ ಗಟ್ಟಿಯಾಗಿದೆ ಮತ್ತು ಭವಿಷ್ಯದಲ್ಲಿಯೂ ಹಾಗೆಯೇ ಮುಂದುವರಿಯುತ್ತದೆ ಎಂದು ಸಿದ್ದರಾಮಯ್ಯ ಭರವಸೆ ವ್ಯಕ್ತಪಡಿಸಿದರು.

ಎಲ್ಲಿವರೆಗೆ ಜನರ ಆಶೀರ್ವಾದ ಇರುತ್ತದೆಯೋ ಅಲ್ಲಿವರೆಗೂ ನಾನೇ ಮುಖ್ಯಮಂತ್ರಿ ಆಗಿರುತ್ತೇನೆ. 2028ರ ಚುನಾವಣೆಯನ್ನು ಯಾರ ನೇತೃತ್ವದಲ್ಲಿ ಚುನಾವಣೆ ಎದುರಿಸಬೇಕು ಎಂಬ ವಿಚಾರವನ್ನು ಮುಂದಿನ ದಿನಗಳಲ್ಲಿ ತೀರ್ಮಾನ ಮಾಡೋಣ ಎಂದು ಸಿಎಂ ತಿಳಿಸಿದರು.

ನಾಯಕತ್ವ ಬದಲಾವಣೆ ಕುರಿತ ಹೇಳಿಕೆಗೆ ಪ್ರತಿಕ್ರಿಯಿಸಿದ ಸಿಎಂ, ಎರಡೂವರೆ ವರ್ಷ ಆದ





ಮೇಲೆ ಸಂಪುಟ ಪುನಾರಚನೆ ಮಾಡೋಣ ಎಂದು ಹೈಕಮಾಂಡ್‌ಗೆ ತಿಳಿಸಿದ್ದೆ. ಆ ವಿಚಾರದ ಬಗ್ಗೆ ಸಾಕಷ್ಟು ಚರ್ಚೆ ಆಗುತ್ತಿದೆ. ಇದನ್ನೇ ಎಲ್ಲರೂ ಕ್ರಾಂತಿ ಅಂತ ತಿಳಿದುಕೊಂಡಿದ್ದರು. ಆದರೆ, ಯಾವ ಕ್ರಾಂತಿಯೂ ಇಲ್ಲ, ಭ್ರಾಂತಿಯೂ ಇಲ್ಲ. ಮತ್ತೆ ರಾಜ್ಯದಲ್ಲಿ ನಾವೇ ಅಧಿಕಾರಕ್ಕೆ ಬರುತ್ತೇವೆ ಎಂದು ಹೇಳಿದರು.

ಜನರು ನಮಗೆ ಐದು ವರ್ಷಗಳ ಕಾಲ ಆಡಳಿತ ನಡೆಸಲು ಜನಾದೇಶ ನೀಡಿದ್ದಾರೆ. ನಾವು ಭರವಸೆ ನೀಡಿದ ಐದು ಗ್ಯಾರಂಟಿಗಳನ್ನು ಈಡೇರಿಸಲು ನಾವು ಪ್ರಾಮಾಣಿಕ ಪ್ರಯತ್ನ ಮಾಡುತ್ತೇವೆ ಎಂದು ಸಿದ್ದರಾಮಯ್ಯ ಹೇಳಿದರು.

ಐದು ವರ್ಷಗಳ ಕಾಲ ನೀವೇ ಸಿಎಂ ಆಗಿ ಇರುತ್ತೀರಾ? ಎಂಬ ಪ್ರಶ್ನೆಗೆ ಸಿಡಿಮಿಡಿಗೊಂಡ ಸಿಎಂ, ಇದರ ಅರ್ಥವೇನು? ಇವು ಅನಗತ್ಯ ಚರ್ಚೆ ಮಾಡುತ್ತೀರಿ. ಎರಡೂವರೆ ವರ್ಷದ ನಂತರ ಸಂಪುಟ ಪುನರ್ರಚನೆ ಮಾಡೋಣ ಅಂತ ನಾನು ಪಕ್ಷದ

ಪುಟ 2ಕ್ಕೆ

### ಚಾ.ನಗರಕ್ಕೆ ಭೇಟಿ: ಅಧಿಕಾರ ಭದ್ರ

ಚಾಮರಾಜನಗರಕ್ಕೆ ಭೇಟಿ ನೀಡಿದಾಗಲೆಲ್ಲಾ ನನ್ನ ಅಧಿಕಾರ ಭದ್ರವಾಗಿದೆ. ಚಾ.ನಗರಕ್ಕೆ ಭೇಟಿ ನೀಡಿದರೆ ಮುಖ್ಯಮಂತ್ರಿ ಅಧಿಕಾರ ಕಳೆದುಕೊಳ್ಳುತ್ತಾರೆ ಎಂಬುದು ಮೂಢ ನಂಬಿಕೆ. ನನಗೆ ಮೌಢ್ಯಗಳಲ್ಲಿ ನಂಬಿಕೆ ಇಲ್ಲ ಎಂದು ಸಿಎಂ ಸಿದ್ದರಾಮಯ್ಯ ಹೇಳಿದರು.

ನನಗೆ, ಚಾಮರಾಜನಗರ, ಮೈಸೂರು ಅಥವಾ ಬೆಂಗಳೂರು ಎಲ್ಲವೂ ಒಂದೇ. ನಾನು ರಾಜ್ಯದ 31 ಜಿಲ್ಲೆಗಳಿಗೂ ಭೇಟಿ ನೀಡುತ್ತೇನೆ. ನಾನು ಇಲ್ಲಿಗೆ ಬಂದಾಗ ನನಗೆ ಅಧಿಕಾರ ಗಟ್ಟಿಯಾಗಿದೆ. ಮೂಢನಂಬಿಕೆಗಳಲ್ಲಿ ನನಗೆ ನಂಬಿಕೆ ಇಲ್ಲ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ರಾಜ್ಯದ ಜನರು ಎಲ್ಲಿವರೆಗೆ ಅಪೇಕ್ಷಿಸುವರೋ ಅಲ್ಲಿಯವೆಗೆ ನಾನೇ ಬಜೆಟ್ ಮಂಡಿಸುತ್ತೇನೆ ಎಂದು ತಿಳಿಸಿದರು.

ಪುಟ 2ಕ್ಕೆ

# ಸಿದ್ದು ಕೊಟ್ಟ ಮಾತಿಗೆ ತಪ್ಪಲ್ಲ!

## ಸಿಎಂ ಸಿದ್ದರಾಮಯ್ಯ ಅವರಿಗೂ ಜವಾಬ್ದಾರಿ ಇದೆ: ಡಿ.ಕೆ.ಸುರೇಶ್ ಮಾರ್ಮಿಕ ಹೇಳಿಕೆ

**ಬೆಂಗಳೂರು:** ಮುಖ್ಯಮಂತ್ರಿ ಸಿದ್ದರಾಮಯ್ಯ ಮಾತಿಗೆ ತಪ್ಪಲ್ಲ. ಅವರು ತಮ್ಮ ಮಾತನ್ನು ಉಳಿಸಿಕೊಳ್ಳುತ್ತಾರೆ ಎಂದು ಡಿ.ಕೆ.ಶಿವಕುಮಾರ್ ಸಹೋದರ ಡಿ.ಕೆ.ಸುರೇಶ್ ಗುರುವಾರ ನೀಡಿರುವ ಹೇಳಿಕೆ ರಾಜ್ಯ ರಾಜಕೀಯ ವಲಯದಲ್ಲಿ ತೀವ್ರ ಚರ್ಚೆಗೆ ಕಾರಣವಾಗಿದೆ.



ರಾಜ್ಯದಲ್ಲಿ ನಾಯಕತ್ವ ಬದಲಾವಣೆಯ ಚರ್ಚೆ ದಿನದಿಂದ ದಿನಕ್ಕೆ ತೀವ್ರ ಸ್ವರೂಪ ಪಡೆದುಕೊಳ್ಳುತ್ತಿರುವ ಸಂದರ್ಭದಲ್ಲಿಯೇ ಡಿ.ಕೆ.ಸುರೇಶ್ ಹೇಳಿಕೆ ಮಹತ್ವ ಪಡೆದುಕೊಂಡಿದೆ. ಮುಖ್ಯಮಂತ್ರಿ ಹುದ್ದೆಯ 50:50 ಅಧಿಕಾರ ಹಂಚಿಕೆಯ ಮಾತುಕತೆಯ ಹಿನ್ನೆಲೆಯಲ್ಲಿ ಹೇಳಿಕೆ ನೀಡಿದ್ದಾರೆಂದು ಅರ್ಥೈಸಲಾಗುತ್ತಿದೆ.

ಈ ಎಲ್ಲಾ ಬೆಳವಣಿಗೆಗಳ ನಡುವೆಯೇ ಮಾಜಿ ಸಂಸದ ಡಿ.ಕೆ.ಸುರೇಶ್, ಸಿದ್ದರಾಮಯ್ಯ ಕೊಟ್ಟ ಮಾತು ತಪ್ಪಲ್ಲ. ಸಿದ್ದರಾಮಯ್ಯ ಕೊಟ್ಟ ಮಾತಿನಂತೆ ನಡೆದುಕೊಳ್ಳುತ್ತಾರೆ. ಸಿದ್ದರಾಮಯ್ಯ ಅವರಿಗೂ ಜವಾಬ್ದಾರಿ ಇದೆ. ಸಿದ್ದರಾಮಯ್ಯ ಯಾರಿಗೂ ಕೊಟ್ಟ ಮಾತಿಗೆ ತಪ್ಪಿಲ್ಲ. ಹಿಂದಿನ ಸರ್ಕಾರದಲ್ಲಿ ಕೂಡ ಮಾತಿನ ಪ್ರಕಾರವೇ ನಡೆದಿದ್ದಾರೆ. ಈಗಿನ ಸರ್ಕಾರದಲ್ಲೂ ಕೂಡ ಕೊಟ್ಟ ಮಾತಿನಂತೆ ನಡೆದುಕೊಳ್ಳುತ್ತಿದ್ದಾರೆ ಹಾಗೂ ಮುಂದೆಯೂ ಕೊಟ್ಟ ಮಾತಿನ ಪ್ರಕಾರವೇ ನಡೆದುಕೊಳ್ಳುತ್ತಾರೆ ಎಂದು ಮಾರ್ಮಿಕವಾಗಿ ಮಾತನಾಡಿದ್ದಾರೆ.

ನಮ್ಮ ಶ್ರಮಕ್ಕೆ ಫ್ರತಿಫಲ ಖಂಡಿತವಾಗಿ ಸಿಗಲಿದೆ. ಅದಕ್ಕೆ ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದಿದೆ. ಒಂದಲ್ಲ ಒಂದು ದಿನ ಡಿ.ಕೆ ಶಿವಕುಮಾರ್ ಶ್ರಮಕ್ಕೆ ಪ್ರತಿಫಲ ಸಿಗುತ್ತದೆ ಕಾದು ನೋಡಬೇಕು. ಎಲ್ಲದಕ್ಕೂ ಹೈಕಮಾಂಡ್ ಸೂಕ್ತ ಸಂದರ್ಭದಲ್ಲಿ ಉತ್ತರ ಕೊಡುತ್ತದೆ ಎಂದರು.

ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದು ಗುರುವಾರ ಎರಡೂವರೆ ವರ್ಷ ಪೂರ್ಣಗೊಂಡಿದೆ. ಅಧಿಕಾರ ಹಂಚಿಕೆ ಸೂತ್ರದ ಪ್ರಕಾರ ಸಿದ್ದರಾಮಯ್ಯ ಸಿಎಂ ಕುರ್ಚಿ ಬಿಡುತ್ತಾರೆ. ಉಳಿದ ಎರಡುವರೆ ವರ್ಷ ಡಿ.ಕೆ.ಶಿವಕುಮಾರ್ ಸಿಎಂ ಆಗುತ್ತಾರೆ ಎನ್ನುವ ಮಾತು ಆರಂಭದಿಂದಲೂ ಕೇಳಿ ಬಂದಿದೆ. ಅದರಂತೆ ಸಿಎಂ ಸ್ಥಾನಕ್ಕೇರಲು ಡಿ.ಕೆ ಶಿವಕುಮಾರ್ ಸಹ ನಾನಾ ಪ್ರಯತ್ನ ಮಾಡುತ್ತಿದ್ದಾರೆ.

ಡಿ.ಕೆ.ಸುರೇಶ್ ಹೇಳಿಕೆ ಹಲವು ಪ್ರಶ್ನೆಗಳನ್ನು ಹುಟ್ಟು ಹಾಕಿದೆ. ಸರ್ಕಾರ ರಚನೆ ಸಂದರ್ಭದಲ್ಲಿ 50:50 ಅಡಿ ಅಧಿಕಾರಿ ಹಂಚಿಕೆ ಒಪ್ಪಂದವಾಗಿದ್ದು ನಿಜವೇ? ಎರಡೂವರೆ ವರ್ಷದ ನಂತರ ಸಿಎಂ ಕುರ್ಚಿ ಬಿಟ್ಟುಕೊಡುವುದಾಗಿ ಸಿದ್ದರಾಮಯ್ಯ ಹೇಳಿದ್ದಾರೆಯೇ? ಈ ಎಲ್ಲಾ ಪ್ರಶ್ನೆಗಳಿಗೆ ಕಾಂಗ್ರೆಸ್ ಹೈಕಮಾಂಡ್ ಉತ್ತರಿಸಬೇಕಿದೆ.

## ಬಿಹಾರ ಸಿಎಂ ನಿತೀಶ್ ಕುಮಾರ್ ಪ್ರಮಾಣ




**ಪಾಟ್ನಾ:** ಬಿಹಾರ ಮುಖ್ಯಮಂತ್ರಿಯಾಗಿ ಜೆಡಿಯು ಮುಖ್ಯಸ್ಥ ನಿತೀಶ್ ಕುಮಾರ್ ಅವರು ಗುರುವಾರ ದಾಖಲೆಯ 10ನೇ ಬಾರಿಗೆ ಪ್ರಮಾಣ ವಚನ ಸ್ವೀಕರಿಸಿದರು. ಗುರುವಾರ ಬೆಳಗ್ಗೆ 11.30ಕ್ಕೆ ಪಾಟ್ನಾದ ಗಾಂಧಿ ಮೈದಾನದಲ್ಲಿ ನಡೆದ ಅದ್ದೂರಿ ಸಮಾರಂಭದಲ್ಲಿ ಎನ್‌ಡಿಎ ಬಲಪ್ರದರ್ಶನದ ನಡುವೆ ನಿತೀಶ್ ಕುಮಾರ್ ಪ್ರಮಾಣವಚನ ಸ್ವೀಕರಿಸಿದರು.

ಬಿಹಾರ ರಾಜ್ಯಪಾಲ ಆರಿಫ್ ಮೊಹಮ್ಮದ್ ಖಾನ್ ನಿತೀಶ್ ಕುಮಾರ್ ಅವರಿಗೆ ಪ್ರತಿಜ್ಞಾವಿಧಿ ಬೋಧಿಸಿದರು. ನಂತರ ಬಿಜೆಪಿ ಶಾಸಕಾಂಗ ಪಕ್ಷದ ನಾಯಕರಾದ ಸಾಮ್ರಾಟ್ ಚೌಧರಿ ಮತ್ತು ವಿಜಯ್ ಕುಮಾರ್ ಸಿನ್ಹಾ ಅವರು ಉಪ ಮುಖ್ಯಮಂತ್ರಿಗಳಾಗಿ ಪ್ರಮಾಣವಚನ ಸ್ವೀಕರಿಸಿದರು.

ಸಮಾರಂಭದಲ್ಲಿ ಪ್ರಧಾನಿ ನರೇಂದ್ರ ಮೋದಿ, ಕೇಂದ್ರ ಗೃಹ ಸಚಿವ

ಪುಟ 2ಕ್ಕೆ

# ಅಂಗೀಕೃತ ಮಸೂದೆ ತಡೆಹಿಡಿಯಲು ರಾಷ್ಟ್ರಪತಿ, ರಾಜ್ಯಪಾಲರಿಗೆ ಅನಿಯಂತ್ರಿತ ಅಧಿಕಾರವಿಲ್ಲ

## ವಿಧಾನಸಭೆ ಅಂಗೀಕರಿಸಿದ ಮಸೂದೆ ತಡೆಯುವಂತಿಲ್ಲ: ಸುಪ್ರೀಂ ಕೋರ್ಟ್ ಮಹತ್ವದ ತೀರ್ಪು

**ನವದೆಹಲಿ:** ರಾಜ್ಯ ವಿಧಾನಸಭೆಗಳು ಅಂಗೀಕರಿಸಿದ ಮಸೂದೆಗಳನ್ನು ರಾಷ್ಟ್ರಪತಿಗಳು ಮತ್ತು ರಾಜ್ಯಪಾಲರು ಅನಿರ್ದಿಷ್ಟ ಅವಧಿಯವರೆಗೆ ಒಪ್ಪಿಗೆ ನೀಡದೆ ತಡೆಹಿಡಿಯುವಂತಿಲ್ಲ ಎಂದು ಸುಪ್ರೀಂ ಕೋರ್ಟ್ ಗುರುವಾರ ಮಹತ್ವದ ತೀರ್ಪು ನೀಡಿದೆ.

ರಾಷ್ಟ್ರಪತಿ ದ್ರೌಪದಿ ಮುರ್ಮು ಅವರ 143 (1)ನೇ ವಿಧಿಯಡಿಯಲ್ಲಿ ಉಲ್ಲೇಖಿಸಲಾದ ಅರ್ಜಿ ಕುರಿತು ಮುಖ್ಯ ನ್ಯಾಯಮೂರ್ತಿ ಬಿ.ಆರ್.ಗವಾಯಿ ನೇತೃತ್ವದ ಐವರು ನ್ಯಾಯಾಧೀಶರನ್ನೊಳಗೊಂಡ ಸಂವಿಧಾನ ಪೀಠ ಈ ತೀರ್ಪು ನೀಡಿದೆ. ರಾಜ್ಯ ವಿಧಾನಸಭೆಗಳು

### ಸಮಯ ಮಿತಿ ಅಸಾಧ್ಯ

ಸಂವಿಧಾನದ 200ನೇ ವಿಧಿಯ ಅಡಿಯಲ್ಲಿ ಮಸೂದೆಗಳಿಗೆ ಒಪ್ಪಿಗೆ ನೀಡಲು ನಿರ್ಧರಿಸುವಾಗ ರಾಜ್ಯಪಾಲರು ವಿವೇಚನೆ ಹೊಂದಿರುತ್ತಾರೆ. ಮಸೂದೆಗಳಿಗೆ ಒಪ್ಪಿಗೆ ನೀಡುವಲ್ಲಿ ಸಂಪುಟದ ಸಹಾಯ ಮತ್ತು ಸಲಹೆಯಂತೆ ಕಾರ್ಯನಿರ್ವಹಿಸಬೇಕಾಗಿಲ್ಲ ಎಂದು ಸುಪ್ರೀಂ ಕೋರ್ಟ್ ಅಭಿಪ್ರಾಯಪಟ್ಟಿದೆ. ಆದರೂ ರಾಜ್ಯಪಾಲರು ಒಪ್ಪಿಗೆ ನೀಡದೆ ತಡೆಹಿಡಿದರೆ,

ಪುಟ 2ಕ್ಕೆ

### ರಾಷ್ಟ್ರಪತಿ ಉಲ್ಲೇಖಿಸಿದ್ದ ಪ್ರಶ್ನೆಗಳು



- ಭಾರತದ ಸಂವಿಧಾನದ 200ನೇ ವಿಧಿಯ ಅಡಿಯಲ್ಲಿ ಮಸೂದೆಯನ್ನು ಮಂಡಿಸಿದಾಗ ರಾಜ್ಯಪಾಲರ ಮುಂದೆ ಇರುವ ಸಾಂವಿಧಾನಿಕ ಆಯ್ಕೆಗಳು ಯಾವುವು?
- ರಾಜ್ಯಪಾಲರು, ಆರ್ಟಿಕಲ್ 200ರ ಅಡಿಯಲ್ಲಿ ಲಭ್ಯವಿರುವ ಎಲ್ಲಾ

ಪುಟ 2ಕ್ಕೆ



ಅಂಗೀಕರಿಸಿದ ಮಸೂದೆಗಳನ್ನು ಪರಿಶೀಲಿಸಲು ರಾಷ್ಟ್ರಪತಿಗಳು ಮತ್ತು ರಾಜ್ಯಪಾಲರಿಗೆ ಅನಿಯಂತ್ರಿತ ಅಧಿಕಾರ ಇರುವುದಿಲ್ಲ ಎಂದು ಪೀಠ ತಿಳಿಸಿದೆ.

ಪುಟ 2ಕ್ಕೆ

## ಡಿಕೆಶಿ ಬಣದ 'ದೆಹಲಿ ಯಾತ್ರೆ'

### ರಾಜ್ಯ ರಾಜಕೀಯದಲ್ಲಿ ಅಚ್ಚರಿಯ ದಿಢೀರ್ ಬೆಳವಣಿಗೆ

**ಬೆಂಗಳೂರು:** ಅಧಿಕಾರ ಹಂಚಿಕೆ ಚರ್ಚೆ ನಡುವೆಯೇ ರಾಜ್ಯ ರಾಜಕೀಯದಲ್ಲಿ ದಿಢೀರ್ ಬೆಳವಣಿಗೆ ನಡೆದಿದೆ. ಡಿಸಿಎಂ ಡಿ.ಕೆ.ಶಿವಕುಮಾರ್ ಬೆಂಬಲಿಗ ಸಚಿವರು ಮತ್ತು ಶಾಸಕರು ಗುರುವಾರ ದೆಹಲಿಗೆ ಹಾರಿದ್ದಾರೆ.



ಸಚಿವ ಚಲುವರಾಯಸ್ವಾಮಿ, ಶಾಸಕರಾದ ಇಕ್ಬಾಲ್ ಹುಸೇನ್, ಮಾಗಡಿ ಬಾಲಕೃಷ್ಣ, ಗುಬ್ಬಿ ಶ್ರೀನಿವಾಸ, ರವಿ ಗಣಿಗ, ಉದಯ್ ಗೌಡ ಹೈಕಮಾಂಡ್ ಭೇಟಿಗೆ ತೆರಳಿದ್ದಾರೆ. ಡಿ.ಕೆ.ಶಿವಕುಮಾರ್ ಹೈಕಮಾಂಡ್ ಮುಂದೆ ದೆಹಲಿಯಲ್ಲಿ ಶಕ್ತಿ ಪ್ರದರ್ಶನ ಮಾಡಲಿದ್ದಾರೆ ಎನ್ನಲಾಗಿದೆ. ರಾಜ್ಯದ ಪ್ರಸಕ್ತ ಬೆಳವಣಿಗೆಗಳ ಹಿನ್ನೆಲೆ ಯಲ್ಲಿ ಸಚಿವ, ಶಾಸಕರು ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಕೆ.ಸಿ.ವೇಣುಗೋಪಾಲ್ ಭೇಟಿಗೆ ಸಮಯ ಕೇಳಿದ್ದಾರೆ. ಇವತ್ತು 8 ಜನರ ಒಂದು ತಂಡ ಪ್ರಯಾಣ ಬೆಳೆಸಿದರೆ ನಾಳೆ 7 ಜನರ ತಂಡ ದೆಹಲಿಗೆ ಪ್ರಯಾಣ ಬೆಳೆಸಲು ಪ್ಲ್ಯಾನ್ ಮಾಡಿಕೊಂಡಿದೆ


## 'ಗಮ್ಚಾ' ಬೀಸಿದ ಮೋದಿ

**ಪಾಟ್ನಾ:** ಬಿಹಾರ ವಿಧಾನಸಭಾ ಚುನಾವಣೆಯಲ್ಲಿ ಎನ್‌ಡಿಎ ಮೈತ್ರಿಕೂಟದ ಭರ್ಜರಿ ಗೆಲುವಿನ ನಂತರ ಜೆಡಿಯು ಮುಖ್ಯಸ್ಥ ನಿತೀಶ್ ಕುಮಾರ್ ಗುರುವಾರ ಮುಖ್ಯಮಂತ್ರಿಯಾಗಿ ಪ್ರಮಾಣ ವಚನ ಸ್ವೀಕರಿಸಿದ ಸಂದರ್ಭದಲ್ಲಿ ಪ್ರಧಾನಿ ಮೋದಿ ಅವರು 'ಗಮ್ಚಾ' (ತೆಳುವಾದ ಶಾಲು) ಬೀಸುವ ಮೂಲಕ ಬಿಹಾರದ ಜನರಿಗೆ ಧನ್ಯವಾದ ಅರ್ಪಿಸಿದರು.



## ಬೀದಿ ನಾಯಿ ದಾಳಿಯಿಂದ ಮೃತಪಟ್ಟರೆ 5 ಲಕ್ಷ ಪರಿಹಾರ: ಸರ್ಕಾರ ಆದೇಶ

**ಬೆಂಗಳೂರು:** ಬೀದಿ ನಾಯಿಗಳ ದಾಳಿಗೆ ತುತ್ತಾಗಿ ಗಾಯಗೊಂಡವರಿಗೆ ಐದು ಸಾವಿರ ಹಾಗೂ ಮೃತಪಟ್ಟವರಿಗೆ 5 ಲಕ್ಷ ರೂ. ಪರಿಹಾರ ನೀಡಲಾಗುವುದು ಎಂದು ರಾಜ್ಯ ಸರಕಾರ ಆದೇಶ ಹೊರಡಿಸಿದೆ.



ಬೀದಿ ನಾಯಿಗಳ ದಾಳಿಗೆ ತುತ್ತಾಗಿ ಗಾಯಗೊಂಡವರಿಗೆ ನೀಡುವ ಪರಿಹಾರ ಹಣದಲ್ಲಿ ಚಿಕಿತ್ಸೆ ವೆಚ್ಚವಾಗಿ 1,500 ರೂ. ಹಾಗೂ ಗಾಯ ಗೊಂಡ ಸಂತ್ರಸ್ತರಿಗೆ 3,500 ರೂ. ಪಾವತಿಯಾಗಲಿದೆ. ಬೀದಿ ನಾಯಿಗಳ ದಾಳಿಯಿಂದ ಮೃತಪಟ್ಟ ವರಿಗೆ ಅಥವಾ ರೇಬೀಸ್‌ನಿಂದ ಮೃತಪಟ್ಟವರಿಗೆ 5 ಲಕ್ಷ ರೂ. ಪರಿಹಾರ ನೀಡಲಾಗುತ್ತದೆ. ಗ್ರೇಟರ್ ಬೆಂಗಳೂರು ಪ್ರಾಧಿಕಾರ ವ್ಯಾಪ್ತಿಯಲ್ಲಿ ಬೀದಿ ನಾಯಿಗಳ ಕಡಿತಕ್ಕೆ ಒಳಗಾಗುವ ನಾಗರಿಕರಿಗೆ ಸಂಬಂಧಿಸಿದಂತೆ, ಪರಿಶೀಲನಾ ಮತ್ತು ಪರಿಹಾರಧನ ವಿತರಿಸುವ ಸಮಿತಿಯನ್ನು ರಚಿಸಲಾಗುತ್ತದೆ ಎಂದು ಆದೇಶದಲ್ಲಿ ತಿಳಿಸಲಾಗಿದೆ.

## ಮುಡಾ ಹಗರಣ: ದಿನೇಶ್ ಕುಮಾರ್ ವಿರುದ್ಧ ಇಡಿ ಪ್ರಾಸಿಕ್ಯೂಷನ್ ದೂರು

**ಬೆಂಗಳೂರು:** ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ (ಮುಡಾ) ನಿವೇಶನಗಳನ್ನು ಅಕ್ರಮವಾಗಿ ಹಂಚಿಕೆ ಮಾಡಿದ ಪ್ರಕರಣದಲ್ಲಿ ಮುಡಾ ಮಾಜಿ ಆಯುಕ್ತ ಜಿ.ಟಿ.ದಿನೇಶ್ ಕುಮಾರ್ ವಿರುದ್ಧ ಜಾರಿ ನಿರ್ದೇಶನಾಲಯವು ಪ್ರಾಸಿಕ್ಯೂಷನ್ ದೂರು ದಾಖಲಿಸಿದೆ.



ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯದಲ್ಲಿ ದೂರು ದಾಖಲಿಸಿರುವ ಜಾರಿ ನಿರ್ದೇಶನಾಲಯ (ಇ.ಡಿ), ದಿನೇಶ್ ಕುಮಾರ್ ತಮ್ಮ ಅಧಿಕಾರವನ್ನು ದುರುಪಯೋಗ ಮಾಡಿಕೊಂಡು, ಅಕ್ರಮವಾಗಿ ನೂರಾರು ನಿವೇಶನಗಳನ್ನು ಹಂಚಿಕೆ ಮಾಡಿದ್ದಾರೆ ಎಂದು ವಿವರಿಸಿದೆ.

ಮುಖ್ಯಮಂತ್ರಿ ಸಿದ್ದರಾಮಯ್ಯ ಪತ್ನಿ ಪಾರ್ವತಿಯವರು ಕಳೆದುಕೊಂಡ ಭೂಮಿಗೆ ಪರಿಹಾರಾತ್ಮಕವಾಗಿ 14 ನಿವೇಶನಗಳನ್ನು ಹಂಚಿಕೆ ಮಾಡಿದ್ದ ಪ್ರಕರಣದ ತನಿಖೆ ಆರಂಭಿಸಿದ್ದ ಇ.ಡಿಯು, 1,000ಕ್ಕೂ ಹೆಚ್ಚು ನಿವೇಶನಗಳನ್ನು ಅಕ್ರಮವಾಗಿ ಹಂಚಿಕೆ ಮಾಡಿರುವುದನ್ನು ಪತ್ತೆ ಮಾಡಿತ್ತು. ದಿನೇಶ್ ಸುಪರ್ದಿಯಲ್ಲೇ ಈ ಅಕ್ರಮಗಳೆಲ್ಲವೂ ನಡೆದಿವೆ.

## ಕೃಷಿ ಸಚಿವರ ಸಭೆ ಕರೆದ ಮುಖ್ಯಮಂತ್ರಿ

**ಬೆಂಗಳೂರು:** ರಾಜ್ಯ ಸರ್ಕಾರಕ್ಕೆ ಎರಡೂವರೆ ವರ್ಷ ಪೂರ್ಣ ಆಗುತ್ತಿದ್ದಂತೆ ಅಧಿಕಾರ ಹಂಚಿಕೆಯ ರಣ ರೋಚಕ ಲಕ್ಷಣಗಳು ಗೋಚರಿಸಲಾರಂಭಿಸಿದೆ. ಚಲುವರಾಯಸ್ವಾಮಿ ದೆಹಲಿಗೆ ಹೋಗುತ್ತಿದ್ದಂತೆ ಸಿಎಂ ಸಿದ್ದರಾಮಯ್ಯ ದಾಳ ಪ್ರಯೋಗಿಸಿದ್ದಾರೆ. ನಾಳೆ ಕೃಷಿ ಸಚಿವರ ಜೊತೆ ಸಭೆ ಕರೆದಿದ್ದಾರೆ.



ಡಿ.ಕೆ.ಶಿವಕುಮಾರ್ ಬೆಂಬಲಿಸುವ ಸಚಿವರು ಮತ್ತು ಶಾಸಕರು ಶಕ್ತಿ


ಪುಟ 2ಕ್ಕೆ

## ಮೇಕೆದಾಟು: 1079 ಹೆಕ್ಟೇರ್ ಭೂಮಿ ಅಗತ್ಯ

### ಮಂಡ್ಯ ಜಿಲ್ಲಾಧಿಕಾರಿ ಡಾ.ಕುಮಾರ್ ಅಧ್ಯಕ್ಷತೆಯಲ್ಲಿ ಸಭೆ

ಮಂಡ್ಯ: ಮೇಕೆದಾಟು ಯೋಜನೆಗೆ ಜಿಲ್ಲೆಯ 1079 ಹೆಕ್ಟೇರ್ ಪ್ರದೇಶದ ಅಗತ್ಯ ಇದೆ ಎಂದು ಜಿಲ್ಲಾಧಿಕಾರಿ ಡಾ.ಕುಮಾರ ಗುರುವಾರ ಹೇಳಿದರು.

ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ ಮೇಕೆದಾಟು ಸಮತೋಲನ ಜಲಾಶಯ ಹಾಗೂ ಕುಡಿಯುವ ನೀರಿನ ಯೋಜನೆ ಅನುಷ್ಠಾನಕ್ಕೆ ಸಂಬಂಧಿಸಿದಂತೆ ಚರ್ಚಿಸಲು ಆಯೋಜಿಸಲಾಗಿದ್ದ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು ಮಳವಳ್ಳಿ ತಾಲ್ಲೂಕಿನ 5 ಗ್ರಾಮಗಳಲ್ಲಿ 1079 ಹೆಕ್ಟೇರ್ ಅರಣ್ಯ ಪ್ರದೇಶ ಮುಳುಗಡೆಯಾಗುತ್ತದೆ ಅದಕ್ಕೆ ಬದಲಿಯಾಗಿ 1:2 ಅನುಪಾತದಲ್ಲಿ ಜಿಲ್ಲೆಯ 2204 ಹೆಕ್ಟೇರ್ ಜಾಗವನ್ನು ಅರಣ್ಯ ಇಲಾಖೆಗೆ ನೀಡಲು ಜಾಗ ಗುರುತಿಸಲಾಗಿತ್ತು. ಈ ಹಿಂದೆ ಗುರುತಿಸಲಾದ 2204 ಹೆಕ್ಟೇರ್ ಜಾಗವನ್ನು ತೆಗೆದುಕೊಳ್ಳಲಾಗುತ್ತಿಲ್ಲ ಎಂದು ತಿಳಿಸಿದರು. ಅರಣ್ಯ ಇಲಾಖೆಗೆ 1:1 ಅನುಪಾತದಲ್ಲಿ 1079 ಹೆಕ್ಟೇರ್ ಅರಣ್ಯೇತರ ಜಾಗ, ಗೊಮಾಳ, ಸರ್ಕಾರಿ ಜಾಗಗಳನ್ನು ನೀಡಬೇಕು. ಈಗಾಗಲೇ ಪಾಂಡವಪುರ ಮತ್ತು ನಾಗಮಂಗಲದಲ್ಲಿ 307 ಹೆಕ್ಟೇರ್ ಪ್ರದೇಶವನ್ನು ಗುರುತಿಸಲಾಗಿದ್ದು ಅರಣ್ಯ ಇಲಾಖೆಯೂ ಸಹ ಸದರಿ



ಜಾಗಕ್ಕೆ ಸೂಕ್ತತೆ ಪ್ರಮಾಣ ಪತ್ರ ನೀಡಿದೆ ಎಂದರು.

ಬಾಕಿ ಉಳಿದ 757 ಹೆಕ್ಟೇರ್ ಜಾಗವನ್ನು ಗುರುತಿಸಿ ಅರಣ್ಯ ಇಲಾಖೆಗೆ ನೀಡಬೇಕು. ಅಧಿಕಾರಿಗಳು ತಾಲ್ಲೂಕುವಾರು ತಂಡ ರಚಿಸಿ ಉಳಿದ 757 ಹೆಕ್ಟೇರ್ ಜಾಗವನ್ನು ಗುರುತಿಸಿ 15 ದಿನಗಳೊಳಗಾಗಿ ಸೂಕ್ತತೆ ಪ್ರಮಾಣ ಪಡೆಯಬೇಕು. ಉಪ ಮುಖ್ಯಮಂತ್ರಿಗಳು ಪ್ರತಿ 15 ದಿನಗಳಿಗೊಮ್ಮೆ ಮೇಕೆದಾಟು ಯೋಜನೆ ಕುರಿತು ಸಭೆ ನಡೆಸುತ್ತೇನೆ ಎಂದು ತಿಳಿಸಿದ್ದಾರೆ. ತಾಲ್ಲೂಕು ಮಟ್ಟದಲ್ಲಿ ತಹಶೀಲ್ದಾರ್, ಎ.ಸಿ.ಎಫ್. ಎ.ಡಿ.ಎಲ್.ಆರ್ ಮತ್ತು ಕಾವೇರಿ ನಿರಾವರಿ ನಿಗಮದ

ಪುಟ 2ಕ್ಕೆ

# ಧರ್ಮಸ್ಥಳ ಪ್ರಕರಣ: ಎಸ್‌ಐಟಿ ವರದಿ

## ಬೆಳಗಾವಿ ಅಧಿವೇಶನದಲ್ಲಿ ಚರ್ಚೆ: ಗೃಹಸಚಿವ ಜಿ.ಪರಮೇಶ್ವರ್ ಭರವಸೆ

**ಬೆಂಗಳೂರು:** ಧರ್ಮಸ್ಥಳ ಪ್ರಕರಣ ಸಂಬಂಧ ಸರ್ಕಾರಕ್ಕೂ ವಿಶೇಷ ತನಿಖಾ ತಂಡ (ಎಸ್‌ಐಟಿ) ವರದಿ ನೀಡಲಿದೆ. ಬೆಳಗಾವಿ ಅಧಿವೇಶನದಲ್ಲಿ ಅದರಲ್ಲಿನ ಅಂಶಗಳ ಬಗ್ಗೆ ಚರ್ಚಿಸಲಾಗುವುದು ಎಂದು ಗೃಹ ಸಚಿವ ಜಿ.ಪರಮೇಶ್ವರ್ ತಿಳಿಸಿದರು.



ಸುದ್ದಿಗಾರರ ಜೊತೆ ಗುರುವಾರ ಮಾತನಾಡಿದ ಅವರು, ಧರ್ಮಸ್ಥಳ ಪ್ರಕರಣ ಸಂಬಂಧ ಎಸ್‌ಐಟಿ ಅಧಿಕಾರಿಗಳು ನ್ಯಾಯಾಲಯಕ್ಕೆ ಆರೋಪ ಪಟ್ಟಿ ಸಲ್ಲಿಸಲಿದ್ದಾರೆ. ಅದರಲ್ಲಿ ಏನಿದೆ, ಸತ್ಯ ಏನು ಎಲ್ಲವೂ ಗೊತ್ತಾಗಲಿದೆ. ಸರ್ಕಾರಕ್ಕೂ ಅವರು ವರದಿ ಕೊಡುತ್ತಾರೆ. ವರದಿ ಬಂದ ಬಳಿಕ ಈ ಪ್ರಕರಣದಲ್ಲಿ ಏನು ಷಡ್ಯಂತ್ರ ನಡೆದಿದೆ, ಯಾರೆಲ್ಲಾ ಕಾರಣ ಎಂಬುದು ಗೊತ್ತಾಗಲಿದೆ ಎಂದರು.

ಮಹತ್ವ ಕೊಡಬೇಕಿಲ್ಲ: ಸರ್ಕಾರಕ್ಕೆ ಎರಡೂವರೆ ವರ್ಷ ತುಂಬಿದ ವಿಚಾರವಾಗಿ ಮಾತನಾಡಿದ ಅವರು, ಸರ್ಕಾರಕ್ಕೆ ಎರಡೂವರೆ ವರ್ಷ ಆಗಿದೆ. ಎರಡೂವರೆ ವರ್ಷವೆಂದು ಮಹತ್ವ ಏನೂ ಕೊಡಬೇಕಿಲ್ಲ ಎಂದರು. ಅಧಿಕಾರ ಹಸ್ತಾಂತರದ ಬಗ್ಗೆ ಹೈಕಮಾಂಡ್ ಹೇಳಿಲ್ಲ. ಹೈಕಮಾಂಡ್ ಹೇಳಿದರೆ ಅದಕ್ಕೆ ಮಹತ್ವ ಬರುತ್ತದೆ. ಇದುವರೆಗೆ ಎಲ್ಲೂ ಹೈಕಮಾಂಡ್ ನಮಗೆ ತಿಳಿಸಿಲ್ಲ. ಸಿಎಲ್‌ಪಿ ಸಭೆಯಲ್ಲೂ ಆ ವಿಚಾರ ಚರ್ಚೆಗೆ ಬಂದಿಲ್ಲ. ಹೀಗಾಗಿ ಅದಕ್ಕೆ ಮಹತ್ವ ಯಾಕೆ ಕೊಡಬೇಕು ಎಂದು ಪ್ರಶ್ನಿಸಿದರು.

### ಕೋರ್ಟ್‌ಗೆ ವರದಿ ಸಲ್ಲಿಕೆ

**ಬೆಳ್ತಂಗಡಿ:** ಧರ್ಮಸ್ಥಳ ತಲೆಬುರುಡೆ ಪ್ರಕರಣದಲ್ಲಿ ಎಸ್‌ಐಟಿ 4 ಸಾವಿರ ಪುಟಗಳ ತನಿಖಾ ವರದಿಯನ್ನು ಬೆಳ್ತಂಗಡಿ ಕೋರ್ಟ್‌ಗೆ ಸಲ್ಲಿಸಿದೆ. ತನಿಖಾ ವರದಿಯಲ್ಲಿ ಅನೇಕ ಅಚ್ಚರಿಯ ಮಾಹಿತಿಯನ್ನೊಳಗೊಂಡ ವಿವರಗಳನ್ನು ಉಲ್ಲೇಖಿಸಲಾಗಿದೆ. ಹೆಣಗಳನ್ನು ಹೂತುಹಾಕಿದ್ದೆ ಎಂದು ಹೇಳಿಕೊಂಡಿದ್ದ ಚಿನ್ನಯ್ಯ, ಮಹೇಶ್ ಶೆಟ್ಟಿ ತಿಮರೋಡಿ, ಗಿರೀಶ್ ಮಟ್ಟಣ್ಣನವರ್, ಸುಜಾತಾ ಭಟ್ ಸೇರಿದಂತೆ ಒಟ್ಟು 6 ಮಂದಿ ಹೆಸರನ್ನು ಉಲ್ಲೇಖಿಸಲಾಗಿದೆ. ಸುಳ್ಳು ಸಾಕ್ಷ್ಯದ ಕುರಿತ ಪ್ರಕರಣದ ತನಿಖಾ ವರದಿ ಇದಾಗಿದ್ದು, ಸುಮಾರು 4 ಸಾವಿರ ಪುಟಗಳನ್ನು ಹೊಂದಿದೆ.

**ಮೊದಲ ಪುಟದಿಂದ**

## ಅನಿಯಂತ್ರಿತ ಅಧಿಕಾರವಿಲ್ಲ

ಈ ಬಗ್ಗೆ ಸರ್ವಾನುಮತದ ತೀರ್ಪು ನೀಡಿರುವ ಸುಪ್ರೀಂ ಕೋರ್ಟ್‌ನ ಐವರು ನ್ಯಾಯಮೂರ್ತಿಗಳ ಸಾಂವಿಧಾನಿಕ ಪೀಠ, ಸಂವಿಧಾನದ 200ನೇ ವಿಧಿಯಡಿ ನೀಡಿರುವ ಅಧಿಕಾರವನ್ನು ಮೀರಿ ರಾಜ್ಯಪಾಲರು ವರ್ತಿಸುವಂತಿಲ್ಲ ಎಂದು ತಿಳಿಸಿದೆ. ರಾಜ್ಯ ವಿಧಾನಸಭೆಗಳು ಒಪ್ಪಿಗೆ ನೀಡಿರುವ ಮಸೂದೆಗಳ ಮೇಲೆ ಕುಳಿತುಕೊಳ್ಳುವ ಮುಕ್ತ ಅಧಿಕಾರ ರಾಜ್ಯಪಾಲರಿಗೆ ಇಲ್ಲ ಎಂದು ಮುಖ್ಯ ನ್ಯಾಯಮೂರ್ತಿ ಬಿ.ಆರ್ ಗವಾಯಿ ಅವರ ನೇತೃತ್ವದ ಪೀಠ ಅಭಿಪ್ರಾಯಪಟ್ಟಿತು.

ಸಂವಿಧಾನ ರಕ್ಷಿಸುವಲ್ಲಿ ರಾಷ್ಟ್ರಪತಿ ಪಾತ್ರವು ಸಂಘಟಿತ ಘಟಕವಾಗಿ ಒಕ್ಕೂಟದ ಮೇಲೆ ಬದ್ಧವಾಗಿದೆ. ರಾಜ್ಯಪಾಲರು ಮಸೂದೆಯನ್ನು ತಮ್ಮ ಒಪ್ಪಿಗೆಗಾಗಿ ಕಾಯ್ದಿರಿಸದ ಹೊರತು ರಾಷ್ಟ್ರಪತಿಗಳು ಈ ಆಯ್ಕೆಯನ್ನು ಚಲಾಯಿಸಲು ಸಾಧ್ಯವಾಗುವುದಿಲ್ಲ. ಮಂತ್ರಿ ಮಂಡಳ ಮಸೂದೆಯನ್ನು ಹಿಂತಿರುಗಿಸಲು ಅಥವಾ ರಾಷ್ಟ್ರಪತಿಗೆ ಉಲ್ಲೇಖಿಸಲು ರಾಜ್ಯಪಾಲರಿಗೆ ಸಲಹೆ ನೀಡುವ ಸಾಧ್ಯತೆಯಿಲ್ಲ. 200ನೇ ವಿಧಿಯ ಅಡಿಯಲ್ಲಿ ರಾಜ್ಯಪಾಲರಿಗೆ ವಿವೇಚನೆಯ ಅಧಿಕಾರವಿಲ್ಲ ಎಂದು ಹೇಳುವುದು ಅಸಂಭವವಾಗಿದೆ ಎಂದು ಪೀಠ ಹೇಳಿದೆ.

ವಿಚಾರಣೆ ಸಮಯದಲ್ಲಿ, ಕೇಂದ್ರದ ಪರವಾಗಿ ಹಾಜರಾದ ಸಾಲಿಸಿಟರ್ ಜನರಲ್ ತುಷಾರ್ ಮೆಹ್ತಾ, ಏಪ್ರಿಲ್ 8ರ ತೀರ್ಪನ್ನು ಮಾರ್ಪಡಿಸುವಂತೆ ನ್ಯಾಯಾಲಯವನ್ನು ಕೋರಿದರು. ತಮಿಳುನಾಡು, ಕೇರಳ, ತೆಲಂಗಾಣ, ಆಂಧ್ರಪ್ರದೇಶ ಮತ್ತು ಕರ್ನಾಟಕ ಸೇರಿದಂತೆ ಹಲವಾರು ರಾಜ್ಯಗಳು ರಾಷ್ಟ್ರಪತಿಗಳ ಉಲ್ಲೇಖವನ್ನು ವಿರೋಧಿಸಿ ಏಪ್ರಿಲ್ 8ರ ತೀರ್ಪನ್ನು ಸಮರ್ಥಿಸಿಕೊಂಡವು. ರಾಜ್ಯಪಾಲರು ಮತ್ತು ರಾಷ್ಟ್ರಪತಿಗಳ ಮೇಲೆ ವಿಧಿಸಲಾದ ಸಮಯ ಮಿತಿಗಳನ್ನು ಉಲ್ಲಂಘಿಸಬಾರದು ಎಂದು ಒತ್ತಾಯಿಸಿದವು.

## ರಾಷ್ಟ್ರಪತಿ ಉಲ್ಲೇಖಿಸಿದ್ದ ಪ್ರಶ್ನೆಗಳು

**▸▸ ಆಯ್ಕೆಗಳನ್ನು ಚಲಾಯಿಸುವಾಗ, ಮಂತ್ರಿ ಮಂಡಳ ನೀಡುವ ನೆರವು ಮತ್ತು ಸಲಹೆಗೆ ಬದ್ಧರಾಗಿದ್ದಾರೆಯೇ?**

**▸▸ ಆರ್ಟಿಕಲ್ 200ರ ಅಡಿಯಲ್ಲಿ ರಾಜ್ಯಪಾಲರು ಸಾಂವಿಧಾನಿಕ ವಿವೇಚನೆಯನ್ನು ಚಲಾಯಿಸುವುದು ನ್ಯಾಯಸಮ್ಮತವೇ?**

**▸▸ ಆರ್ಟಿಕಲ್ 200ರಡಿಯಲ್ಲಿ ರಾಜ್ಯಪಾಲರ ಕ್ರಮಗಳ ನ್ಯಾಯಾಂಗ ಪರಿಶೀಲನೆಗೆ ಆರ್ಟಿಕಲ್ 361 ಸಂಪೂರ್ಣ ನಿರ್ಬಂಧವೇ?**

**ಸಾಂವಿಧಾನಿಕವಾಗಿ ಸೂಚಿಸಲಾದ ಸಮಯದ ಮಿತಿ ಇಲ್ಲದಿರುವಾಗ, ಸಮಯ ಮಿತಿಗಳನ್ನು ವಿಧಿಸಬಹುದೇ ಮತ್ತು ಆರ್ಟಿಕಲ್ 200ರಡಿ ಅಧಿಕಾರಗಳನ್ನು ಚಲಾಯಿಸುವ ವಿಧಾನವನ್ನು ನ್ಯಾಯಾಂಗ ಆದೇಶಗಳ ಮೂಲಕ ಸೂಚಿಸಬಹುದೇ? ಎಂದು ರಾಷ್ಟ್ರಪತಿ ಪ್ರಶ್ನಿಸಿದ್ದರು.**

## ನಿತೀಶ್ ಕುಮಾರ್ ಪ್ರಮಾಣ

ಅಮಿತ್ ಶಾ, ರಕ್ಷಣಾ ಸಚಿವ ರಾಜನಾಥ್ ಸಿಂಗ್, ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ. ನಡ್ಡಾ, ಇತರ ಹಲವಾರು ಕೇಂದ್ರ ಸಚಿವರು ಮತ್ತು 11 ಎನ್‌ಡಿಎ–ಬಿಜೆಪಿ ಆಡಳಿತದ ರಾಜ್ಯಗಳ ಮುಖ್ಯಮಂತ್ರಿಗಳು ಭಾಗವಹಿಸಿದ್ದರು. 243 ಸದಸ್ಯರ ವಿಧಾನಸಭೆಯಲ್ಲಿ ಎನ್‌ಡಿಎ 202 ಸ್ಥಾನಗಳನ್ನು ಗೆದ್ದುಕೊಂಡಿದ್ದು, ಬಿಜೆಪಿ 89, ಜೆಡಿ(ಯು) 85, ಎಲ್‌ಜೆಪಿ(ಆರ್‌ವಿ) 19, ಎಚ್‌ಎಎಂ 5 ಮತ್ತು ಆರ್‌ಎಲ್‌ಎಂ 4 ಸ್ಥಾನಗಳನ್ನು ಗೆದ್ದುಕೊಂಡಿದೆ.

## ಕ್ರಾಂತಿ 'ಮಾಧ್ಯಮ ಸೃಷ್ಟಿ'

ಹೈಕಮಾಂಡ್‌ಗೆ ಹೇಳಿದ್ದೆ. ಅದರ ನಂತರವೇ ಅಧಿಕಾರ ಹಂಚಿಕೆಯ ಕುರಿತು ಈ ಚರ್ಚೆಗಳು ಪ್ರಾರಂಭವಾದವು ಎಂದರು. ಸಂಪುಟ ಪುನರ್ ರಚನೆಯ ನಿಗದಿ ಮಾಡಿಲಾಗಿದೆಯೇ ಎಂದು ಕೇಳಿದಾಗ, ಈ ಬಗ್ಗೆ ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರು ರಾಹುಲ್ ಗಾಂಧಿ ಅವರೊಂದಿಗೆ ಚರ್ಚೆ ನಡೆಸುತ್ತಿದ್ದಾರೆ ಎಂದು ಹೇಳಿದರು.

**ದರೋಡೆಕೋರರ ಸುಳಿವು:** ಬೆಂಗಳೂರಿನಲ್ಲಿ 7.11 ಕೋಟಿ ರೂಪಾಯಿ ದರೋಡೆ ಮಾಡಿ ಪರಾರಿಯಾಗಿರುವ ದರೋಡೆಕೋರರ ಬಗ್ಗೆ ಪ್ರತಿಕ್ರಿಯಿಸಿದ ಸಿಎಂ, ಅವರ ಬಗ್ಗೆ ಸುಳಿವು ಸಿಕ್ಕಿದೆ. ಕಾರನ್ನು ಈಗಾಗಲೇ ವಶಪಡಿಸಿಕೊಳ್ಳಲಾಗಿದೆ. ಶೀಘ್ರದಲ್ಲೇ ದರೋಡೆಕೋರರನ್ನು ಗುರುತಿಸಿ ಬಂಧಿಸುತ್ತೇವೆ ಎಂದು ಹೇಳಿದರು.

## ಚಾ.ನಗರಕ್ಕೆ ಭೇಟಿ: ಅಧಿಕಾರ ಭದ್ರ

ಐದು ವರ್ಷಗಳಲ್ಲಿ ಜನರಿಗೆ ನೀಡಿದ ಭರವಸೆಗಳನ್ನು ಈಡೇರಿಸಲು ಪ್ರಾಮಾಣಿಕ ಪ್ರಯತ್ನ ನಡೆಸಲಾಗುತ್ತಿದೆ ಎಂದು ಸಿಎಂ ತಿಳಿಸಿದರು.

## ಕೃಷಿ ಸಚಿವರ ಸಭೆ ಕರೆದ ಸಿಎಂ

ಪ್ರದರ್ಶನ ಮಾಡಲು ಗುರುವಾರ ದಿಢೀರ್ ದೆಹಲಿಗೆ ಹಾರಿದ್ದಾರೆ. ಈ ಬಣದ ನಾಯಕತ್ವವನ್ನು ಕೃಷಿ ಸಚಿವ ಚಲುವರಾಯಸ್ವಾಮಿ ವಹಿಸಿಕೊಂಡಿದ್ದಾರೆ. ಚಲುವರಾಯಸ್ವಾಮಿ ದೆಹಲಿಗೆ ಹೋದ ಬೆನ್ನಲ್ಲೇ ಸಿಎಂ ಅಲರ್ಟ್ ಆಗಿದ್ದಾರೆ. ಇಂದು ರಾತ್ರಿ ಸಿದ್ದರಾಮಯ್ಯ ಮೈಸೂರಿನಲ್ಲಿ ವಾಸ್ತವ್ಯ ಹೂಡಬೇಕಿತ್ತು. ಆದರೆ ಸಿಎಂ ಮೈಸೂರು ವಾಸ್ತವ್ಯ ರದ್ದು ಮಾಡಿದ್ದಾರೆ. ಶುಕ್ರವಾರ ಬೆಳಗ್ಗೆ 10:30ಕ್ಕೆ ಕಾವೇರಿ ನಿವಾಸದಲ್ಲಿ ಕೃಷಿ ಸಚಿವರ ಜೊತೆ ಮೆಕ್ಕೆಜೋಳ ಖರೀದಿಸುವ ಸಂಬಂಧ ತುರ್ತು ಸಭೆ ಕರೆದಿದ್ದಾರೆ. ಹೆಸರಿಗೆ ಮೆಕ್ಕೆಜೋಳದ ಸಭೆಯನ್ನು ಕರೆದಿದ್ದರೂ ದೆಹಲಿ ಯಾತ್ರೆಯ ಒಗ್ಗಟ್ಟು ಮುರಿಯಲೆಂದೇ ಸಭೆ ಕರೆಯಲಾಗಿದೆ ಎನ್ನಲಾಗಿದೆ. ಈಗಾಗಲೇ ಡಿಕೆಶಿ ಬಣದ ಬೆಂಬಲಿಗರ ನಾಯಕತ್ವ ಹೊತ್ತಿರುವ ಚಲುವರಾಯ ಸ್ವಾಮಿ ಸಿಎಂ ಮಾತಿಗೆ ಬೆಲೆ ನೀಡಿ ದೆಹಲಿಯಿಂದ ಮತ್ತೆ ಬೆಂಗಳೂರಿಗೆ ಮರಳುತ್ತಾರೋ? ಇಲ್ವೋ ಎನ್ನುವ ಕುತೂಹಲ ಹೆಚ್ಚಾಗಿದೆ.

## ಪ್ರಾಸಿಕ್ಯೂಷನ್ ದೂರು

ನಿವೇಶನ ಹಂಚಿಕೆ ಮಾಡಿದ್ದಕ್ಕೆ ಪ್ರತಿಯಾಗಿ ದಿನೇಶ್ ಅವರು ಬಂಗಲೆ, ಕೃಷಿ ಜಮೀನು, ವಾಣಿಜ್ಯ ಸಂಕೀರ್ಣ, ಐಷಾರಾಮಿ ಕಾರುಗಳು ಮತ್ತು ಹಣವನ್ನು ಉಡುಗೊರೆಯಾಗಿ ಪಡೆದಿದ್ದರು. ಆ ಹಣದಿಂದ ಮತ್ತಷ್ಟು ಆಸ್ತಿಗಳನ್ನು ಖರೀದಿಸಿದ್ದರು ಎಂದು ಇಡಿ ಆರೋಪಿಸಿದೆ. ಪ್ರಕರಣಕ್ಕೆ ಸಂಬಂಧಿಸಿದಂತೆ ಇ.ಡಿ ಈವರೆಗೆ 252 ನಿವೇಶನಗಳನ್ನು ಮುಟ್ಟುಗೋಲು ಹಾಕಿಕೊಂಡಿದೆ. ಈ ಆಸ್ತಿಗಳ ಒಟ್ಟು ಮಾರುಕಟ್ಟೆ ಮೌಲ್ಯ 400 ಕೋಟಿ ಎಂದು ಅಂದಾಜಿಸಲಾಗಿದೆ.

# ಎಲ್ಲೆಂದರಲ್ಲಿ ಕಸ–ಸಾರ್ವಜನಿಕರ ಹೊಣೆಗಾರಿಕೆ ಏನಾಯ್ತು?

**▸▸ ಬಿ.ವಿ.ಸೂರ್ಯ ಪ್ರಕಾಶ್**

ರಾಮನಗರ: ದಿನ ನಿತ್ಯ 40 ಟನ್ ತ್ಯಾಜ್ಯ! ತಿಂಗಳಿಗೆ 1200 ಟನ್! ಅಬ್ಬ ಇಷ್ಟೊಂದು ತ್ಯಾಜ್ಯವೇ ಎಂದು ಹುಬ್ಬೇರಿಸಿದಿರಾ? ಹೌದು ನಗರವಾಸಿಗಳೆ 40 ಟನ್ ತ್ಯಾಜ್ಯ ನಗರವಾಸಿಗಳಾದ ನಮ್ಮ ದಿನನಿತ್ಯದ ಕೊಡುಗೆ! ಮನೆಯಲ್ಲೇ ತ್ಯಾಜ್ಯ ಉತ್ಪತ್ತಿಯನ್ನು ನಿಯಂತ್ರಿಸುವುದರ ಮೂಲಕ ನಗರಸಭೆಯ ಸ್ವಚ್ಚ ನಗರದ ಕಲ್ಪನೆಗೆ ಸಹಕಾರ ನೀಡುವುದಕ್ಕೆ ನಗರದ ನಾಗರೀಕರು ಇಂದೇ ಸಂಕಲ್ಪಿಸಬೇಕಾಗಿದೆ.

### ಕಸದ ಬುಟ್ಟಿ ಮೂಲಕ ಬೆಳೆಯಲಿ ನಾಗರೀಕತೆ!

ನಾಗರಿಕತೆ ಎನ್ನುವುದು ಸ್ವಚ್ಛ ಮತ್ತು ಶಿಸ್ತಿನ ಸಮಾಜದ ಅಡಿಪಾಯ. ಆದರೆ ಇಂದಿನ ನಮ್ಮ ನಗರಗಳು ಎದುರಿಸುತ್ತಿರುವ ದೊಡ್ಡ ಸವಾಲುಗಳ ಪೈಕಿ ತ್ಯಾಜ್ಯ ಉತ್ಪತ್ತಿ ತಡೆಗಟ್ಟುವುದು ಮತ್ತು ತ್ಯಾಜ್ಯ ವಿಲೇವಾರಿ ಪ್ರಮುಖವಾಗಿವೆ. ನಿರೀಕ್ಷೆಗೂ ಮೀರಿ ತ್ಯಾಜ್ಯ ಉತ್ಪತ್ತಿಯಾಗುತ್ತಿರುವುದರಿಂದ ಸ್ಥಳೀಯ ಸಂಸ್ಥೆಗಳಲ್ಲಿ ವಿಲೇವಾರಿ ಸಂಪನ್ಮೂಲಗಳು ಸಾಲುತ್ತಿಲ್ಲ. ಪರಿಸರಕ್ಕೆ ಹಾನಿಯಾಗದಂತೆ ತ್ಯಾಜ್ಯವನ್ನು ವೈಜ್ಞಾನಿಕ ವಿಲೇವಾರಿ ಮಾಡಲು ನಗರಸಭೆಯ ಜನಪ್ರತಿನಿಧಿಗಳು, ಅಧಿಕಾರಿಗಳು ಮತ್ತು ಪೌರಕಾರ್ಮಿಕರು ಶಕ್ತಿ ಮೀರಿ ಶ್ರಮಿಸುತ್ತಿದ್ದಾರೆ. ತ್ಯಾಜ್ಯ ಉತ್ಪತ್ತಿ ಕಡಿಮೆ ಮಾಡುವ ಮೂಲಕ ನಾಗರೀಕರಾದ ನಾವು ನಗರಸಭೆಗೆ ಸಹಕಾರ ನೀಡಬೇಕಾಗಿದೆ.

### ಸುಂದರ ನಗರ ಕಲ್ಪನೆ ನಗರಸಭೆಗೆ ಮಾತ್ರವೇ?

ತ್ಯಾಜ್ಯ ವಿಲೇವಾರಿ ಸ್ಥಳೀಯ ಸಂಸ್ಥೆಗಳ ಸಾಂವಿಧಾನಿಕ ಹೊಣೆಗಾರಿಕೆ ಹೌದು, ಆದರೆ ತ್ಯಾಜ್ಯ ಉತ್ಪಾದನೆಯನ್ನು ನಿಯಂತ್ರಿಸುವ ವಿಚಾರದಲ್ಲಿ ಬಹುತೇಕ ನಾಗರೀಕರಲ್ಲಿ ಸಂಪೂರ್ಣ ನಿರ್ಲಕ್ಷತೆ ಕಾಣಿಸುತ್ತಿದೆ. ಸ್ವಚ್ಚ ನಗರದ ಕಲ್ಪನೆಯೊಂದಿಗೆ ನಗರಸಭಾಧ್ಯಕ್ಷ ಕೆ.ಶೇಷಾದ್ರಿ ಅಧಿಕಾರ ಸ್ವೀಕರಿಸಿದ್ದರು. ಇದಕ್ಕೆ ನಾಗರೀಕರ ಸಹಕಾರವನ್ನು ಬಯಸಿದ್ದರು. ನಗರದ ಪ್ರಥಮ ಪ್ರಜೆಯ ಕಾಳಜಿಗೆ ನಾಗರೀಕರಿಂದ ಎಷ್ಟು ಸ್ಪಂದನೆ ಸಿಕ್ಕಿದೆ ಎಂಬುದಕ್ಕೆ ಇಂದಿಗೂ ರಸ್ತೆ ಬದಿಯಲ್ಲಿ ಕಾಣ ಸಿಗುವ ಕಸದ ರಾಶಿ ಉತ್ತರವಾಗಿದೆ.

**▸▸ ದಿನ ನಿತ್ಯ 40 ಟನ್ ಕಸ ಉತ್ಪತ್ತಿಯಾರಿಂದ? ನಾಗರೀಕರೋ, ಪೌರಕಾರ್ಮಿಕರೋ?**

**▸▸ ಸ್ವಚ್ಚ ನಗರದ ಮೂಲಕ ಆರಂಭವಾಗಲಿ ನಾಗರಿಕತೆ**

**▸▸ ಸ್ವಚ್ಚ ನಗರಕ್ಕೆ ವರ್ತಮಾನ ಬಳಗದ ಕಾಳಜಿ**

### ಎಚ್ಚರಿಕೆಗೂ ಡೋಂಟ್ ಕೇರ್!

ರಸ್ತೆ ಬದಿಗಳಲ್ಲಿ ತ್ಯಾಜ್ಯ ಬೀಸಾಡುವುದನ್ನು ತಡೆಗಟ್ಟಲು ನಗರಸಭೆಯ ಅಧಿಕಾರಿಗಳು ನಗರಾದ್ಯಂತ 50ಕ್ಕೂ ಹೆಚ್ಚು ಬ್ಲಾಕ್ ಸ್ಪಾಟ್‌ಗಳನ್ನು ಗುರುತಿಸಿದ್ದಾರೆ. ತಪ್ಪತಸ್ಥರನ್ನು ಪತ್ತೆ ಹಚ್ಚಲು ಸಿಸಿ ಕ್ಯಾಮರಾಗಳನ್ನು ಅಳವಡಿಸಿದ್ದಾರೆ. 5 ಸಾವಿರ ರೂ ದಂಡ ವಿಧಿಸುವ ಕಾನೂನು ಕ್ರಮದ ಎಚ್ಚರಿಕೆಯನ್ನು ನೀಡಲಾಗಿದೆ. ನಗರಸಭೆಯ ಈ ಕಠೀಣ ಎಚ್ಚರಿಕೆಗಳಿಗೂ ಕೆಲವರು ಕವಡೆ ಕಾಸಿನ ಕಿಮ್ಮತ್ತು ನೀಡದಿರುವುದು ವಿಪರ್ಯಾಸ. ಖಾಲಿ ನಿವೇಶನಗಳಲ್ಲಿ ತ್ಯಾಜ್ಯ ಎಸೆಯುವುದು ಇನ್ನು ನಿಂತಿಲ್ಲ. ತ್ಯಾಜ್ಯ ವಿಲೇವಾರಿ ವಿಚಾರದಲ್ಲಿ ಸಾರ್ವಜನಿಕರ ಜವಾಬ್ದಾರಿಯ ಕೊರತೆ ಎದ್ದು ಕಾಣುತ್ತಿದೆ ಎಂಬುದು ಅತಿಶಯೋಕ್ತಿ ಅಲ್ಲ.

ರಸ್ತೆಯಲ್ಲಿ ಎಸೆಯುವ ಅಥವಾ ಚರಂಡಿಗೆ ಎಸೆಯುವ ಪ್ರತಿ ಪ್ಲಾಸ್ಟಿಕ್ ಚೀಲ ನಾವು ವಾಸಿಸುವ ಪರಿಸರದ ಮೇಲೆ ಪರಿಣಾಮ ಬೀರಿ ದೊಡ್ಡ ಸಮಸ್ಯೆಗೆ ಕಾರಣವಾಗುತ್ತದೆ ಎಂಬುದನ್ನು ಯಾವ ನಾಗರೀಕನೂ ಮರೆಯಬಾರದು. ಸಮಸ್ಯೆ ಬೃಹದಾಕಾರ ತಳೆದರೆ ನಮ್ಮ ವಾಸದ ಸ್ಥಳಗಳೇ ಕಸದ ಗುಂಡಿಗಳಾಗುತ್ತವೆ ಎಂಬ ಎಚ್ಚರಿಕೆ ಎಲ್ಲರಲ್ಲೂ ಇರಬೇಕಾಗಿದೆ.

### ಒಣ ಕಸ, ಹಸಿ ಕಸ ವಿಂಗಡಿಸಿ ಕೊಡಿ

ಸರಿಯಾದ ರೀತಿಯಲ್ಲಿ ಕಸ ವಿಲೇವಾರಿ ಮಾಡುವುದು ಕಷ್ಟದ ಕೆಲಸವಲ್ಲ. ಒಣ ಮತ್ತು ಹಸಿ ಕಸವನ್ನು ಪ್ರತ್ಯೇಕಿಸುವುದು ಮರುಬಳಕೆ ಮತ್ತು ಕಾಂಪೋಸ್ಟಿಂಗಾಗಿ ಸಹಕಾರಿ. ರಸ್ತೆಗಳ ಬದಲು ನಗರಸಭೆಯ ವಾಹನಗಳಿಗೆ ಕಸ ನೀಡಬೇಕು. ನಗರಸಭೆಗಳು ಸರಿಯಾದ ಸಮಯದಲ್ಲಿ ಕಸ ಸಂಗ್ರಹಿಸಬೇಕು. ನಾಗರಿಕರೂ ತಮ್ಮ ಜವಾಬ್ದಾರಿಯನ್ನು ನಿಭಾಯಿಸಬೇಕು. ವಸ್ತು ಖರೀದಿಗಾಗಿ ಮನೆಯಿಂದಲೇ ಬ್ಯಾಗ್, ಬ್ಯಾಸ್ಕೆಟ್ ತೆಗೆದುಕೊಂಡು ಹೋಗಿ. ಒಂದು ಬಾರಿ ಮಾತ್ರ ಬಳಕೆಗೆ ಬರುವ ಪ್ಲಾಸ್ಟಿಕ್ ಬಳಕೆಯನ್ನು ತಪ್ಪಿಸಿ. ಪ್ರಯಾಣದ ವೇಳೆ ವಾಹನಗಳಿಂದ ಕಸ ಎಸೆಯಬೇಡಿ. ಇಂತಹ ಸರಳ ಕ್ರಮಗಳು ದೊಡ್ಡ ಬದಲಾವಣೆ ತರಬಲ್ಲವು. ಸ್ವಚ್ಛ ಪರಿಸರವು ಸಾಂಕ್ರಮಿಕ ರೋಗಗಳ ಹರಡುವಿಕೆಯನ್ನು ಕಡಿಮೆ ಮಾಡುತ್ತದೆ, ಗಾಳಿಯ ಗುಣಮಟ್ಟವನ್ನು ಸುಧಾರಿಸುತ್ತದೆ, ಮತ್ತು ನಮ್ಮ ಪರಿಸರಕ್ಕೆ ಸೌಂದರ್ಯವನ್ನು ನೀಡುತ್ತದೆ. ಮಕ್ಕಳಿಗೆ ಸ್ವಚ್ಛತೆ ಮತ್ತು ನಾಗರಿಕ ಜವಾಬ್ದಾರಿಯ ಬಗ್ಗೆ ಕಲಿಸುವುದು ಶಾಶ್ವತ ಬದಲಾವಣೆಗೆ ದಾರಿ ಮಾಡುತ್ತದೆ. ಆಯಾ ಬಡಾವಣೆ, ರಸ್ತೆಯಲ್ಲಿ ವಾಸಿಸುವ ನಾಗರೀಕರು ತಮ್ಮದೇ ಸ್ಥಳೀಯ ಗುಂಪನ್ನು ರಚಿಸಿಕೊಂಡು ಸ್ವಚ್ಛತಾ ಅಭಿಯಾನಗಳನ್ನು ಆಯೋಜಿಸಿ ಜನರಲ್ಲಿ ಜಾಗೃತಿ ಮೂಡಿಸಬಹುದು. ನಮ್ಮ ಮಕ್ಕಳಿಗೆ ಸ್ವಚ್ಚ ಪರಿಸರವನ್ನು ಬಳುವಳಿಯಾಗಿ ನೀಡಲು ವರ್ತಮಾನ ದಿನ ಪತ್ರಿಕೆಯ ಬಳಗ ನಗರ, ಪಟ್ಟಣ, ಗ್ರಾಮಗಳ ನಿವಾಸಿಗಳಿಗೆ ಕಳಕಳಿಯ ಮನವಿ.

### ನಾಗರೀಕರಲ್ಲಿ ವರ್ತಮಾನ ಬಳಗದ ಪ್ರಾರ್ಥನೆ

ನಾಗರಿಕತೆ ಕೇವಲ ಕಾನೂನಿನಿಂದ ಜಾರಿಯಾಗುವುದಲ್ಲ; ಅದು ಅರಿವು ಮತ್ತು ಪರಸ್ಪರದ ಆರೈಕೆಯಿಂದ ಬೆಳೆದೀತು. ಮುಂದಿನ ಬಾರಿ ನಮ್ಮ ರಸ್ತೆಯಲ್ಲಿ ಅಥವಾ ಮನೆಯ ಸುತ್ತಮುತ್ತ ಕಸ ಕಂಡಾಗ, ನಗರ ಸ್ವಚ್ಛತೆ ನಮ್ಮ ಶಿಸ್ತು ಮತ್ತು ಮೌಲ್ಯಗಳ ಪ್ರತಿಬಿಂಬವೆಂಬುದನ್ನು ನೆನಪಿಸಿಕೊಳ್ಳೋಣ. ಸ್ವಚ್ಛವಾದ ನಾಳೆಗಾಗಿ ಇಂದೇ ಪ್ರತಿ ನಾಗರಿಕನು ತನ್ನ ಜವಾಬ್ದಾರಿಯನ್ನು ತೆಗೆದುಕೊಳ್ಳುವಂತಾಗಲಿ.



ಕಸ ಕಡಿಮೆ ಮಾಡುವುದು ಕೇವಲ ಒಂದು ಕಾರ್ಯವಲ್ಲ, ಇದು ಜೀವನಶೈಲಿ. ಸಣ್ಣ ಬದಲಾವಣೆಗಳ ಮೂಲಕ ನಾವೆಲ್ಲ ಮನಸ್ಸು ಮಾಡಿದರೆ ದೊಡ್ಡ ಬದಲಾವಣೆಯನ್ನು ತರಲು ಸಾಧ್ಯ. ಪರಿಸರ ರಕ್ಷಣೆಯ ಹಾದಿಯಲ್ಲಿ ಪ್ರತಿಯೊಬ್ಬ ನಾಗರಿಕರೂ ಒಂದು ಹೆಜ್ಜೆ ಇಟ್ಟಾಗ, ಭವಿಷ್ಯ ಇನ್ನಷ್ಟು ಹಸಿರಾಗುತ್ತದೆ, ಆರೋಗ್ಯಕರವಾಗುತ್ತದೆ. ಜನರಿಂದಲೇ ನಗರಸಭೆ. ನಗರಸಭೆಯ ಕಾರ್ಯದಲ್ಲಿ ಪ್ರತಿಯೊಬ್ಬ ನಾಗರೀಕನೂ ಬಾಗಿಯಾಗಬೇಕು

▸▸ **ಕೆ.ಶೇಷಾದ್ರಿ** ಅಧ್ಯಕ್ಷರು, ರಾಮನಗರ ನಗರಸಭೆ



ರಾಮನಗರ ನಗರ ವ್ಯಾಪ್ತಿಯಲ್ಲಿ ದಿನ ನಿತ್ಯ 50 ಟನ್ ಕಸ ಉತ್ಪತ್ತಿಯಾಗುತ್ತಿದೆ. ಎಲ್ಲೆಂದರಲ್ಲಿ ಕಸ ಎಸೆಯುವುದನ್ನು ತಡೆಯಲು ನಗರಾದ್ಯಂತ 50 ಕ್ಯಾಮರಾಗಳನ್ನು ಅಳವಡಿಸಲಾಗಿದೆ. ಅಲ್ಲದೆ ನಗರಸಭೆವತಿಯಿಂದ 16 ಕಮ್ಯೂನಿಟಿ ಮೊಬಲೈಸರುಗಳು ದಿನನಿತ್ಯ ಬೆಳ್ಳಂಬೆಳಿಗ್ಗೆಯಿಂದಲೇ ರಸ್ತೆಗಳಲ್ಲಿ ಸಂಚಾರ ನಡೆಸುತ್ತಿದ್ದಾರೆ. ರಸ್ತೆ ಬದಿ, ಚರಂಡಿಗಳಲ್ಲಿ ತ್ಯಾಜ್ಯ ಎಸೆಯುವರಿಗೆ ತಿಳುವಳಿಕೆ ಮತ್ತು ಎಚ್ಚರಿಕೆ ನೀಡುತ್ತಿದ್ದೇವೆ. ನಾಗರೀಕರು ತಮ್ಮ ಮನೆ ಅಥವಾ ಉದ್ಯೋಗದ ಸ್ಥಳಗಳಲ್ಲಿ ಉತ್ಪತ್ತಿಯಾಗುವ ತ್ಯಾಜ್ಯವನ್ನು ನಗರಸಭೆಯ ವಾಹನಗಳಿಗೆ ನೀಡಬೇಕು.

▸▸ **ಡಾ.ಜಯಣ್ಣ** ಪೌರಾಯುಕ್ತರು, ರಾಮನಗರ

**ಮೊದಲ ಪುಟದಿಂದ**

## ಸಮಯ ಮಿತಿ ಅಸಾಧ್ಯ

**ಮಸೂದೆಯನ್ನು ಶಾಸಕಾಂಗಕ್ಕೆ ಹಿಂತಿರುಗಿಸಬಹುದು ಎಂದು ತೀರ್ಪಿನಲ್ಲಿ ಹೇಳಿದೆ. ತೀರ್ಪಿನ ಕಾರ್ಯಕಾರಿ ಭಾಗವನ್ನು ಓದಿದ ಮುಖ್ಯನ್ಯಾಯಮೂರ್ತಿ ಗವಾಯಿ ಅವರು, ರಾಜ್ಯಪಾಲರು ಒಪ್ಪಿಗೆ ನೀಡಲು ಸಮಯ ಮಿತಿ ನಿಗದಿಪಡಿಸಲು ಸಾಧ್ಯವಿಲ್ಲ. ಒಪ್ಪಿಗೆ ಎಂದು ಪರಿಗಣಿಸಲಾಗುವ ಪರಿಕಲ್ಪನೆಯು ಸಂವಿಧಾನದ ಆಶಯ ಮತ್ತು ಅಧಿಕಾರಗಳ ಪ್ರತ್ಯೇಕತೆ ಸಿದ್ಧಾಂತಕ್ಕೆ ವಿರುದ್ಧವಾಗಿದೆ ಎಂದು ಪೀಠ ತಿಳಿಸಿದೆ. ರಾಜ್ಯಪಾಲರ ನಿರ್ಧಾರಗಳಿಗೆ ವೈಯಕ್ತಿಕವಾಗಿ ಹೊಣೆಗಾರರನ್ನಾಗಿ ಮಾಡಲು ಸಾಧ್ಯವಿಲ್ಲ. ಆದರೂ ಸಾಂವಿಧಾನಿಕ ನ್ಯಾಯಾಲಯಗಳು ಅವುಗಳನ್ನು ಪರಿಶೀಲಿಸಬಹುದು ಎಂದು ನ್ಯಾಯಾಲಯ ಸ್ಪಷ್ಟಪಡಿಸಿತು. ರಾಜ್ಯಪಾಲರು ಸಮಂಜಸ ಅವಧಿಯೊಳಗೆ ನಿರ್ಧಾರ ತೆಗೆದುಕೊಳ್ಳುವಂತೆ ನಿರ್ದೇಶಿಸುವುದನ್ನು ಹೊರತುಪಡಿಸಿ ನ್ಯಾಯಾಲಯಕ್ಕೆ ಯಾವುದೇ ಸಮಯ ಮಿತಿಯನ್ನು ವಿಧಿಸಲು ಸಾಧ್ಯವಿಲ್ಲ ಎಂದು ಹೇಳಿದರು.**

## 1079 ಹೆಕ್ಟೇರ್ ಅಗತ್ಯ

ಅಧಿಕಾರಿಗಳು ಜಂಟಿ ಸರ್ವೆ ನಡೆಸಿ ಸೂಕ್ತ ಪರ್ಯಾಯ ಜಾಗ ಗುರುತಿಸಬೇಕು. ಅರಣ್ಯೇತರ ಜಾಗವನ್ನು ಗುರುತಿಸುವಾಗ ಸದರಿ ಜಾಗದ ಕುರಿತು ಯಾವುದೇ ಅಕ್ರಮ ಸಕ್ರಮ ಇರಬಾರದು. ಅಧಿಕಾರಿಗಳು ಗುರುತಿಸಿರುವ ಜಾಗ ಸರ್ವೇ ಮತ್ತು ಸ್ಕೆಚ್ ಕಡ್ಡಾಯವಾಗಿ ಮಾಡಬೇಕು ಎಂದು ಹೇಳಿದರು.

ಸಭೆಯಲ್ಲಿ ಉಪವಿಭಾಗಾಧಿಕಾರಿ ಶಿವಮೂರ್ತಿ, ಕಾವೇರಿ ನೀರಾವರಿ ನಿಗಮದ ಅಭಿಯಂತರ ರಘುರಾಮನ್, ಅರಣ್ಯ ಇಲಾಖೆಯ ಡಿ.ಎಫ್.ಓ ರಘು ತಾಲ್ಲೂಕು ಮಟ್ಟದ ಅರಣ್ಯಾಧಿಕಾರಿಗಳು ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

# ಜನಜಾತಿಯ ಗೌರವ ದಿವಸ

## ಮೈಸೂರಿನಲ್ಲಿ ಎರಡು ದಿನಗಳ ರಾಷ್ಟ್ರೀಯ ವಿಚಾರಗೋಷ್ಠಿ




ಮೈಸೂರು: ಭಾರತೀಯ ಭಾಷಾ ಸಂಸ್ಥಾನ (ಸಿಐಐಎಲ್)ದಲ್ಲಿ, ಭಗವಾನ್ ಬಿರ?ಸಾ ಮುಂಡಾರ ಜನ್ಮ ವಾರ್ಷಿಕೋತ್ಸವ ಗೌರವಾರ್ಥವಾಗಿ ಪ್ರತಿ ವ?ಷದ ನವೆಂಬರ್ 15 ರಂದು ನಡೆಯುವ "ಜನಜಾತಿಯ ಗೌರವ ದಿವಸ" ಆಚರಣೆಯ ಭಾಗವಾಗಿ ಭಾಷೆ, ಸಂಸ್ಕೃತಿ ಮತ್ತು ಜ್ಞಾನ ಪದ್ಧತಿಗಳ ಕುರಿತಾದ ಎರಡು ದಿನಗಳ ರಾಷ್ಟ್ರೀಯ ವಿಚಾರಗೋಷ್ಠಿಯನ್ನು ಉದ್ಘಾಟಿಸಲಾಯಿತು.

ವಿಚಾರಗೋಷ್ಠಿಯ ಪರಿಚಯಾತ್ಮಕ ಭಾಷಣ ಮಾಡಿದ ಭಾ.ಭಾ.ಸಂ.ನ ಪ್ರಾಧ್ಯಾಪಕ ಹಾಗೂ ಉಪ ನಿರ್ದೇಶಕ ಡಾ.ಪಿ.ಆರ್. ಧರ್ಮೇಶ್ ಫರ?ನಾಂಡಿಸ್ ಮಾತನಾಡಿ, ರಾಷ್ಟ್ರದ ಅತ್ಯಂತ ಪ್ರಾಚೀನ ಭಾಷೆ, ಸಾಂಸ್ಕೃತಿಕ ಆಚರಣೆ ಮತ್ತು ಜ್ಞಾನ ಪದ್ಧತಿಗಳನ್ನು ರಕ್ಷಿಸುವಲ್ಲಿ ಬುಡಕಟ್ಟು ಸಮುದಾಯಗಳ ಅಮೂಲ್ಯ ಕೊಡುಗೆಗಳನ್ನು ಗುರುತಿಸುವಲ್ಲಿ ಭಾರತ ಸರ್ಕಾರದ ಬದ್ಧತೆಯನ್ನು ಒತ್ತಿ ಹೇಳಿದರು. ಪ್ರೊ.ಫರ್ನಾಂಡಿಸ್, ಭಗವಾನ್ ಬಿರ?ಸಾ ಮುಂಡಾ ಅವರ "ಜಲ್, ಜಂಗಲ್, ಜಮೀನ್" (ನೀರು, ಕಾಡು, ಭೂಮಿ) ಎಂಬ ನಿರಂತರ ಸಂದೇಶದ ದೃಢತೆಯನ್ನು ಪುನರುಚ್ಚರಿಸುತ್ತಾ, ಬುಡಕಟ್ಟು ಭಾಷೆಗಳಲ್ಲಿ ಆಳವಾಗಿ ಬೇರೂರಿರುವ ಸಾಂಪ್ರದಾಯಿಕ ಪರಿಸರ ಜ್ಞಾನವು ಸುಸ್ಥಿರ ಅಭಿವೃದ್ಧಿಗೆ ಪ್ರಮುಖ ಕೊಡುಗೆಗಳನ್ನು ನೀಡುತ್ತಿದೆ ಎಂದರು.

ತಮಿಳಿನ ಸಂಗಂ ಸಾಹಿತ್ಯದಲ್ಲಿ ನೈಸರ್ಗಿಕ ವಿಕೋಪಗಳು ಮತ್ತು 2004 ರ ಸುನಾಮಿಯ ಸಂದರ್ಭದಲ್ಲಿ ಅಂಡಮಾನ್ ಬುಡಕಟ್ಟು ಸಮುದಾಯಗಳು ಬದುಕುಳಿದ ಆರಂಭಿಕ ಉಲ್ಲೇಖಗಳನ್ನು ಪ್ರಸ್ತಾಪಿಸುತ್ತಾ, ಸ್ಥಳೀಯ ಪರಿಸರ ಜ್ಞಾನವು ದೀರ?ಘಕಾಲದವರೆಗೆ ಸಮುದಾಯದ ಸ್ಥಿತಿಸ್ಥಾಪಕತ್ವವನ್ನು ಹೇಗೆ ಪೀಳಿಗೆಗಳಿಗೆ ಮುಂದುವರಿಸಿಕೊಂಡು ಬಂದಿದೆ ಎಂಬುದನ್ನು ವಿವರಿಸಿದರು. ಪರಿಸರ ಸಂರಕ್ಷಣೆ ಮತ್ತು ಪ್ರಕೃತಿಯೊಂದಿಗೆ ಸಾಮರಸ್ಯದ ಜೀವನಕ್ಕೆ ರಾಷ್ಟ್ರೀಯ ಬದ್ಧತೆಯನ್ನು ಪುನರುಚ್ಚರಿಸಲು ಈ ವಿಚಾರಗೋಷ್ಠಿಯು ಒಂದು ಪ್ರಮುಖ ವೇದಿಕೆಯಾಗಿದೆ ಎಂದರು.

ಚಾಮರಾಜನಗರ ಜಿಲ್ಲೆಯ ಬಿಳಿಗಿರಿರಂಗನ ಬೆಟ್ಟದ ಅಶೋಕ ಪರಿಸರ ಸಂಶೋಧನಾ ಮತ್ತು ಪರಿಸರ ವಿಜ್ಞಾನ ಸಂಸ್ಥೆ (ಏಟ್ರೀ)ಯ ಯೋಜನಾ ವ್ಯವಸ್ಥಾಪಕ ಡಾ.ಸಿ.ಮಾದೇಗೌಡ ವಿಚಾರಗೋಷ್ಠಿ ಉದ್ಘಾಟಿಸಿ ಮಾತನಾಡಿ, ಆದಿವಾಸಿ ಹಕ್ಕುಗಳ ರಕ್ಷಕನಾದ ಮತ್ತು ಭಾರತದಾದ್ಯಂತ ಬುಡಕಟ್ಟು ಸಮುದಾಯಗಳಿಗೆ ಸ್ಫೂರ?ತಿಯ ಸೆಲೆಯಾದ ಭಗವಾನ್ ಬಿರ?ಸಾ ಮುಂಡಾ ಅವರ ನಿರಂತರ ಹೋರಾಟದ ಪರಂಪರೆಯನ್ನು ವಿವರಿಸಿದರು. ಅರಣ್ಯ ಭೂಸದೃಶ್ಯಗಳೊಂದಿಗೆ ಆದಿವಾಸಿಗಳ ಆಳವಾದ ಐತಿಹಾಸಿಕ ಸಂಪ?ಕದ ಬಗ್ಗೆ ಮಾತನಾಡಿ ಸಾಂಪ್ರದಾಯಿಕ ಸಮುದಾಯಗಳು ಶತಮಾನಗಳಿಂದ ಅರಣ್ಯಗಳ ಪಾಲಕರಾಗಿ ಸೇವೆ ಸಲ್ಲಿಸಿವೆ ಎಂದರು.

ಬುಡಕಟ್ಟು ಜನಾಂಗದ ಕಲಿಕಾರ?ಥಿಗಳಿಗೆ ನೇರವಾಗಿ ಪ್ರಯೋಜನವಾಗುವ ಸಮಗ್ರ ಕ್ಷೇತ್ರ ಸಮೀಕ್ಷೆಗಳು, ಸಮುದಾಯಾಧಾರಿತ ಭಾಷಿಕ ನಕ್ಷೆ ಮತ್ತು ಕ್ರಿಯಾಶೀಲ ಸಂಶೋಧನೆಗಳನ್ನು ಕೈಗೊಳ್ಳುವಂತೆ ಡಾ. ಮಾದೇಗೌಡ ಭಾ.ಭಾ.ಸಂಸ್ಥೆಯನ್ನು ಒತ್ತಾಯಿಸಿದರು. ಬುಡಕಟ್ಟು ಮಕ್ಕಳ ಸಮಾಜೋ–ಸಾಂಸ್ಕೃತಿಕ ಸಂದ?ಭಗಳಿಗೆ ಅನುಗುಣವಾಗಿ ಆರಂಭಿಕ ಹಂತದ ಬೋಧನೆ ಮತ್ತು ಕಲಿಕಾ ಸಾಮಗ್ರಿಗಳು, ಪ್ರೈಮರ್(ಬಾಲಬೋಧೆ)ಗಳು ಮತ್ತು ಡಿಜಿಟಲ್ ಸಂಪನ್ಮೂಲಗಳನ್ನು ಅಭಿವೃದ್ಧಿಪಡಿಸಲು ಭಾ.ಭಾ.ಸಂ. ಸ್ಥಳೀಯ ಸಮುದಾಯಗಳೊಂದಿಗೆ ಸಹಕರಿಸುವ ಅಗತ್ಯವನ್ನು ಒತ್ತಿ ಹೇಳಿದರು.

ರಾಷ್ಟ್ರೀಯ ವಿಚಾರಗೋಷ್ಠಿಯ ಉದ್ಘಾಟನಾ ಸಮಾರಂಭದ ಅಧ್ಯಕ್ಷೀಯ ನುಡಿಗಳನ್ನಾಡಿದ ಭಾ.ಭಾ.ಸಂ.ನ ನಿರ್ದೇಶಕ ಪ್ರೊ.ಶೈಲೇಂದ್ರ ಮೋಹನ್ ಮಾತನಾಡಿ, ಭಾರತದ ಭಾಷಾ ವೈವಿಧ್ಯತೆಯನ್ನು ಉತ್ತೇಜಿಸುವ ಮತ್ತು ಸಂರಕ್ಷಿಸುವ ಗುರಿಯನ್ನು ಹೊಂದಿರುವ ಈ ಸಂಸ್ಥೆಯು ತೆಗೆದುಕೊಂಡಿರುವ ಉಪಕ್ರಮಗಳ ಬಗ್ಗೆ ವಿವರಿಸಿದರು.ಸೋಲಿಗ ಸಮುದಾಯಕ್ಕಾಗಿ ನಿಘಂಟು ಮತ್ತು ಬೋಧನಾ–ಕಲಿಕಾ ಸಾಮಗ್ರಿಗಳನ್ನು ಅಭಿವೃದ್ಧಿಪಡಿಸಿದೆ ಎಂದರು.

ಭಾ.ಭಾ.ಸಂ.ನ ಉಪನ್ಯಾಸಕರು–ಹಾಗೂ–ಕಿರಿಯ ಸಂಶೋಧನಾಧಿಕಾರಿ (ಎಲ್–ಜೆ.ಆರ್.ಒ) ಮತ್ತು ವಿಚಾರಗೋಷ್ಠಿಯ ಸಂಯೋಜಕ ಡಾ.ಸುಜೋಯ್ ಸರ್ಕಾರ್ ಇನ್ನಿತರರು ಇದ್ದರು.

**ಮಂಜುನಾಥ ಎಸ್.ಬೇದ್ರೆ ಹೇಳಿಕೆ**

# ನ.23ರಂದು ಆಕಾಶವಾಣಿ ಸಂಗೀತ ಸಮ್ಮೇಳನ



ಮೈಸೂರು: 91 ವರ್ಷದ ಸಂಭ್ರಮಾಚರಣೆಯಲ್ಲಿ ಇರುವ ಮೈಸೂರು ಆಕಾಶವಾಣಿಯಿಂದ ನ.23 ರಂದು ಆಕಾಶವಾಣಿ ಸಂಗೀತ ಸಮ್ಮೇಳನವನ್ನು ಆಯೋಜಿಸಲಾಗಿದೆ ಎಂದು ಕಾರ್ಯಕ್ರಮ ಮುಖ್ಯಸ್ಥ ಮಂಜುನಾಥ ಎಸ್.ಬೇದ್ರೆ ಅವರು ತಿಳಿಸಿದರು.

ನಗರದ ಆಕಾಶವಾಣಿ ಕೇಂದ್ರದಲ್ಲಿ ಗುರುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮೈಸೂರಿನ ಕುವೆಂಪು ನಗರದಲ್ಲಿ ಇರುವ ವೀಣೆಶೇಷಣ್ಣ ಭವನದ ಗಾನಭಾರತಿ ಸಭಾಂಗಣದಲ್ಲಿ ಸಂಜೆ 6 ಗಂಟೆಗೆ ಕಾರ್ಯಕ್ರಮ ಪ್ರಾರಂಭವಾಗುತ್ತದೆ. ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಕುಲಪತಿ ಪ್ರೊ.ಶರಣಪ್ಪ ವಿ.ಹಲಸೆ ಅವರು ಕಾರ್ಯಕ್ರಮವನ್ನು ಉದ್ಘಾಟಿಸಲಿದ್ದಾರೆ. ವಿದ್ವಾನ್ ಎಚ್.ಎಲ್. ಶಿವಶಂಕರ ಸ್ವಾಮಿ ಅವರು ಮೃದಂಗ ತರಂಗ ಪ್ರಸ್ತುತ ಪಡಿಸಲ್ಲಿದ್ದಾರೆ. ಉನ್ನತ ಶ್ರೇಣಿಯ ವೀಣಾ ವಿದುಷಿ ಡಾ.ಎಸ್. ವಿ.ಸಹನಾ ವೀಣಾ ವಾದನ ಪ್ರಸ್ತುತ ಪಡಿಸಲಿದ್ದಾರೆ. ಇದೇ ಮೊದಲ ಬಾರಿಗೆ ಆಕಾಶವಾಣಿಯ ಈ ಕಾರ್ಯಕ್ರಮವನ್ನು ಪ್ರಸಾರ ಭಾರತಿ ವತಿಯಿಂದ ದೂರದರ್ಶನವು ಮುದ್ರಿಸಿಕೊಳ್ಳುತ್ತಿದ್ದು, ರಾಷ್ಟ್ರ ಮಟ್ಟದಲ್ಲಿ ಪ್ರಸಾರ ಮಾಡಲಿದೆ. ಸಾರ್ವಜನಿಕರು, ಸಂಗೀತ ಪ್ರೇಮಿಗಳಿಗೆ ಮುಕ್ತ ಪ್ರವೇಶವಿದೆ. ಯಾವುದೇ ಪಾಸ್, ಟಿಕೆಟ್ ಇರುವುದಿಲ್ಲ ಎಂದರು.

ಕೇಂದ್ರದ ಸಂಸ್ಕೃತಿ ಸಚಿವಾಲಯ ಹಾಗೂ ಪ್ರಸಾರ ಭಾರತಿ ವತಿಯಿಂದ ಹಮ್ಮಿಕೊಂಡಿರುವ ಈ ಸಂಗೀತ ಸಮ್ಮೇಳನವು 67ನೇ ಸಮ್ಮೇಳನವಾಗಿದೆ. ಭಾರತದ ಸಾಂಸ್ಕೃತಿಕ ಪರಂಪರೆಯನ್ನು ಪಸರಿಸುವಲ್ಲಿ ಕರ್ನಾಟಕ, ಹಿಂದೂಸ್ತಾನಿ ಶಾಸ್ತ್ರೀಯ ಸಂಗೀತ ಪ್ರಕಾರಗಳು ಮಹತ್ವಪೂರ್ಣ ಪಾತ್ರವನ್ನು ವಹಿಸಿವೆ. ಇದರಜೊತೆಗೆ ಲಘು ಸಂಗೀತಾ ಮತ್ತು ಜನಪದ ಸಂಗೀತಗಳಿಗೂ ಸಮಾನ ಆದ್ಯತೆಯನ್ನು ನೀಡುತ್ತಾ ಬರಲಾಗಿದೆ. ಭಾರತದ ಸಮೃದ್ಧ ಶ್ರೀಮಂತ ಸಂಗೀತ ಪರಂಪರೆಯನ್ನು ಜನಪ್ರಿಯಗೊಳಿಸುವುದು ಈ ಸಮ್ಮೇಳನದ ಗುರುತರ ಉದ್ದೇಶವಾಗಿದೆ. ಸುಪ್ರಸಿದ್ಧ ಗಾಯಕ–ಗಾಯಕಿರಲ್ಲದೇ ಉದಯೋನ್ಮುಖ ಪ್ರತಿಭೆಗಳಿಗೂ ತಮ್ಮ ವಿದ್ವತ್ ಅನ್ನು ಪ್ರಸ್ತುತ ಪಡಿಸಲು ಸಮ್ಮೇಳನ ಪ್ರತಿಷ್ಠಿತ ವೇದಿಕೆಯಾಗಿದೆ ಎಂದರು. ಸಮ್ಮೇಳನದಲ್ಲಿ ಪ್ರಸ್ತುತ ಪಡಿಸಿದ ಕಾರ್ಯಕ್ರಮವನ್ನು ಆಕಾಶವಾಣಿ ರಾಷ್ಟ್ರೀಯ ಕಾರ್ಯಕ್ರಮದಲ್ಲಿ ಜನವರಿ ತಿಂಗಳಲ್ಲಿ ಪ್ರಸಾರ ಮಾಡಲಾಗುತ್ತದೆ. ಹೀಗಾಗಿ ಪ್ರತಿಭೆಗಳಿಗೆ ರಾಷ್ಟ್ರೀಯ ಮನ್ನಣೆ ದೊರೆಯುತ್ತದೆ ಎಂದರು. ಮೈಸೂರು ಆಕಾಶವಾಣಿಯ ಕಾರ್ಯಕ್ರಮಗಳಿಗೆ ವಿದೇಶದಲ್ಲೂ ಅಪಾರ ಮಟ್ಟದಲ್ಲಿ ಶೋತೃಗಳು ಇದ್ದಾರೆ. ಮೊಬೈಲ್ ಅಪ್ಲಿಕೇಷನ್ ಮೂಲಕ ಈಗ ಮೈಸೂರು ಆಕಾಶವಾಣಿ ಕಾರ್ಯಕ್ರಮವನ್ನು ಎಲ್ಲ ಕಡೆಯೂ ಆಲಿಸಬಹುದಾಗಿದೆ. ಈ ಹಿನ್ನೆಲೆಯಲ್ಲಿ ಕೇಳುಗ ವರ್ಗವೂ ಹೆಚ್ಚಾಗಿದೆ. ಆದ್ದರಿಂದ ಈ ನಿಟ್ಟಿನಲ್ಲಿ ನಾವು ಹಲವಾರು ವೈವಿಧ್ಯಮಯ ಕಾರ್ಯಕ್ರಮವನ್ನು ನೀಡಲು ಯಾವಾಗಲೂ ಕಾರ್ಯಪ್ರವೃತ್ತರಾಗಿರುತ್ತೇವೆ ಎಂದರು. ಕಾರ್ಯಕ್ರಮ ನಿರ್ವಾಹಕ ಎನ್. ಕೇಶವಮೂರ್ತಿ, ತಾಂತ್ರಿಕ ವಿಭಾಗದ ಮುಖ್ಯಸ್ಥ ಪಿ.ಆನಂದನ್ ಸುದ್ದಿಗೋಷ್ಠಿಯಲ್ಲಿ ಹಾಜರಿದ್ದರು.


**ಮೈಸೂರು ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ,**
(ಕರ್ನಾಟಕ ಸರ್ಕಾರದ ಸ್ವಾಯತ್ತ ಸಂಸ್ಥೆ)
ಇರ್ವಿನ್ ರಸ್ತೆ, ಮೈಸೂರು–570001, ದೂರವಾಣಿ ಸಂಖ್ಯೆ: +91-0821-2520512 (Off), 2520803 (Fax),
Email- mmcrimysore@yahoo.com, website: www.mmcri.karnataka.gov.in

ಸಂ.ಅಭಿವೃದ್ಧಿ/56/2025–26 ದಿನಾಂಕ: 17.11.2025

**ಟೆಂಡರ್ ಅಧಿಸೂಚನೆ**

**ವಿಷಯ :** ಈ ವಿದ್ಯಾಲಯದ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಗೆ ಎಸ್.ಟಿ.ಪಿ. ಇ.ಟಿ.ಪಿ & ಡಬ್ಲ್ಯೂ.ಟಿ.ಪಿ ಪ್ಲಾಂಟ್ ನ್ನು ನಿರ್ವಹಣೆ ಮಾಡಲು ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ ಟೆಂಡರ್ ಆಹ್ವಾನಿಸಿರುವ ಬಗ್ಗೆ.

ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ 1999–ನಿಯಮ 2000 ರಂತೆ ಈ ವಿದ್ಯಾಲಯದ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಗೆ ಎಸ್.ಟಿ.ಪಿ, ಇ.ಟಿ.ಪಿ & ಡಬ್ಲ್ಯೂ.ಟಿ.ಪಿ ಪ್ಲಾಂಟ್‌ನ್ನು ನಿರ್ವಹಣೆ ಮಾಡಲು ವಿದ್ಯುನ್ಮಾನ ವೇದಿಕೆ ಮುಖಾಂತರ ಅಲ್ಪಾವಧಿ ಮರು–ಟೆಂಡರನ್ನು ಆಹ್ವಾನಿಸಲಾಗಿದೆ. ಟೆಂಡರ್ ನಮೂನೆಯನ್ನು ಇ–ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್ **http://kppp.karnataka.gov.in** ಮೂಲಕ **ದಿನಾಂಕ 19.11.2025 ರಿಂದ** ಪಡೆಯಬಹುದಾಗಿದ್ದು, **ದಿನಾಂಕ:18.12.2025 ರಂದು ಅಪರಾಹ್ನ 5.00 ರೊಳಗಾಗಿ** ಸಲ್ಲಿಸಬಹುದಾಗಿರುತ್ತದೆ. ಇ.ಎಂ.ಡಿ. ಟೆಂಡರ್ ಸಲ್ಲಿಸದ ತಿರಸ್ಕರಿಸಲಾಗುವುದು.

ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ ಒಂದು ವೇಳೆ ಸಾರ್ವಜನಿಕ ರಜೆಯೆಂದು ಘೋಷಿಸಲ್ಪಟ್ಟರೆ, ಮುಂದಿನ ಕೆಲಸದ ದಿನಾಂಕವನ್ನು ಕೊನೆಯ ದಿನಾಂಕವೆಂದು ಪರಿಗಣಿಸತಕ್ಕದ್ದು. ಈ ಬಗ್ಗೆ ಯಾವುದೇ ಅಧಿಸೂಚನೆ ಹೊರಡಿಸಲಾಗುವುದಿಲ್ಲ.

**ಸಹಿ/– ನಿರ್ದೇಶಕರು ಮತ್ತು ಡೀನ್**
ಮೈಸೂರು ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ, ಮೈಸೂರು

ವಾಸಾಸಂ/ಮೈಸೂರು/ಶಿರಡಿ ಸಾಯಿ/1254/2025–26

# ರಕ್ತದಾನದಿಂದ ಜೀವ ಉಳಿಯಲು ಸಾಧ್ಯ: ಮಿನ್ನು ಜಾರ್ಜ್

ಗುಂಡ್ಲುಪೇಟೆ: ರಕ್ತದಾನ ಮಹಾದಾನ. ಇದರಿಂದ ಒಂದು ಜೀವ ಉಳಿಯಲು ಸಾಧ್ಯ. ರಕ್ತದಾನದಿಂದ ಯಾವುದೇ ತೊಂದರೆ ಇಲ್ಲ. ಆರೋಗ್ಯ ಚೇತರಿಕೆಗೆ ಸಾಧ್ಯ. ಬಾಲಕಿಯರ ಪದವಿ ಪೂರ್ವ ಕಾಲೇಜಿನ ಪ್ರಾಂಶುಪಾಲರಾದ ಮಿನ್ನು ಜಾರ್ಜ್ ಸಲಹೆ ನೀಡಿದರು

ಪಟ್ಟಣದ ಬಾಲಕಿಯರ ಸಂಯುಕ್ತ ಪದವಿ ಪೂರ್ವ ಕಾಲೇಜಿನಲ್ಲಿ ಜಾರಕಿಹೊಳಿ ಬ್ರಿಗೇಡ್. ನಮ್ಮ ಗುಂಡ್ಲುಪೇಟೆ ಜಿಲ್ಲಾ ಅರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ತಾಲೂಕು ಸಾರ್ವಜನಿಕ ಆಸ್ಪತ್ರೆ ಹಾಗೂ ಗುಂಡ್ಲುಪೇಟೆ ಪೋಲಿಸ್ ಠಾಣೆ ಸಹಯೋಗದಲ್ಲಿ ಸ್ವಯಂ ಪ್ರೇರಿತ ರಕ್ತಧಾನ ಶಿಬಿರದಲ್ಲಿ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು ಆರೋಗ್ಯವಂತ ಯುವಕರು ಪ್ರತಿ 3 ತಿಂಗಳಿಗೊಮ್ಮೆ ರಕ್ತದಾನ ಮಾಡಬಹದು. ಇದರಿಂದ ಆರೋಗ್ಯದ ಮೇಲೆ ಯಾವುದೇ ತೊಂದರೆಯಾಗದೆ ಹೊಸ ಚೇತನವನ್ನು ಹೊಂದಲು ಸಾಧ್ಯ. ಯುವಕರ ರಕ್ತದಲ್ಲಿ ಹೆಚ್ಚು ಪೌಷ್ಟಿಕತೆ ಇರುವುದರಿಂದ ಇದನ್ನು ಹೆಚ್ಚು ಕಾಲ ಶೇಖರಿಸಿಟ್ಟು ಅಗತ್ಯತೆಗೆ ಅನುಗುಣವಾಗಿ ಬಳಸುವುದರಿಂದ ರಕ್ತದ ಅವಶ್ಯಕತೆ ಇರುವವರಿಗೆ ಸಹಾಯ ಮಾಡಿ ದಂತಾಗುತ್ತದೆ. ಯುವಕರಲ್ಲಿ ರಕ್ತದಾನದ ಬಗ್ಗೆ ಹೆಚ್ಚು ಅರಿವು ಮೂಡಿಸಲು ಹಾಗೂ ಸ್ವಯಂ ಪ್ರೇರಿತ ರಕ್ತ ದಾನಿಗಳಿಗೆ ಕೃತಜ್ಞತೆ ಸಲ್ಲಿಸುವುದು ಇಂದಿನ ಕಾರ್ಯಕ್ರಮದ ಉದ್ದೇಶವಾಗಿದೆ ಎಂದರು. ಜಾರಕಿಹೊಳಿ ಬ್ರಿಗೇಡ್ ಸಂಸ್ಥಾಪಕ ಗೋವಿಂದ ರಾಜು ಮಾತನಾಡಿ ತಾಲೂಕಿನಲ್ಲಿ ರಕ್ತ ನಿಧಿ ಕೇಂದ್ರ ಇಲ್ಲದ ಕಾರಣ ಅಪಘಾತ ಸೇರಿದಂತೆ ಇನ್ನಿತರ ತುರ್ತು ಸಂದರ್ಭದಲ್ಲಿ ರಕ್ತದ ಕೊರತೆ ಎದುರಾಗಿದೆ ಇದನ್ನು ನೀಗಿಸುವ ಉದ್ದೇಶದಿಂದ ರಕ್ತದಾನ ಶಿಬಿರ ಏರ್ಪಡಿಸಲಾಗಿದೆ ಎಂದು ತಿಳಿಸಿದರು ಈ ಶಿಬಿರದಲ್ಲಿ ಸುಮಾರು 25ಕ್ಕೂ ಅಧಿಕ ಮಂದಿ ಸ್ವಯಂ ಪ್ರೇರಿತ ರಾಗಿ ರಕ್ತ ಧಾನ ಮಾಡಿದರು. ಈ ಸಂದರ್ಭದಲ್ಲಿ ವೈದ್ಯರಾದ ಡಾ. ಪ್ರೊ ದಿವ್ಯಾ.ಡಾ ನೇತ್ರ. ಡಾ ನಂದಿತಾ. ಡಾ. ರಕ್ಷಿತ .ಜಾರಕಿಹೊಳಿ ಬ್ರಿಗೇಡ್ ರಾಜ್ಯಾಧ್ಯಕ್ಷ ಮಹೇಶ. ಪ್ರಧಾನ ಕಾರ್ಯದರ್ಶಿ ರಮೇಶ್ ರಾಜ್ಯ ಸಮಿತಿ ಸದಸ್ಯರಾ ಗೀರಿಶ್.ರವಿ ಕ್ರೇಜಿ ನಾಗರಾಜ. ಕರವೇ ರಾಜೇಂದ್ರ ವಿ ನಾಯಕ ನಮ್ಮ ಗುಂಡ್ಲುಪೇಟೆ ಅರುಣ್ ಮಹದೇವ್.ಮುನೇಶ್.ವೇಣು. ಸುರೇಶ. ಸಂತೋಷ ಸೇರಿದಂತೆ ಇತರಿದ್ದರು



# ರಾಷ್ಟ್ರೀಯ ಗ್ರಂಥಾಲಯ ಸಪ್ತಾಹ ಸಮಾರೋಪ ಸಮಾರಂಭ

### ಸ್ಪರ್ಧಾತ್ಮಕ ಪರೀಕ್ಷೆ ಸೇರಿದಂತೆ ವಿವಿಧ ಸಾಧನೆಗೆ ಒಳ್ಳೆಯ ಪುಸ್ತಕ ಅಧ್ಯಯನ ಅಗತ್ಯ: ಜಿ.ಪಂ.ಸಿಇಒ

ಮಡಿಕೇರಿ:–ವಿದ್ಯಾರ್ಥಿಗಳು ಸ್ಪರ್ಧಾತ್ಮಕ ಪರೀಕ್ಷೆ ಸೇರಿದಂತೆ ವಿವಿಧ ಸಾಧನೆ ಮಾಡಬೇಕಾದರೆ ಒಳ್ಳೆಯ ಪುಸ್ತಕ ಓದುವ ಅಭ್ಯಾಸ ಬೆಳೆಸಿಕೊಳ್ಳುವಂತಾಗಬೇಕು ಎಂದು ಜಿ.ಪಂ.ಸಿಇಒ ಆನಂದ ಪ್ರಕಾಶ್ ಮೀನಾ ಅವರು ಹೇಳಿದ್ದಾರೆ.

ಸಾರ್ವಜನಿಕ ಗ್ರಂಥಾಲಯ ಇಲಾಖೆ, ಜಿಲ್ಲಾ ಕೇಂದ್ರ ಗ್ರಂಥಾಲಯ ವತಿಯಿಂದ ನಗರದ ಮಹಾತ್ಮ ಗಾಂಧಿ ಜಿಲ್ಲಾ ಕೇಂದ್ರ ಗ್ರಂಥಾಲಯದಲ್ಲಿ ಗುರುವಾರ ನಡೆದ ರಾಷ್ಟ್ರೀಯ ಗ್ರಂಥಾಲಯ ಸಪ್ತಾಹ–2025 ದ ಸಮಾರೋಪ ಸಮಾರಂಭದಲ್ಲಿ ಪಾಲ್ಗೊಂಡು ಅವರು ಮಾತನಾಡಿದರು.

ಸಾಹಿತಿ ಕೆ.ಪಿ.ಬಾಲಸುಬ್ರಹ್ಮಣ್ಯ ಕಂಜರ್ಪಣೆ ಅವರು ಮಾತನಾಡಿ ಪ್ರತೀ ವರ್ಷವೂ ನವೆಂಬರ್ 14 ರಿಂದ ಒಂದು ವಾರ ಕಾಲ ರಾಷ್ಟ್ರೀಯ ಗ್ರಂಥಾಲಯ ಸಪ್ತಾಹವನ್ನು ನಡೆಸಲಾಗುತ್ತದೆ. ನೆಹರೂ ಅವರ ಜನ್ಮದಿನಾಂಕದಿಂದ ಇದು ಒಂದು ವಾರ ನಡೆಯುತ್ತದೆ ಎಂದರು.

ಭಾರತದಲ್ಲಿ ಗ್ರಂಥಾಲಯ ವಿಜ್ಞಾನದ ಪಿತಾಮಹರೆಂದೇ ಹೆಸರಾದ ದಿವಂಗತ ಡಾ.ಎಸ್.ಆರ್.ರಂಗನಾಥನ್ (1892–1972) ಅವರ ನೆನಪಿನಲ್ಲಿ ಈ ಸಪ್ತಾಹ ನಡೆಸಲಾಗುತ್ತದೆ. ಗ್ರಂಥಾಲಯ ವಿದ್ವಾಂಸರಾದದ್ದು ಆನಂತರ, ಮೂಲತಃ ಅವರು ಖ್ಯಾತ ಗಣಿತಶಾಸ್ತ್ರಜ್ಞರೂ ಶಿಕ್ಷಣ ತಜ್ಞರೂ ಆಗಿದ್ದರು. ಕರ್ನಾಟಕದ ಮಂಗಳೂರಿನ ಸರಕಾರಿ ಕಾಲೇಜಿನಲ್ಲೂ ಅವರು ಗಣಿತ ಉಪನ್ಯಾಸಕರಾಗಿ ಸೇವೆ ಸಲ್ಲಿಸಿದ್ದರೆಂಬುದು ಕನ್ನಡದ ಹೆಮ್ಮೆ. ಅವರು ಗ್ರಂಥಾಲಯಗಳ ವಿಕಾಸಕ್ಕೆ ತಮ್ಮ ಅರಿವಿನ ಮೂಲಕ ಹೊಸ ನಿಯಮಗಳನ್ನು ರೂಪಿಸಿ ಒಂದು ಚೌಕಟ್ಟನ್ನು ಹಾಕಿಕೊಟ್ಟವರು ಎಂದು ನುಡಿದರು. ಶಾಲಾ ಶಿಕ್ಷಣ ಇಲಾಖೆ ಉಪ ನಿರ್ದೇಶಕರಾದ ಬಸವರಾಜು ಅವರು ಮಾತನಾಡಿ ಪುಸ್ತಕಗಳನ್ನು ಓದುವುದರಿಂದ ಅಭಿವೃದ್ಧಿಗೆ ಸಹಕಾರಿ ಆಗಿದೆ ಎಂದು ಹೇಳಿದರು.

ಪುಸ್ತಕಗಳು ವಿದ್ಯಾರ್ಥಿಗಳ ಜ್ಞಾನ ದೇಗುಲ ಬಾಗಿಲು ತರಿಸುವಂತೆ ಆಗಿದೆ. ವಿದ್ಯಾರ್ಥಿಗಳು ಹೆಚ್ಚು ಹೆಚ್ಚು ಪುಸ್ತಕವನ್ನು ಓದಲು ಅನುಮೋದನೆ ನೀಡಬೇಕು. ಸಾಧನೆಗಳಿಗೆ ಸೂಕ್ತವಾಗಿರುವುದು ಗ್ರಂಥಾಲಯವಾಗಿದೆ ಎಂದು ಹೇಳಿದರು. ಸಹಾಯಕ ಪ್ರಾಧ್ಯಾಪಕರು ಹಾಗೂ ಲೇಖಕರಾದ ಡಾ.ದೀಕ್ಷಿತಾ ವರ್ಕಾಡಿ ಅವರು ಮಾತನಾಡಿ ಬದುಕನ್ನು ಬದಲಾಯಿಸಿಕೊಳ್ಳಲು ಒಳ್ಳೆಯ ಪುಸ್ತಕ ಓದಬೇಕು. ಪುಸ್ತಕ ಓದುವುದರಿಂದ ದಾರಿದೀಪವನ್ನಾಗಿ ರೂಪಿಸಿಕೊಳ್ಳಲು ಸಾಧ್ಯ ಹಾಗೂ ಹೆಚ್ಚು ಪುಸ್ತಕಗಳನ್ನು ಓದುವ ಅಭ್ಯಾಸ ಮಾಡಿಕೊಳ್ಳುವುದು ಉತ್ತಮ ಎಂದರು. ಭಾರತದಲ್ಲಿ ಗ್ರಂಥಾಲಯ ವಿಜ್ಞಾನದ ಪಿತಾಮಹರೆಂದೇ ಹೆಸರಾದ ದಿವಂಗತ ಡಾ.ಎಸ್ ಆರ್.ರಂಗನಾಥನ್ ಅವರ ಭಾವಚಿತ್ರಕ್ಕೆ ಗಣ್ಯರು ಪುಷ್ಪಾರ್ಚನೆ ನೆರವೇರಿಸಿದರು. ಜಿಲ್ಲಾ ಕೇಂದ್ರ ಗ್ರಂಥಾಲಯ ಮುಖ್ಯ ಗ್ರಂಥಾಲಯಾಧಿಕಾರಿ ಸುರೇಖಾ ಸ್ವಾಗತಿಸಿದರು. ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ವಿದ್ಯಾರ್ಥಿಗಳು ನಾಡಗೀತೆ ಹಾಡಿದರು. ಸಂಚಾರಿ ಗ್ರಂಥಾಲಯ ಮೇಲ್ವಿಚಾರಕರಾದ ನಾಗವೇಣಿ ಪ್ರಾರ್ಥಿಸಿದರು. ವಿವಿಧ ಸ್ಪರ್ಧೆಗಳಲ್ಲಿ ಭಾಗವಹಿಸಿದ ವಿದ್ಯಾರ್ಥಿಗಳಿಗೆ ಬಹುಮಾನ ವಿತರಿಸಲಾಯಿತು.




# ಸಾವರ್ಕರ್ ಒಪ್ಪದ ಕಾಂಗ್ರೆಸ್ ಮನಸ್ಥಿತಿ

## ಅಂಕಣಕಾರ ಪ್ರವೀಣ್ ಕುಮಾರ್ ಮಾವಿನಕಾಡು ಕಿಡಿ | ಇಂದಿರಾ ಗಾಂಧಿ ಜಯಂತಿ

ಮೈಸೂರು: ಇಂದಿರಾ ಗಾಂಧಿ ಕಾಲದಲ್ಲಿ ಕಾಂಗ್ರೆಸ್ಸಿಗರಿಂದ ವೀರ ಎನಿಸಿಕೊಂಡಿದ್ದ ಸಾವರ್ಕರ್ ಅವರನ್ನು ಇಂದು ಅವರ ಮೊಮ್ಮಗ ರಾಹುಲ್ ಗಾಂಧಿ ಟೀಕೆ ಮಾಡುತ್ತಾರೆ. ಹಳೆಯ ಕಾಂಗ್ರೆಸ್‌ನಂತೆ ಈಗೀನ ಕಾಂಗ್ರೆಸ್ ಇಲ್ಲ ಎಂದು ಅಂಕಣಕಾರ ಪ್ರವೀಣ್ ಕುಮಾರ್ ಮಾವಿನಕಾಡು ಹೇಳಿದರು.

ನಗರದ ಗ್ರೀನ್ ಹೆರಿಟೇಜ್ ಹೋಟೆಲ್ ನಲ್ಲಿ ಸಾವರ್ಕರ್ ಪ್ರತಿಷ್ಠಾನದ ವತಿಯಿಂದ ನಡೆದ ಇಂದಿರಾ ಗಾಂಧಿ ಜಯಂತಿ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಪ್ಯಾಕೆಟ್ ಸೈಜಿನ ಸಂವಿಧಾನವನು ಕೈಯಲ್ಲಿಡಿದು ಓಡಾಡುವ ರಾಹುಲ್ ಗಾಂಧಿಗೆ ಸರ್ವೋಚ್ಚ ನ್ಯಾಯಾಲಯದ ತೀರ್ಪಿನ ಮೇಲೆ ನಂಬಿಕೆ ಇಲ್ಲವೆ. ಸಾವರ್ಕರ್ ಟೀಕೆ ಪ್ರಕರಣದಲ್ಲಿ ನ್ಯಾಯಮೂರ್ತಿ ದೀಪಾಂಕರ್ ದತ್ತ ಮತ್ತು ಮನ ಮೋಹನ್ ಅವರಿದ್ದ ಪೀಠ ಬಹಳ ಸ್ಪಷ್ಟವಾಗಿ ತೀರ್ಪು ನೀಡಿದೆ. ಆದರೆ, ಕೂಡ ರಾಹುಲ್ ಗಾಂಧಿ ಟೀಕೆ ಮಾಡುತ್ತಾರೆ. ನೀವು ಸುಪ್ರೀಂ ಕೋರ್ಟ್ ಅನ್ನು ಒಪ್ಪುದಿಲ್ಲವೇ? ನಿಮಗೆ ಸಂವಿಧಾನದ ಮೇಲೆ ನಂಬಿಕೆ ಇಲ್ಲವೇ? ಪ್ಯಾಕೆಟ್ ಸೈಜಿನ ಸಂವಿಧಾನ ಇಟ್ಟುಕೊಂಡು ?ಂಕೇ ಓಡಾಡುತ್ತೀರಾ?. ಮತ್ತೊಮ್ಮೆ ಇಂತಹ ಹೇಳಿಕೆ ನೀಡಿದರೆ ನ್ಯಾಯಾಲಯದ ಸ್ವಯಂ ಪ್ರೇರಣೆಯಿಂದ ಪ್ರಕರಣ ದಾಖಲಿಸುವುದಾಗಿ ಎಚ್ಚರಿಕೆ ನೀಡಿದೆ. 1980ರಲ್ಲಿ ಇಂದಿರಾ ಗಾಂಧಿಯವರು ಸಾವರ್ಕರ್ ರಾಷ್ಟ್ರೀಯ ಸ್ಮಾರಕದ ಕಾರ್ಯದರ್ಶಿಗಳಾಗಿದ್ದ ಪಂಡಿತ್ ಬಾಕ್ಲೆ ಅವರಿಗೆ ಪತ್ರ ಬರೆದು ಸ್ವಾತಂತ್ರ್ಯ ಹೋರಾಟದಲ್ಲಿ ಬ್ರಿಟಿಷರ ವಿರುದ್ಧ ಹೋರಾಡಿದ್ದ ಸಾವರ್ಕರ್ ಪಾತ್ರ ಅವಿಸ್ಮರಣೀಯ. ಅವರೊಬ್ಬ ಮರೆಯಲಾಗದ ಭಾರತದ ಹೆಮ್ಮೆಯ ಸುಪುತ್ರ ಎಂದು ಬಣ್ಣಿಸಿದ್ದರು.



ರಾಷ್ಟ್ರದ ಭದ್ರತ ವಿಚಾರದಲ್ಲಿ ಇಂದಿರಾ ಗಾಂಧಿ ರಾಜೀ ಆಗಿರಲಿಲ್ಲ. ಆದರೆ, ಅವರ ಮೊಮ್ಮಗ ಭದ್ರತೆ ವಿಚಾರದಲ್ಲಿ ವಿರುದ್ಧ ಇದ್ದರೆ. ಇಂದಿರಾ ಗಾಂಧಿ ಪಾಕಿಸ್ತಾನ ಮೇಲೆ ಯುದ್ಧ ಮಾಡಿ ಬಾಂಗ್ಲಾದೇಶಕ್ಕೆ ಸ್ವಾತಂತ್ರ್ಯ ಕೊಡಿಸಿದ್ದು, ಪರುಮಾಣು ಪರೀಕ್ಷೆ ಮಾಡಿದ್ದು, ಎಲ್ಲವೂ ಸಾವರ್ಕರ್ ಅವರ ತತ್ವವಾಗಿತ್ತು. ಗಾಂಧಿ ತತ್ವದಲ್ಲಿ ಪರಮಾಣು ಪರೀಕ್ಷೆ ಮಾಡಲಾಗುತ್ತಿತ್ತೋ ಎಂದು ಹೇಳಿದರು. ಸಾವರ್ಕರ್ ಅವರನ್ನು ತುಳಿ?ಂಲು ಕೆಲಸ ಕಾಂಗ್ರೆಸ್‌ನಲ್ಲಿ ನಿರಂತರವಾಗಿ ನಡೆಯುತ್ತಿತ್ತು. ಸಾವರ್ಕರ್ ಬ್ರಿಟಿಷರಿಗೆ ಕ್ಷಮಾಪಣ ಪತ್ರ ಎನ್ನುವುದು ಸುಳ್ಳು. ಮಹಾತ್ಮ ಗಾಂಧಿಯವರು ಕೂಡ ಬ್ರಿಟಿಷ್ ವೈಸರಾಯ್‌ಗೆ ಬರೆದ ಪತ್ರಗಳಲ್ಲಿ 'ಯುವರ್ ಫೈತ್ ಫುಲ್ ಸರ್ವೆಂಟ್' ಎಂಬ ಅಭಿವಂದನಾ ಪದವನ್ನು ಬಳಸುತ್ತಿದ್ದರು. ಅವರನ್ನೂ ರಾಹುಲ್ ಗಾಂಧಿ ಟೀಕಿಸುತ್ತಾರಾ ಎಂದು ಪ್ರಶ್ನಿಸಿದ್ದಲ್ಲದೆ ಅಂದಿನ ಕಾಲದಲ್ಲಿ ಬ್ರಿಟಿಷರಿಗೆ ಬರೆಯುತ್ತಿದ್ದ ಪತ್ರಗಳಲ್ಲಿ ಈ ರೀತಿಯ ಅಭಿನಂದನಾ ಪದ ಬಳಸುವುದು ಸಾಮಾನ್ಯವಾಗಿತ್ತು ಎಂದು ಹೇಳಿದರು.

> **ಚಿಕ್ಕ ರಾಷ್ಟ್ರಪಿತ ಕೊಟ್ಟರು**
> ಕಾಂಗ್ರೆಸ್ ಇತಿಹಾಸವೇ ದೇಶದ ಇತಿಹಾಸ ಎನ್ನುತ್ತಿದ್ದಾರೆ. ಆದರೆ, ದೇಶಕ್ಕೆ ನೈಜ ಇತಿಹಾಸವನ್ನು ತಿಳಿಸುವ ಕೆಲಸವಾಗಬೇಕು. ಒಬ್ಬರಿಗೆ ರಾಷ್ಟ್ರಪಿತ ಬಿರುದನ್ನು ಅವರೆ ಕೊಟ್ಟಿಕೊಂಡಿದ್ದಾರೆ. ಯಾಕೇ ರಾಷ್ಟ್ರ ಮೊದಲು ಇರಲಿಲ್ವಾ? ಆಗ ಇನ್ನೂ ದೊಡ್ಡದಾಗಿಯೇ ಇತ್ತು. ದೊಡ್ಡದಾದ ರಾಷ್ಟ್ರವನ್ನು ಚಿಕ್ಕದಾಗಿ ಮಾಡಿ ಚಿಕ್ಕ ರಾಷ್ಟ್ರಪಿತ ಕೊಟ್ಟರು.
> –ಪ್ರವೀಣ್ ಕುಮಾರ್ ಮಾವಿನಕಾಡು

ನೆಹರೂ ಅವರನ್ನು ನಭಾ ಜೈಲಿಗೆ ಹಾಕಿದಾಗ ಅವರ ತಂದೆ ಮೋತಿಲಾಲ್ ನೆಹರು ಸಹ ಕ್ಷಮಾಪಣೆ ಪತ್ರವನ್ನು ವೈಸಾರಾಯ್ ಬಳಿ ಕೊಂಡೋಯಿದ್ದರು. ಅದು ಜೈಲಿಗೆ ಹಾಕಿದ ಕೇವಲ ನಾಲ್ಕು ದಿನಕ್ಕೆ ಎಂಬುದನ್ನು ಸಾವರ್ಕರ್ ಟೀಕಿಸುವ ಕಾಂಗ್ರೆಸ್ ನಾಯಕರು ನೆನೆಸಿಕೊಳ್ಳಬೇಕು. 1932ರಲ್ಲಿ ನಡೆದ ಕಾಂಗ್ರೆಸ್ ರಾಷ್ಟ್ರೀ?ಂ ಆದಿವೇಶನದಲ್ಲಿ ಸಾವರ್ಕರ್ ಅವರನ್ನು ಬಿಡಗಡೆ ಮಾಡಬೇಕು. ಹೋರಾಟಗಾರರನ್ನು ಬಂಧಿಸಿರುವುದು ತಪ್ಪು ಎಂದು ಬ್ರಿಟಿಷರಿಗೆ ಪತ್ರ ಬರೆಯಲಾಗಿತ್ತು. ಈ ಸಂದರ್ಭದಲ್ಲಿ ಕಾಂಗ್ರೆಸ್‌ಗೆ ಕ್ರಾಂತಿಕಾರಗಳ ಬೆಂಬಲ ಬೇಕಿತ್ತು. ಆದರೆ, ಈಗ ಸಾವರ್ಕರ್ ಸ್ವಾತಂತ್ರ್ಯ ಹೋರಾಟ ವಾಡಿಲ್ಲ ಎನ್ನುತ್ತಾರೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಇದೆ ವೇಳೆ ಇಂದಿರಾ ಗಾಂಧಿ ಕಾಲದಲ್ಲಿ ನಿರ್ಮಿಸಿದ 40 ನಿಮಿಷದ ಸಾವರ್ಕರ್ ಸಾಕ್ಷ್ಯಚಿತ್ರ, ಸಾವರ್ಕರ್ ಗೌರವರಾರ್ಥ ಬಿಡುಗಡೆ ಮಾಡಿದ್ದ ಅಂಚೆಚೀಟಿಯನ್ನು ಪ್ರದರ್ಶಿಸಲಾಯಿತು. ಎಲ್ಲ ಅಂಚೆಚೀಟಿಯಲ್ಲಿ ವ್ಯಕ್ತಿಯ ಚಿತ್ರ ಮಾತ್ರ ಇದ್ದರೆ, ಸಾವರ್ಕರ್ ಅಂಚೆ ಚೀಟಿಯಲ್ಲಿ ಕರಿ ನೀರಿನ ಶಿಕ್ಷೆ ಅನುಭವಿಸಿದ್ದ ಅಂಡಮಾನನಿ ಜೈಲಿನಲ್ಲಿ ಚಿತ್ರ ಇರುವುದು ವಿಶೇಷವಾಗಿದೆ ಎಂದು ಹೇಳಿದರು.

1983ರಲ್ಲಿ ಇಂದಿರಾ ಗಾಂಧಿ ಚಲನಚಿತ್ರ ವಿಭಾಗಕ್ಕೆ ಸೂಚಿಸಿ ಮಹಾನ್ ಕ್ರಾಂತಿಕಾರಿಯ ಜೀವನದ ಬಗ್ಗೆ ಸಾಕ್ಷ್ಯಚಿತ್ರ ನಿರ್ಮಿಸಿದ್ದರು. ಅದನ್ನು ಸಹ ಕಾರ್ಯಕ್ರಮದಲ್ಲಿ ಪ್ರದರ್ಶಿಸಲಾಯಿತು. ಆದಿತ್ಯ ಅಧಿಕಾರಿ ಆಸ್ಪತ್ರೆಯ ವೈದ್ಯ ಡಾ. ಚಂದ್ರಶೇಖರ್, ಸಾವರ್ಕರ್ ಪ್ರತಿಷ್ಠಾನದ ಕಾರ್ಯದರ್ಶಿ ರಾಕೇಶ್ ಭಟ್, ಸಹ ಕಾರ್ಯದರ್ಶಿ ಶಿವು ಚಿಕ್ಕಕಾನ್ಯ, ಸಾವರ್ಕರ್ ಯುವ ಬಳಗದ ಸಂದೇಶ್ ಪವಾರ್, ಮೈಸೂರು ಕೇಂದ್ರ ಸಮಿತಿಯ ಶಿವು ಪಟೇಲ್, ಎಸ್.ಮಹೇಶ್ ಕುಮಾರ್, ಎಚ್.ಎಸ್.ಹಿರಿಯಣ್ಣ, ಡಿ.ರಾಘವೇಂದ್ರ ಕಾರ್ಯಕ್ರಮದಲ್ಲಿ ಹಾಜರಿದ್ದರು.

ವರ್ತಮಾನ
ಜಾಹಿರಾತಿಗೆ ಉತ್ತಮ ಮಾಧ್ಯಮ

# ಪ್ರತಿಭೆಯು ಅನಾವರಣಕ್ಕೆ ಪ್ರತಿಭಾ ಕಾರಂಜಿ ಉತ್ತಮ ವೇದಿಕೆ

ಕೆ.ಆರ್.ನಗರ: ಮಕ್ಕಳ ಪ್ರತಿಭೆಯು ಅನಾವರಣಗೊಳ್ಳಲು ಪ್ರತಿಭಾ ಕಾರಂಜಿಯು ಉತ್ತಮ ವೇದಿಕೆಯಾಗಿದೆ ಎಂದು ಹರದನಹಳ್ಳಿ ಗ್ರಾಮ ಪಂಚಾಯಿತಿ ಅಧ್ಯಕ್ಷ ಎಲ್.ವಿ. ಗೋಪಾಲ್ ಹೇಳಿದರು.

ಸಾಲಿಗ್ರಾಮ ತಾಲೂಕಿನ ಹೆಬ್ಸೂರು ಗ್ರಾಮದ ಕಿತ್ತೂರು ರಾಣಿ ಚೆನ್ನಮ್ಮ ವಸತಿ ಶಾಲೆಯ ಆವರಣದಲ್ಲಿ ಆಯೋಜಿಸಿದ್ದ ಹರದನಹಳ್ಳಿ ಕ್ಲಸ್ಟರ್ ಮಟ್ಟದ ಪ್ರತಿಭಾ ಕಾರಂಜಿ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು. ಶಾಲೆ, ಕ್ಲಸ್ಟರ್, ತಾಲೂಕು, ಜಿಲ್ಲಾ ಮತ್ತು ರಾಜ್ಯ ಹಂತದವರೆಗೂ ಮಕ್ಕಳು ತಮ್ಮಲ್ಲಿರುವ ಪ್ರತಿಭೆಯನ್ನು ಅನಾವರಣಗೊಳಿಸಲು ಶಿಕ್ಷಣ ಇಲಾಖೆಯು ಪ್ರತಿಯೊಂದು ಹಂತದಲ್ಲಿಯೂ ಅವಕಾಶವನ್ನು ಮಾಡಿಕೊಟ್ಟಿದ್ದು ವಿದ್ಯಾರ್ಥಿಗಳು ಇದನ್ನು ಸದುಪಯೋಗ ಪಡಿಸಿಕೊಳ್ಳಬೇಕೆಂದು ಕರೆ ನೀಡಿದರು.

ಸಿ ಆರ್ ಪಿ ಶಂಕರೇಗೌಡ ಮಾತನಾಡಿ ವಿದ್ಯಾರ್ಥಿಗಳು ಪಠ್ಯದ ಜೊತೆಗೆ ಪಠ್ಯೇತರ ಚಟುವಟಿಕೆಗಳಲ್ಲಿಯೂ ಸಕ್ರಿಯವಾಗಿ ಭಾಗವಹಿಸಬೇಕು. ಆ ಮೂಲಕ ತಮ್ಮೊಳಗಿರುವ ಸುಪ್ತ ಪ್ರತಿಭೆಯನ್ನು ವ್ಯಕ್ತಪಡಿಸಬೇಕು ಎಂದರು.ಸರ್ಕಾರವು 2004 ರಿಂದ ಪ್ರತಿಭಾಕಾರಂಜಿ ಕಾರ್ಯಕ್ರಮವನ್ನು ಜಾರಿಗೆ ತಂದಿದ್ದು ಆ ಮೂಲಕ ವಿದ್ಯಾರ್ಥಿಗಳು ಶಾಲಾ ಹಂತದಲ್ಲಿಯೇ ಪಠ್ಯೇತರ ಚಟುವಟಿಕೆಗಳಲ್ಲಿ ಭಾಗವಹಿಸಲು ಸಹಾಯಕವಾಗಿದೆ ಎಂದರು. ಪೋಷಕರು ಮತ್ತು ಶಿಕ್ಷಕರುಗಳು ಮಕ್ಕಳು ಯಾವ ಕ್ಷೇತ್ರದಲ್ಲಿ ಹೆಚ್ಚಿನ ಆಸಕ್ತಿಯನ್ನು ಹೊಂದಿರುತ್ತಾರೆ ಎಂಬುದನ್ನು ಗುರುತಿಸಿ ಅವರುಗಳನ್ನು ಆ ಕ್ಷೇತ್ರದಲ್ಲಿ ವಿಶೇಷ ಸಾಧನೆ ಮಾಡಲು ಪ್ರೋತ್ಸಾಹಿಸುವಂತಹ ಪ್ರಾಮಾಣಿಕ ಕೆಲಸವನ್ನು ಮಾಡಬೇಕು. ಆ ಮೂಲಕ ಅಂತಹ ಕ್ಷೇತ್ರಗಳಲ್ಲಿ ವಿದ್ಯಾರ್ಥಿಗಳು ಉತ್ತಮ ಸಾಧನೆ ಮಾಡುವುದರ ಜೊತೆಗೆ ನಾಡಿಗೆ ಕೀರ್ತಿ ತರುವಂತಾಗಬೇಕು ಎಂದು ಕರೆ ನೀಡಿದರು.



ವಿವಿಧ ಸ್ಪರ್ಧೆಗಳಲ್ಲಿ ಭಾಗವಹಿಸುವ ವಿದ್ಯಾರ್ಥಿಗಳು ಸೋಲು ಗೆಲುವುಗಳನ್ನು ಸಮಾನವಾಗಿ ಸ್ವೀಕರಿಸಬೇಕು. ಬಹುಮಾನಗಳನ್ನು ಪಡೆದವರು ಹಿಗ್ಗದೇ, ಬೇರೆಯವರು ಕುಗ್ಗದೆ ಎಲ್ಲರೂ ಪರಸ್ಪರ ವಿಶ್ವಾಸ ಪ್ರೀತಿಯೊಂದಿಗೆ ಪಾಲ್ಗೊಳ್ಳಬೇಕು. ಆ ಮೂಲಕ ನಮ್ಮೊಳಗಿರುವ ಪ್ರತಿಭೆಯನ್ನು ಎಲ್ಲರ ಮುಂದೆ ಪ್ರದರ್ಶಿಸಿ ಎಲ್ಲರ ಮೆಚ್ಚುಗೆಗೆ ಪಾತ್ರವಾಗಿ ಮುಂದಿನ ಹಂತಕ್ಕೆ ಹೋಗುವ ಕಡೆಗೆ ತಮ್ಮ ಚಿತ್ತವನ್ನು ಹರಿಸಬೇಕು ಎಂದು ಕರೆ ನೀಡಿದರು. ಪ್ರತಿಭಾ ಕಾರಂಜಿ ಕಾರ್ಯಕ್ರಮದಲ್ಲಿ ಹರದನಹಳ್ಳಿ ಕ್ಲಸ್ಟರ್ ವ್ಯಾಪ್ತಿಯ ಎಲ್ಲಾ ಶಾಲೆಗಳಿಂದ ಸುಮಾರು 150ಕ್ಕೂ ಹೆಚ್ಚು ಮಕ್ಕಳು ವಿವಿಧ ವೇಷ ಭೂಷಣಗಳೊಂದಿಗೆ ವಿವಿಧ ಸ್ಪರ್ಧೆಗಳಲ್ಲಿ ಪಾಲ್ಗೊಂಡು ಎಲ್ಲರ ಗಮನ ಸೆಳೆದಿದ್ದು ವಿಶೇಷವಾಗಿತ್ತು.


ಕಾರ್ಯಕ್ರಮದಲ್ಲಿ ಕಿತ್ತೂರು ರಾಣಿ ಚೆನ್ನಮ್ಮ ವಸತಿ ಶಾಲೆಯ ಪ್ರಾಂಶುಪಾಲ ಸತೀಶ, ಶಿಕ್ಷಕರಾದ ಶೀಗವಾಳು ಬಿ.ಆರ್.ಕುಮಾರ್, ನಾಗೇಶ್, ಕುಚೇಲ, ಪ್ರೇಮಕುಮಾರಿ, ವೇದಾವತಿ, ಸ್ವಾಮಿನಾಯಕ, ಹರೀಶ್, ಮಂಜಾಚಾರಿ, ನಿರಂಜನ್, ಪ್ರಕಾಶ್, ರೇಣುಕಾ, ಕೃಷ್ಣೇಗೌಡ, ಮಮತ, ಸತೀಶ್, ಉಷಾ, ಮಧುಮಾಲತಿ, ಪ್ರಮೋದ್ ಸೇರಿದಂತೆ ಹಲವರು ಪಾಲ್ಗೊಂಡಿದ್ದರು.

# ಗರಡಿಕೇರಿಯಲ್ಲಿ ಕಾರ್ತಿಕ ಸಂಪನ್ನ

ಮೈಸೂರು: ನಗರದ ಗರಡಿಕೇರಿ ಶ್ರೀ ಮಲ್ಲೈ ಮಹದೇಶ್ವರ ಸ್ವಾಮಿಯ ಮಹಾ ಉತ್ಸವದ ಅಂಗವಾಗಿ ನಡೆದ ಕಾರ್ತಿಕ ಮಾಸ ವಿವಿಧ ಪೂಜಾ ಕೈಕಾಂರ್ಯಗಳು ಸೋಮವಾರ ತಡರಾತ್ರಿವರೆಗೂ ರಥೋತ್ಸವ ಸಾಗುವ ಮೂಲಕ ಸಂಪನ್ನಗೊಂಡಿತು.

ಶ್ರೀ ಮಲ್ಲೈ ಮಹದೇಶ್ವರ ಸ್ವಾಮಿ ದೇವಸ್ಥಾನದ ಟ್ರಸ್ಟ್ ನ ಗೌರವಾಧ್ಯಕ್ಷ ಎಂ.ಶಿವಣ್ಣ ಮತ್ತು ಗುಡ್ಡಪ್ಪ ಎಂ.ಎಸ್.ರವಿಕುಮಾರ್ ನೇತೃತ್ವದಲ್ಲಿ ನಾಲ್ಕು ಕಾರ್ತಿಕ ಸೋಮವಾರಗಳು ವಿವಿಧ ಪೂಜಾ ಕಾರ್ಯಗಳು ಜರುಗಿದವು. ವಿವಿಧ ವಾದ್ಯಗಳು, ಕಂಸಾಳೆ, ನಾದಸ್ವರ ಸೇರಿ ಹಲವು ಕಲಾ ತಂಡಗಳು ಮೆರವಣಿಯಲ್ಲಿ ಭಾಗಿಯಾಗಿದ್ದವು. ಗುಡ್ಡಪ್ಪ ಎಂ.ಎಸ್. ರವಿಕುಮಾರ್ ಮಾತನಾಡಿ, 48ನೇ ಮಹೋತ್ಸವದ ಅಂಗವಾಗಿ ಅಭಿಷೇಕ, ಅನ್ನಸಂತರ್ಪಣೆ, ಆರೋಗ್ಯ ಶಿಬಿರ ಹೀಗೆ ಧಾರ್ಮಿಕ, ಸೇವಾ ಕಾರ್ಯಗಳ ಮೂಲಕ ಟ್ರಸ್ಟ್ ನಿಂದ ನಾಲ್ಕು ಕಾರ್ತಿಕ ಮಾಸಗಳು ಸಂಭ್ರಮ, ಸಡಗರದಿಂದ ಮಹದೇಶ್ವರರ ಪೂಜೆ ಮಾಡಿರುವುದಾಗಿ ಹೇಳಿದರು.

ಬೆಳಗ್ಗೆ 6 ಗಂಟೆಗೆ ಶ್ರೀ ಮಲೆಮಹದೇಶ್ವರ ಸ್ವಾಮಿಗೆ ಮಹಾರುದ್ರಾಭಿಷೇಕ, ವಿಶೇಷ ಪೂಜೆ, ಹೂವಿನ ಅಲಂಕಾರ ನಡೆಯಿತು. ಕೊನೆ ಕಾರ್ತಿಕ ಸೋಮವಾರ ಸಂಜೆ 7.30ಕ್ಕೆ ಶ್ರೀ ಮಲೆಮಹದೇಶ್ವರ ಸ್ವಾಮಿ ಮಹಾ ಉತ್ಸವವು ರಾಜಬೀದಿಗಳಲ್ಲಿ ಮೆರವಣಿಗೆ ಹೊರಟು ಸಂಜೆ 6 ಗಂಟೆಗೆ ದೇವಸ್ಥಾನ ತಲುಪಿತು. ಮೆರವಣಿಗೆಯಲ್ಲಿ ಬೀರೇಶ್ವರ ಕುಣಿತ ಮತ್ತು ತಮಟೆ, ನಗಾರಿ, ವಾದ್ಯ ಹಾಗೂ ಡೊಳ್ಳು ಕುಣಿತ, ನಾಗಸ್ವರ, ಮಂಗಳವಾದ್ಯಗಳಿಂದ ಕೂಡಿತು. ಬಡಾವಣೆಯ ಮನೆಗಳ ಮುಂದೆ ರಂಗೋಲಿ ಹಾಕಲಾಗಿತ್ತು, ಮನೆಯವರು ದೇವರಿಗೆ ಭಕ್ತಿಯಿಂದ ಪೂಜೆ ಸಲ್ಲಿಸಿದರು.ಈ ವೇಳೆ ಮಾತನಾಡಿದ ಶ್ರೀ ಮಲೆ ಮಹದೇಶ್ವರ ಸ್ವಾಮಿ ದೇವಾಲಯದ ಗೌ.ಅ. ಎಂ.ಶಿವಣ್ಣ ಮಾತನಾಡಿ, ಪ್ರತಿ ವರ್ಷದಂತೆ ಈ ಬಾರಿಯೂ ಅದ್ದೂರಿ ಮಲೆಮಹದೇಶ್ವರ ದೇವಾಲಯದ ರಥೋತ್ಸವ ಸೇರಿ ಇನ್ನಿತರ ಕಾರ್ಯಕ್ರಮಗಳು ಸರಾಗವಾಗಿ ನಡೆಯುತ್ತಿವೆ. ಬೆಳ್ಳಿ ರಥದಲ್ಲಿ ಮಹದೇಶ್ವರರ ಪ್ರತಿಮೆ ಮೆರವಣಿಗೆ ನಡೆದರೆ, ರಥದಲ್ಲಿ ಮಹದೇಶ್ವರ, ಆಂಜನೇಯ ಮೂರ್ತಿಗಳ ಮೆರವಣಿಗೆ ಭಕ್ತರು ಕಣ್ತುಂಬಿಕೊಂಡರು.



# ಬೀದಿ ನಾಯಿಗಳಿಗೆ ರೇಬಿಸ್ ಚುಚ್ಚು ಮದ್ದು

ಗುಂಡ್ಲುಪೇಟೆ. ಪಟ್ಟಣದಲ್ಲಿ ಪುರಸಭೆ ವ್ಯಾಪ್ತಿಯಲ್ಲಿ ಪಶು ಪಾಲನಾ ಇಲಾಖೆ ಹಾಗೂ ಪುರಸಭೆ ಸಹಯೋಗದಲ್ಲಿ ಬೀದಿ ನಾಯಿಗಳಿಗೆ ರೇಬಿಸ್ ಚುಚ್ಚು ಮದ್ದು ನೀಡಲಾಯಿತು

ನಂತರ ಪಶು ಪಾಲನಾ ಇಲಾಖೆಯ ವೈದ್ಯಾಧಿಕಾರಿ ಡಾ ನಾಗೇಂದ್ರ ಸ್ವಾಮಿ ಮಾತನಾಡಿ ನಾಯಿ ಕಡಿತದಿಂದ ಉಂಟಾಗುವ ರೇಬಿಸ್ ಸೋಂಕಿಗೆ ಯಾವುದೇ ಔಷಧವಿಲ್ಲ. ಜೊತೆಗೆ ಮಾರಣಾಂತಿಕವಾಗಿದೆ. ನಾಯಿ ಕಡಿದರೂ ಸೋಂಕು ಹರಡದಂತೆ ಮುಂಜಾಗ್ರತೆ ಕ್ರಮವಾಗಿ ಬೀದಿ ನಾಯಿಗಳಿಗೆ ರೇಬಿಸ್ ಚುಚ್ಚುಮದ್ದು ನೀಡಲಾಗಿದೆ ಹಾಗೆ ಬೀದಿ ನಾಯಿ ಗಳಿಗೆ ಎಬಿಸಿ ಯೋಜನೆಯಡ್ಡಿ ಶಸ್ತ್ರ ಹರಣ ಚಿಕಿತ್ಸೆ ನೀಡಲು ಟೆಂಡರ್ ಕರೆಯಲಾಗಿರುತ್ತದೆ ಎಂದು ತಿಳಿಸಿದರು ಈ ಸಂದರ್ಭದಲ್ಲಿ ಪುರಸಭೆ ಮುಖ್ಯ ಅಧಿಕಾರಿ ಶರವಣ ಹಾಗೂ ಪುರಸಭೆಯ ಸಿಬ್ಬಂದಿ ವರ್ಗ ಇನ್ನಿತರರು ಇದ್ದರು.



### ನಗರಕ್ಕೆ ಮುಖ್ಯಮಂತ್ರಿಗಳ ಆಗಮನ ಹಿನ್ನೆಲೆ

# ಜಿಲ್ಲಾ ಉಸ್ತುವಾರಿ ಸಚಿವರಿಂದ ಸಿದ್ಧತೆಗಳ ಪರಿಶೀಲನೆ

ಚಾಮರಾಜನಗರ, ಅಖಿಲ ಭಾರತ ಸಹಕಾರ ಸಪ್ತಾಹ ಸಮಾರೋಪ ಸಮಾರಂಭದ ಉದ್ಘಾಟನೆಗಾಗಿ ಮುಖ್ಯಮಂತ್ರಿಗಳಾದ ಸಿದ್ದರಾಮಯ್ಯ ಅವರು ನವೆಂಬರ್ 20ರಂದು ನಗರಕ್ಕೆ ಆಗಮಿಸುತ್ತಿರುವ ಹಿನ್ನೆಲೆಯಲ್ಲಿ ಪಶುಸಂಗೋಪನೆ, ರೇಷ್ಮೆ ಸಚಿವರು ಹಾಗೂ ಜಿಲ್ಲಾ ಉಸ್ತುವಾರಿ ಸಚಿವರಾದ ಕೆ. ವೆಂಕಟೇಶ್ ಅವರು ಸಿದ್ಧತೆಗಳನ್ನು ಪರಿಶೀಲಿಸಿದರು.

ಸಮಾರೋಪ ಸಮಾರಂಭ ಆಯೋಜನೆಯಾಗಿರುವ ನಗರದ ಡಾ. ಬಿ.ಆರ್. ಅಂಬೇಡ್ಕರ್ ಕ್ರೀಡಾಂಗಣಕ್ಕೆ ಭೇಟಿ ನೀಡಿ ಸಚಿವರು ವ್ಯಾಪಕವಾಗಿ ಸಿದ್ಧತೆಗಳನ್ನು ವೀಕ್ಷಿಸಿದರು. ಬೃಹತ್ ವೇದಿಕೆ, ನೆರಳಿನ ವ್ಯವಸ್ಥೆ, ಗಣ್ಯರ ಆಸನಗಳು, ಸಭಿಕರ ಆಸನಗಳು, ಬ್ಯಾರಿಕೇಡ್ ಅಳವಡಿಕೆ, ಉಪಹಾರ, ಕುಡಿಯುವ ನೀರು ವಿತರಣೆಗಾಗಿ ನಿರ್ಮಿಸಲಾಗಿರುವ ಕೌಂಟರ್ಗಳು, ಆರೋಗ್ಯ ಸಿಬ್ಬಂದಿ ನಿಯೋಜನೆ, ಭದ್ರತಾ ವ್ಯವಸ್ಥೆಗಳನ್ನು ವೀಕ್ಷಿಸಿದರು.

ಸಮಾರಂಭದ ಸ್ಥಳದ ಪಕ್ಕದಲ್ಲಿಯೇ ಸಾರ್ವಜನಿಕರಿಗಾಗಿ ಉಪಹಾರ ಸಿದ್ದಪಡಿಸಲು ಮಾಡಿರುವ ವ್ಯವಸ್ಥೆಗಳನ್ನು ಸಂಪೂರ್ಣವಾಗಿ ಪರಿಶೀಲಿಸಿ ಅಗತ್ಯ ಸೂಚನೆಗಳನ್ನು ಸಚಿವರು ನೀಡಿದರು. ಮುಖ್ಯಮಂತ್ರಿಗಳು, ಗಣ್ಯರು ಬರಲಿರುವ ಮಾರ್ಗಗಳು, ಸಾರ್ವಜನಿಕರು ಪ್ರವೇಶಿಸುವ ಮುಖ್ಯ ದ್ವಾರ, ವಾಹನಗಳ ನಿಲುಗಡೆ, ಗಣ್ಯರ ಊಟೋಪಾಚಾರಕ್ಕೆ ಕೈಗೊಂಡಿರುವ ವ್ಯವಸ್ಥೆಗಳನ್ನು ಜಿಲ್ಲಾ ಉಸ್ತುವಾರಿ ಸಚಿವರು ವೀಕ್ಷಿಸಿ ಸೂಕ್ತ ಮಾರ್ಗದರ್ಶನ ಮಾಡಿದರು. ಇದೇ ಸಂದರ್ಭದಲ್ಲಿ ಮಾಧ್ಯಮ ಪ್ರತಿನಿಧಿಗಳೊಂದಿಗೆ ಮಾತನಾಡಿದ ಜಿಲ್ಲಾ ಉಸ್ತುವಾರಿ ಸಚಿವರಾದ ಕೆ. ವೆಂಕಟೇಶ್ ಅವರು ಸಹಕಾರ ಸಪ್ತಾಹ ಸಮಾರೋಪ ಸಮಾರಂಭಕ್ಕೆ ಅಂದಾಜು 30 ರಿಂದ 40 ಸಾವಿರ ಜನರು ಬರುವ ನಿರೀಕ್ಷೆಯಿದೆ. ಈಗಾಗಲೇ 25 ಸಾವಿರ ಆಸನಗಳನ್ನು ಹಾಕಲಾಗಿದೆ. ಇನ್ನೂ 10 ಸಾವಿರ ಜನರಿಗೆ ಆಗುವಷ್ಟು ಹೆಚ್ಚುವರಿ ಆಸನಗಳನ್ನು ಇಟ್ಟುಕೊಳ್ಳಲಾಗಿದೆ ಎಂದರು. ಕಾರ್ಯಕ್ರಮಕ್ಕೆ ಬರುವ ಜನರಿಗೆ ಯಾವುದೇ ಕೊರತೆಯಾಗದಂತೆ ಎಲ್ಲ ವ್ಯವಸ್ಥೆಗಳನ್ನು ಅಧಿಕಾರಿಗಳು ಮಾಡಿದ್ದಾರೆ. ಬರುವ ಜನರಿಗೆ ಉಪಹಾರ, ಕುಡಿಯುವ ನೀರು, ಹಾಲು ಒಕ್ಕೂಟದಿಂದ ಮಜ್ಜಿಗೆ ವಿತರಣೆ ಮಾಡಲಾಗುತ್ತಿದೆ. ಒಟ್ಟಾರೆ ಕಾರ್ಯಕ್ರಮವನ್ನು ಅಚ್ಚುಕಟ್ಟಾಗಿ ನಡೆಸಲು ಅಧಿಕಾರಿಗಳು ಆಸಕ್ತಿಯಿಂದ ಕೆಲಸ ಮಾಡಿದ್ದಾರೆ. ಸಿದ್ಧತೆಗಳನ್ನು ವೀಕ್ಷಿಸಿದ್ದೇನೆ. ಎಲ್ಲ ವ್ಯವಸ್ಥೆಯನ್ನು ಕೈಗೊಳ್ಳಲಾಗಿದೆ ಎಂದು ಹೇಳಿದರು. ಕಾಡಾ ಅಧ್ಯಕ್ಷರಾದ ಪಿ. ಮರಿಸ್ವಾಮಿ, ಜಿಲ್ಲಾ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಅಧ್ಯಕ್ಷರಾದ ಹೆಚ್.ವಿ. ಚಂದ್ರು, ಚೂಡಾ ಅಧ್ಯಕ್ಷರಾದ ಮಹಮ್ಮದ್ ಅಸ್ಗರ್ ಮುನ್ನಾ, ಜಿಲ್ಲಾ ಸಹಕಾರ ಒಕ್ಕೂಟ ಅಧ್ಯಕ್ಷರಾದ ಹೆಚ್.ಎಸ್. ನಂಜುಂಡಪ್ರಸಾದ್, ಜಿಲ್ಲಾಧಿಕಾರಿ ಶಿಲ್ಪಾ ನಾಗ್, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ. ಬಿ.ಟಿ. ಕವಿತಾ, ಹೆಚ್ಚುವರಿ ಜಿಲ್ಲಾಧಿಕಾರಿ ಟಿ. ಜವರೇಗೌಡ, ತಹಶೀಲ್ದಾರರಾದ ಗಿರಿಜಾ ಇದ್ದರು.



## ಜಿಲ್ಲಾ ಅಥ್ಲೆಟಿಕ್ ಕ್ರೀಡಾಕೂಟ

ಮೈಸೂರು: ನಗರದ ಚಾಮುಂಡಿ ವಿಹಾರ ಕ್ರೀಡಾಂಗಣದಲ್ಲಿ ನ. 23 ರಂದು ಬೆಳಗ್ಗೆ 8ಕ್ಕೆ ಜಿಲ್ಲಾ ಮಟ್ಟದ ಅಥ್ಲೆಟಿಕ್ ಕ್ರೀಡಾಕೂಟ ಆಯೋಜಿಸಲಾಗಿದೆ ಎಂದು ನಿರೀಕ್ಷಾ ಫೌಂಡೇಷನ್ ಟ್ರಸ್ಟ್ ಅಧ್ಯಕ್ಷ ಸುಭಾಷ್ ತಿಳಿಸಿದರು.

ನಗರದಲ್ಲಿ ಸುದ್ದಿಗಾರರೊಡನೆ ಮಾತನಾಡಿ, ನೋಂದಣಿ ಶುಲ್ಕ ತಲಾ 300 ರೂ. ಇದ್ದು, ಇದನ್ನು ಖರ್ಚು ವೆಚ್ಚಕ್ಕೆ ಬಳಸಲಾಗುವುದು. ಎಲ್‌ಕೆಜಿಯಿಂದ ಹತ್ತನೇ ತರಗತಿವರೆಗಿನ ಮಕ್ಕಳು ಪಾಲ್ಗೊಳ್ಳಬಹುದಾಗಿದೆ. ವಿಜೇತರಿಗೆ ಪದಕ, ಪ್ರಮಾಣಪತ್ರ ನೀಡಲಾಗುವುದೆಂದರು. ಕಾರ್ಯಕರ್ತ ಮಂಜುನಾಥ್ ಹಾಜರಿದ್ದರು.

## ನ.23ರಿಂದ ಯೋಗ ಶಿಬಿರ

ಮೈಸೂರು: ಕೆ.ಆರ್. ನಗರದ ಪತಂಜಲಿ ಯೋಗಾಶ್ರಮ ಟ್ರಸ್ಟ್ ನ. 23 ರಿಂದ 13 ದಿನಳ ಸರಳ ಸಮೃದ್ಧಿ ಯೋಗ ಶಿಬಿರ ಆಯೋಜಿಸಲಾಗಿದೆ ಎಂದು ಉಪಾಧ್ಯಕ್ಷ ಎನ್.ಕೆ. ಅಣ್ಣಯ್ಯ ತಿಳಿಸಿದರು.

ಗದಲ್ಲಿ ಸುದ್ದಿಗಾರರೊಡನೆ ಮಾತನಾಡಿ, ಶಾಸಕ ಡಿ. ರವಿಶಂಕರ್ ಉದ್ಘಾಟಿಸುವರು, ಗುರೂಜಿ ಪ್ರಕಾಶ್ ಯೋಗಿ ಸಾನ್ನಿಧ್ಯ ವಹಿಸುವರು, ಇ.ಆರ್. ಪ್ರಸಾದ್ ಗುರೂಜಿ ಪ್ರಾಸ್ತಾವಿಕ ನುಡಿ ಆಡುವರು, ಪಿ.ಆರ್. ವಿಶ್ವನಾಥ ಶೆಟ್ಟಿ ಅಧ್ಯಕ್ಷತೆ ವಹಿಸುವರು, ಶಿಬಿರದ ಪ್ರಧಾನ ಸಂಚಾಲಕರಾದ ಕೆ.ವಿ. ಶ್ರೀಧರ್, ಎಲ್. ಕೃಷ್ಣಮೂರ್ತಿ, ಡಿ.ಟಿ.ಕೆ. ಪ್ರಸಾದ್ ಇನ್ನಿತರರು ಹಾಜರಿರುವರೆಂದರು. ಸರಳ ಸಮೃದ್ಧಿ ಯೋಗದಿಂದ ಪ್ರತಿಯೊಬ್ಬರ ಸರ್ವಾಂಗೀಣ ಅಭಿವೃದ್ಧಿಯಾಗಲಿದೆ. ಜೊತೆಗೆ ವೈದ್ಯ ಪದ್ಧತಿಗೆ ಸವಾಲೆಂಬಂತಿರವ ಅಸ್ತಮಾ, ಬಿಪಿ. ಮೂರ್ಛೆರೋಗ, ಹೃದಯ ತೊಂದರೆ, ಮಧುಮೇಹ ಮೊದಲಾದವುಗಳಿಂದ ಚೇತರಿಸಿಕೊಳ್ಳಲು ಸಹಕಾರಿಯಾಗಿಲಿದೆ ಎಂದರು.ಎಲ್. ಕೃಷ್ಣಮೂರ್ತಿ, ಡಿ.ಟಿ.ಕೆ. ಪ್ರಸಾದ್ ಇದ್ದರು.

## 23ಕ್ಕೆ ಬೆಳಕಿನ ಬೇಸಾಯ ಶಿಬಿರ

ಮೈಸೂರು: ನಗರದ ಬೋಗಾದಿ ಬಳಿಯ ತಮ್ಮ ಬನವಾಸಿ ತೋಟದಲ್ಲಿ ನ. 23 ರಂದು ಬೆಳಗ್ಗೆ 10 ರಿಂದ ಸಂಜೆ 5 ರವರೆಗೆ ಬೆಳಕಿನ ಬೇಸಾಯ ಎಂಬ ಕೃಷಿ ಚಟುವಟಿಕೆಯನ್ನು ಲಾಭದಾಯಕವಾಗಿಸುವ ಶಿಬಿರವನ್ನು ರೈತರು, ವಿದ್ಯಾರ್ಥಿಗಳು ಹಾಗೂ ಆಸಕ್ತರಿಗಾಗಿ ಆಯೋಜಿಸಿರುವುದಾಗಿ ಆಯೋಜಕ ಟಿ.ಜಿ.ಎಸ್. ಅವಿನಾಶ್ ತಿಳಿಸಿದರು.

ನಗರದಲ್ಲಿ ಸುದ್ದಿಗಾರರೊಡನೆ ಮಾತನಾಡಿ, ಇತ್ತೀಚಿನ ದಿನಗಳಲ್ಲಿ ಹವಾಮಾನ ಬದಲಾವಣೆಯಿಂದಾಗಿ ಅತಿವೃಷ್ಠಿ, ಅನಾವೃಷ್ಠಿ ಸಂಭವಿಸುತ್ತಿವೆ. ಇಂತಹ ಸಂದರ್ಭದಲ್ಲಿ ಕೃಷಿಯಲ್ಲಿ ಯಶಸ್ಸು ಕಾಣುವುದು ಹೇಗೆ ಎಂಬಿವೇ ಮೊದಲಾದ ಮಾಹಿತಿ ಮೂಲಕ ತಿಳೀವಳಿಕೆ ಮೂಡಿಸಲಾಗುವುದು. ಉಳುಮೆ ಪ್ರತಿಷ್ಠಾನದ ಆಶ್ರಯದಲ್ಲಿ ಈ ಕಾರ್ಯಕ್ರಮ ನಡೆಯುತ್ತಿದೆ. ನೋಂದಣಿ ರೈತರು, ವಿದ್ಯಾರ್ಥಿಳಿಗೆ ಶುಲ್ಕವಿಲ್ಲ, ಇತರರು ಬೇಕಿದ್ದರೆ ದೇಣಿಗೆ ನೀಡಬಹುದಾಗಿದೆ. ಹೆಚ್ಚಿನ ಮಾಹಿತಿಗೆ ದೂ. 81978 56132 ನ್ನು ಸಂಪರ್ಕಿಸಬಹುದಾಗಿದೆ ಎಂದರು. ರುದ್ರೇಗೌಡ ಪಾಟೀಲ್ ಇದ್ದರು.

## ಸಫಾರಿ ಪುನರಾರಂಭಿಸಲು ಹೋಟೆಲ್ ಮಾಲೀಕರ ಸಂಘ ಆಗ್ರಹ

ಮೈಸೂರು: ಬಂಡಿಪುರ, ನಾಗರಹೊಳೆ ಅರಣ್ಯದಲ್ಲಿನ ಸಫಾರಿ ಮೂಲಕ ವೀಕ್ಷಣೆಗೆ ನಿತ್ಯ ನೂರಾರು ಮಂದಿ ಪ್ರವಾಸಿಗರು ದೇಶ–ವಿದೇಶಿಗಳಿಂದ ಆಗಮಿಸುತ್ತಿದ್ದರು. ಈಗ ಸಫಾರಿ ಬಂದ್ ಆಗಿರುವುದರಿಂದ ಪ್ರವಾಸೋದ್ಯಮಕ್ಕೆ ನಷ್ಟವಾಗಲಿದ್ದು, ಈ ಹಿನ್ನೆಲೆಯಲ್ಲಿ ಸಫಾರಿ ಪುನರ್ ಆರಂಭಿಸಬೇಕೆಂದು ಮೈಸೂರು ಹೋಟೆಲ್ ಮಾಲೀಕರ ಸಂಘದ ಅಧ್ಯಕ್ಷ ಸಿ.ನಾರಾಯಣಗೌಡ ಆಗ್ರಹಿಸಿದ್ದಾರೆ.

ದಕ್ಷಿಣ ಭಾರತದ ಪ್ರಮುಖ ಅರಣ್ಯ ಹಾಗೂ ಹುಲಿ ಸಂರಕ್ಷಿತ ಪ್ರದೇಶಗಳಾದ ಬಂಡೀಪುರ ಹಾಗೂ ನಾಗರಹೊಳೆ ಎಲ್ಲರಿಗೂ ಚಿರಪರಿಚಿತ. ಈಗಲೂ ದೇಶದಾದ್ಯಂತ ಹಾಗೂ ವಿದೇಶದಿಂದ ಪ್ರವಾಸಿಗರು ಈ ಅರಣ್ಯ ಗಳನ್ನು ನೋಡಲೆಂದು ಹಾಗೂ ಸಫಾರಿ ಅನುಭವಿಸಲೆಂದು ಬೇಟಿ ನೀಡಲು ಆಗಮಿಸುತ್ತಾರೆ. ಆದರೆ ಈಗ ಇಲ್ಲಿ ಸಫಾರಿ ಸ್ಥಗಿತಗೊಂಡಿರುವ ಕಾರಣ ಸಾಕಷ್ಟು ಪ್ರವಾಸಿಗರು ನಿರಾಸೆಗೊಳಗಾಗಿದ್ದಾರೆ. ಮೈಸೂರಿಗೆ ಬರುವ ಪ್ರವಾಸಿಗರು ಅರಮನೆ, ಜೂ, ಚಾಮುಂಡಿಬೆಟ್ಟ ನಂತರ ಮುಖ್ಯವಾಗಿ ಭೇಟಿ ನೀಡುವ ಜಾಗ ಬಂಡೀಪುರ ಹಾಗೂ ನಾಗರಹೊಳೆ. ಮೈಸೂರಿಗೆ ಬರುವ ಬಹುತೇಕ ಎಲ್ಲ ಪ್ರವಾಸಿಗರೂ ಇಲ್ಲಿಗೆ ಭೇಟಿ ಕೊಡುತ್ತಾರೆ. ಇದರಿಂದಾಗಿ ನಮ್ಮ ನಾಡಿನ ಭವ್ಯ ಅರಣ್ಯ ಸಂಪತ್ತಿನ ಪರಿಚಯ ಜನರಿಗೆ ಆಗುವ ಜೊತೆಗೆ ನಮ್ಮ ಆರ್ಥಿಕತೆಯೂ ಪ್ರವಾಸೋದ್ಯಮದ ಮೂಲಕ ಉತ್ತಮಗೊಳ್ಳುತ್ತದೆ. ಸಫಾರಿಗೆಂದು ಕೆಲಸ ಮಾಡುವ ಸಾವಿರಾರು ಜನರ ಕುಟುಂಬಗಳು ಇದರ ಮೇಲೆ ಅವಂಬಿತವಾಗಿವೆ.

ಸಫಾರಿ ಇಲ್ಲದಿದ್ದರೆ ಅವರೆಲ್ಲರ ಕುಟುಂಬಗಳಿಗೂ ಬೇರೆ ದಿಕ್ಕು ಇಲ್ಲದಂತಾಗುತ್ತದೆ. ಈ ಭಾಗದಲ್ಲಿರುವ ಎಲ್ಲ ಹೋಟೆಲ್‌ಗಳು ಈ ಪ್ರವಾಸಿ ಆಕರ್ಷಣೆ ಇದೆ ಎಂಬ ಆಧಾರದ ಮೇಲೆ ಸಾವಿರಾರು ಕೋಟಿ ರೂಪಾಯಿಗಳನ್ನು ಹೂಡಿಕೆ ಮಾಡಿವೆ. ಇನ್ನು ಕೆಲವು ಹೋಟೆಲ್ ಮಾಲೀಕರು ಇಲ್ಲಿನ ಪ್ರವಾಸೋದ್ಯಮವನ್ನೇ ನಂಬಿ ಬ್ಯಾಂಕ್‌ಗಳಲ್ಲಿ ಕೋಟ್ಯಂತರ ರೂಪಾಯಿಗಳ ಸಾಲ ಪಡೆದು ರೆಸಾರ್ಟ್‌ಗಳನ್ನು ನಡೆಸುತ್ತಿದ್ದಾರೆ. ಈಗಾಗಲೇ ಮುಂಗಡ ಬುಕ್ ಆಗಿದ್ದ ರೂಂಗಳೂ ಕ್ಯಾನ್ಸಲ್ ಆಗುತ್ತಿದ್ದು, ಹೋಟೆಲ್ ಹಾಗೂ ರೆಸಾರ್ಟ್ ಮಾಲೀಕರು ಕಂಗಾಲಾಗಿ ಪರದಾಡುವಂತಾಗಿದೆ. ಈ ಹೋಟೆಲ್‌ಗಳಿಗೆ, ರೆಸಾರ್ಟ್‌ಗಳಿಗೆ ಜನರನ್ನು ಕರೆದುಕೊಂಡು ಬರುವ ಟ್ರಾವಲ್ ಏಜೆಂಟ್‌ಗಳು ಹಾಗೂ ವಾಹನ ಚಾಲಕರಿಗೂ ದೊಡ್ಡ ಹೊಡೆತ ಬಿದ್ದಂತಾಗಿದೆ. ಇದಕ್ಕೆ ಪೂರಕವಾಗಿ ಪ್ರವಾಸಿ ಗೈಡ್‌ಗಳಿಗೂ ಸಮಸ್ಯೆಯಾಗಿದೆ.

ಈ ಬಗ್ಗೆ ಗಮನಹರಿಸಿ ಸಫಾರಿ ಪುನರಾರಂಭಿಸಬೇಕಾಗಿ, ಇದನ್ನು ನಂಬಿರುವವರ ಜೀವನ ಹಾಗೂ ಪ್ರವಾಸೋದ್ಯಮದ ದೃಷ್ಟಿಯಿಂದ ಈ ತಮ್ಮ ನಿರ್ಧಾರ ವಾಪಸ್ ಹಿಂಪಡೆಯಲು ಕ್ರಮ ಕೈಗೊಳ್ಳಬೇಕು ಮತ್ತು ಈ ಹಿಂದಿನಂತೆ ಸಫಾರಿ ಮುಂದುವರಿವರಿಸಬೇಕಾಗಿ ಈ ಮೂಲಕ ಸರಕಾರ ವನ್ನು ಒತ್ತಾಯಿಸುತ್ತಿದ್ದೇವೆ.

ವರ್ತಮಾನ
ಜಾಹಿರಾತಿಗೆ ಉತ್ತಮ ಮಾಧ್ಯಮ

## 23ಕ್ಕೆ ಪ್ರೊ.ಸಿ.ಸಿದ್ಧಾಶ್ರಮ ಕೃತಿಗಳ ಬಿಡುಗಡೆ




ಮೈಸೂರು: ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು ಹಾಗೂ ಉಷಾ ಪ್ರಕಾಶನ ಸಹಯೋಗದೊಂದಿಗೆ ನ.23ರಂದು ಸಂಜೆ 4 ಗಂಟೆಗೆ ಜಿಲ್ಲಾ ಕನ್ನಡ ಸಾಹಿತ್ಯ ಭವನದಲ್ಲಿ ಪ್ರೊ.ಸಿ.ಪಿ.ಸಿದ್ಧಾಶ್ರಮ ಅವರ ನೆಲದ ನಕ್ಷತ್ರಗಳು ಮತ್ತುಅರಿವಿನ ದೀವಿಗೆ ಕೃತಿ ಬಿಡುಗಡೆ ಸಮಾರಂಭ ಆಯೋಜಿಸಲಾಗಿದೆ ಎಂದು ಪ್ರಾಧ್ಯಾಪಕ ಡಾ.ಆರ್.ಗುರುಸ್ವಾಮಿ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕೃತಿಯನ್ನು ಹಿರಿಯ ಸಾಹಿತಿ ಪ್ರೊ.ರಾಮೇಗೌಡ (ರಾಗೌ) ಬಿಡುಗಡೆ ಗೊಳಿಸಲಿದ್ದಾರೆ. ಕೃತಿ ಕುರಿತು ಸಾಹಿತಿ ಪ್ರೊ.ಕೆ.ತಿಮ್ಮಯ್ಯ, ಉಪನ್ಯಾಸಕಿ ಡಾ.ಹೆಚ್.ಎಲ್.ಶೈಲಾ ಮಾತ ನಾಡಲಿದ್ದಾರೆ. ಅಧ್ಯಕ್ಷತೆಯನ್ನು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು ಅಧ್ಯಕ್ಷ ಮಡ್ಡಿಕೆರೆ ಗೋಪಾಲ್ ವಹಿಸಲಿದ್ದಾರೆ ಎಂದರು. ಈ ವೇಳೆ ಸಾಹಿತಿ ಪ್ರೊ.ಕೆ.ತಿಮ್ಮಯ್ಯ ಮಾತ ನಾಡಿ, ಸಂಸ್ಕೃತಿ ಚಿಂತಕರಾಗಿ ಗುರುತಿಸಿಕೊಂಡಿರುವ ಪ್ರೊ.ಸಿ.ಪಿ.ಸಿದ್ಧಾಶ್ರಮ ಅವರು ಹಲವಾರು ದಶಕಗಳಿಂದ ತಮ್ಮ ಸಾಹಿತ್ಯದ ಮೂಲಕ ಸಮಾಜದ ಬದಲಾವಣೆಗಾಗಿ ಸಂಶೋಧನೆ, ವಿಮರ್ಶಕರಾಗಿ ಸಾಕಷ್ಟು ಕೊಡಗುಗೆ ನೀಡಿದ್ದು, ಸಮ ಸಮಾಜ ನಿರ್ಮಾಣ ಮಾಡುವ ನಿಟ್ಟಿನಲ್ಲಿ ಕೃತಿಗಳನ್ನು ಬರೆದಿದ್ದಾರೆ. ಅವರ ವಿದ್ಯಾರ್ಥಿಗಳು, ಅಭಿಮಾನಿಗಳು ಹೆಚ್ಚಿನ ಸಂಖ್ಯೆಯಲ್ಲಿ ಕಾರ್ಯಕ್ರಮಕ್ಕೆ ಆಗಮಿಸಿ ಎಂದು ಕರೆ ನೀಡಿದರು.

ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು ಅಧ್ಯಕ್ಷ ಮಡ್ಡಿಕೆರೆ ಗೋಪಾಲ್, ಉಷಾ ಪ್ರಕಾಶಕ ಕೆ.ಸಿ.ಓಂಕಾರಪ್ಪ ಉಪಸ್ಥಿತರಿದ್ದರು.

## ಮಹಾಜನ ಸಂಶೋಧನೆಗೆ ವಿಶ್ವ ಮಾನ್ಯತೆ




ಮೈಸೂರು: ಪೂಜಾ ಭಾಗವತ್ ಸ್ಮಾರಕ ಮಹಾಜನ ಸ್ನಾತಕೋತ್ತರ ಕಾಲೇಜು ಸಂಶೋಧನಾ ವಿಭಾಗವು ಕ್ಯಾನ್ಸರ್ ವೇಳೆ ದೇಹವು ಸ್ನಾಯು ಮತ್ತು ಸ್ನಾಯುಶಕ್ತಿ ಕಳೆದುಕೊಳ್ಳುವುದು ಹೇಗೆ ಎಂಬ ಬಗ್ಗೆ ಸಂಶೋಧನೆ ನಡೆಸಿ ಕಾರಣ ಪತ್ತೆ ಹಚ್ಚಿದ್ದು, ಇದಕ್ಕೆ ಈಗ ವಿಶ್ವ ಮಾನ್ಯತೆ ದೊರೆತಿದೆ ಎಂದು ಜೀವ ರಸಾಯನ ವಿಭಾಗದ ಪ್ರೊ.ಎ.ಜೆ.ಮಹಾದೇಶ್ ಪ್ರಸಾದ್ ತಿಳಿಸಿದರು.

ನಗರದಲ್ಲಿ ಸುದ್ದಿಗಾರರೊಡನೆ ಮಾತನಾಡಿ, ಕ್ಯಾನ್ಸರ್ ವೇಳೆ ಸ್ನಾಯುನಾಶವಾಗುವ ಪರಿಸ್ಥಿತಿಗೆ ಕ್ಯಾಚೆಕ್ಸಿಯಾ ಎನ್ನಲಾಗುತ್ತದೆ. ಕ್ಯಾನ್ಸರ್ ರೋಗಿಗಳು ಈ ಸಮಸ್ಯೆ ಕಾರಣ ದೇಹದ ತೂಕ ಕಳೆದುಕೊಳ್ಳುತ್ತಾರೆ. ಕ್ಯಾನ್ಸರ್ ಪೀಡಿತರಲ್ಲಿ ಶೇ. 20 ರಷ್ಟು ಮಂದಿ ಇದೇ ಕಾರಣದಿಂದಲೇ ಶೀಘ್ರ ಸಾವನ್ನಪ್ಪುತ್ತಾರೆ. ಹೀಗಾಗಿ ಈ ಸಮಸ್ಯೆ ಹೇಗೆ ಸೃಷ್ಟಿಯಾಗುತ್ತದೆ ಎಂಬುದನ್ನು ತಮ್ಮ ಸಂಶೋಧನೆ ಪತ್ತೆ ಹಚ್ಚಿದೆ. ಇದರಿಂದಾಗಿ ಇತರ ಯಾರು ಬೇಕಾದರೂ ಈ ಸಮಸ್ಯೆಯಿಂದ ಹೊರ ಬರುವ ಬಗ್ಗೆ ಸಂಶೋಧನೆ ನಡೆಸಿ ಔಷಧಿ ಕಂಡು ಹಿಡಿಯಬಹುದಾಗಿದೆ ಎಂದರು.

ಈ ಸಂಶೋಧನೆಯಲ್ಲಿ ತಾವು, ತಮ್ಮ ವಿದ್ಯಾರ್ಥಿ ಕೋಲ್ಕತಾ ಮೂಲದ ಡಾ. ಸೌತೆ ಶೋ ಪಾಲ್ಗೊಂಡಿದ್ದೆವು. ಬೆಂಗಳೂರಿನ ಭಾರತೀಯ ವಿಜ್ಞಾನ ಸಂಸ್ಥೆಯ ಖ್ಯಾತ ಸ್ನಾಯುತಜ್ಞ ಪ್ರೊ. ಉಪೇಂದ್ರ ಸಹಯೋಗ ನೀಡಿದರು. ಮಾನವನ ವಂಶ ವಾಹಿಗಳಿಗೆ ಸಮೀಪದ ವಂಶವಾಹಿ ಹೊಂದಿರುವ ಚಿಕ್ಕದಾದರೂ ಶಕ್ತಿಶಾಲಿ ಎನಿಸಿಕೊಂಡಿರುವ ಹಾಗೂ ಪೂರ್ಣ ಪಾರದರ್ಶನ ದೇಹ ಹೊಂದಿರುವ ಜೀಬ್ರಾಫಿಶ್ ಎಂಬ ಮೀನು ಬಳಸಿಕೊಳ್ಳಲಾಯಿತು. ಇದರ ದೇಹಕ್ಕೆ ಕ್ಯಾನ್ಸರ್ ಸೇರ್ಪಡೆ ಮಾಡಿ, ಆ ಮೂಲಕ ಈ ಸಂಶೋಧನೆ ನಡೆಸಲಾಯಿತೆಂದರು. ಸಂಸ್ಥೆ ಮುಖ್ಯಸ್ಥರಾದ ವಿಜಯಲಕ್ಷ್ಮಿ ಭಾಗವತ್, ಸಿಇಒ ಪ್ರೊ. ರಮೇಶ್, ಡಾ. ಸೌತೇನನ್ ಶೋ ಇದ್ದರು.

# ಸಹಕಾರ ಸಂಘಗಳಿಂದ ರಾಷ್ಟ್ರಾಭಿವೃದ್ಧಿ

### ವಿಧಾನ ಪರಿಷತ್ ಸದಸ್ಯಎಂ.ಪಿ.ಸುಜಾ ಕುಶಾಲಪ್ಪ ಅಭಿಮತ | ಮಡಿಕೇರಿಯಲ್ಲಿ ಅಖಿಲ ಭಾರತ 72 ನೇ ಸಹಕಾರ ಸಪ್ತಾಹದ ಸಮಾರೋಪ ಸಮಾರಂಭ

ಮಡಿಕೇರಿ:–ಸಹಕಾರ ಸಂಘಗಳ ಬೆಳವಣಿಗೆ ರಾಷ್ಟ್ರದ ಅಭಿವೃದ್ಧಿಗೆ ಸಹಕಾರಿಯಾಗಿದ್ದು, ಸಹಕಾರ ಸಂಘಗಳ ಕೊಡುಗೆ ಅಪಾರವಾಗಿದೆ ಎಂದು ವಿಧಾನ ಪರಿಷತ್ ಸದಸ್ಯ ಎಂ.ಪಿ.ಸುಜಾ ಕುಶಾಲಪ್ಪ ತಿಳಿಸಿದ್ದಾರೆ.

ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳ ನಿಯಮಿತ, ಕೊಡಗು ಜಿಲ್ಲಾ ಸಹಕಾರ ಯೂನಿಯನ್ ನಿಯಮಿತ, ಕೊಡಗು ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕ್, ಸಹಕಾರ ಇಲಾಖೆ, ಕರ್ನಾಟಕ ಇನ್‌ಸ್ಟಿಟ್ಯೂಟ್ ಆಫ್ ಕೋ–ಆಪರೇಟಿವ್ ಮ್ಯಾನೇಜ್‌ಮೆಂಟ್ ಹಾಗೂ ಸ್ಥಳೀಯ ಎಲ್ಲಾ ಸಹಕಾರ ಸಂಘಗಳ ಸಂಯುಕ್ತ ಆಶ್ರಯದಲ್ಲಿ ಕೊಡಗು ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕ್‌ನ 'ಉನ್ನತಿ' ಭವನದ ಪಂದ್ಯಂಡ ಐ.ಬೆಳ್ಯಪ್ಪ ಸ್ಮಾರಕ ಸಭಾಂಗಣದಲ್ಲಿ ಗುರುವಾರ ನಡೆದ ಅಖಿಲ ಭಾರತ 72 ನೇ ಸಹಕಾರ ಸಪ್ತಾಹದ ಸಮಾರೋಪ ಸಮಾರಂಭದ ಅಂಗವಾಗಿ 'ಜಾಗತಿಕ ಸ್ಪರ್ಧಾತ್ಮಕತೆಗಾಗಿ ನವನಾವಿನ್ಯತೆಯ ಸಹಕಾರಿ ವ್ಯವಹಾರದ ಮಾದರಿಗಳು' ದಿನಾಚರಣೆ ಹಾಗೂ ಕೊಡಗು ಜಿಲ್ಲಾ ಸಹಕಾರ ಯೂನಿಯನ್‌ನಿಂದ ಆಯ್ಕೆಗೊಂಡ ಕೊಡಗಿನ ಶ್ರೇಷ್ಠ ಸಹಕಾರಿಗಳಿಗೆ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಪಾಲ್ಗೊಂಡು ಅವರು ಮಾತನಾಡಿದರು.

ರೈತರ ಬದುಕಿಗೆ ಸಹಕಾರ ಸಂಘಗಳು ಬೆನ್ನುಲುಬಾಗಿದ್ದು, ಕೃಷಿ ಚಟುವಟಿಕೆಯನ್ನು ಕೈಗೊಳ್ಳಲು ಸಹಕಾರ ಸಂಘಗಳು ಸಹಕಾರಿಯಾಗಿವೆ ಎಂದು ಸುಜಾ ಕುಶಾಲಪ್ಪ ಅವರು ನುಡಿದರು.

ಕೊಡಗು ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕ್‌ನ ಅಧ್ಯಕ್ಷ ಕೊಡಂದೇರ ಪಿ.ಗಣಪತಿ ಅವರು ಮಾತನಾಡಿ ಸಹಕಾರ ಸಂಘಗಳ ಬ್ಯಾಂಕ್‌ನಲ್ಲಿ ಏಕರೂಪದ ತಂತ್ರಾಂಶ ಅಳವಡಿಸಿಕೊಳ್ಳಲಾಗಿದೆ. ಜತೆಗೆ ರಾಷ್ಟ್ರೀಕೃತ ಬ್ಯಾಂಕ್ ಮಾದರಿಯಲ್ಲಿ ಸಹಕಾರ ಬ್ಯಾಂಕ್‌ಗಳಲ್ಲಿಯೂ ಸಹ ಡಿಜಿಟಲೀಕರಣಕ್ಕೆ ಮುಂದಾಗಲಾಗಿದೆ ಎಂದರು. ಸಹಕಾರ ಬ್ಯಾಂಕುಗಳನ್ನು ಅಭಿವೃದ್ಧಿ ಪಡಿಸುವಲ್ಲಿ ಕರ್ನಾಟಕ, ಮಹಾರಾಷ್ಟ್ರ ಮತ್ತಿತರ ರಾಜ್ಯಗಳಲ್ಲಿ ಪೈಲೆಟ್ ಯೋಜನೆ ರೂಪಿಸಲಾಗಿದೆ ಎಂದು ತಿಳಿಸಿದರು. ಜಿಲ್ಲೆಯಲ್ಲಿ ಸಹಕಾರ ಸಂಘಗಳು ಸ್ವಂತ ಬಂಡವಾಳ ಹೊಂದಿದ್ದು, ರಾಷ್ಟ್ರೀಕೃತ ಬ್ಯಾಂಕ್ ಮಾದರಿಯಲ್ಲಿ ಕಾರ್ಯನಿರ್ವಹಿಸುತ್ತವೆ ಎಂದು ತಿಳಿಸಿದರು.



**ರೈತರಿಗೆ ಅನುಕೂಲವಾಗಿರುವುದು ವಿಶೇಷ**

**ರಾಷ್ಟ್ರವು ಇಂದಿಗೂ ಸಹ ಕೃಷಿ ಪ್ರಧಾನವಾಗಿದ್ದು, ದೇಶದ ಅಭಿವೃದ್ಧಿಯಲ್ಲಿ ಪ್ರಮುಖ ಪಾತ್ರ ವಹಿಸಿದೆ. ಆ ನಿಟ್ಟಿನಲ್ಲಿ ಕೃಷಿಗೆ ಪೂರಕವಾಗಿ ಸಹಕಾರ ಸಂಘಗಳು ಕಾರ್ಯ ನಿರ್ವಹಿಸುತ್ತಿವೆ ಎಂದರು.ಕೃಷಿ, ತೋಟಗಾರಿಕೆ, ಹಾಲು ಉತ್ಪಾದನೆ, ಸಕ್ಕರೆ, ಗೃಹ ನಿರ್ಮಾಣ, ಸೇರಿದಂತೆ ಹಲವು ಕ್ಷೇತ್ರಗಳಲ್ಲಿ ಸಹಕಾರ ಸಂಘಗಳು ರೈತರಿಗೆ ಅನುಕೂಲವಾಗಿರುವುದು ವಿಶೇಷವಾಗಿದೆ ಎಂದು ಸುಜಾ ಕುಶಾಲಪ್ಪ ತಿಳಿಸಿದರು. ಗ್ರಾಮೀಣ ಪ್ರದೇಶದ ಪ್ರತಿಯೊಬ್ಬರಿಗೂ ಸಾಲ ಸೌಲಭ್ಯ ಹಾಗೂ ಶೈಕ್ಷಣಿಕ ಸೌಲಭ್ಯ ಕಲ್ಪಿಸುವಲ್ಲಿ ಸಹಕಾರ ಕ್ಷೇತ್ರ ಇಂದಿಗೂ ಸಹ ಕೈ ಜೋಡಿಸಿವೆ ಎಂದರು. ಕೃಷಿಕರು ಸಹಕಾರ ಬ್ಯಾಂಕ್‌ನಲ್ಲಿ ಸುಲಭವಾಗಿ ಸಾಲ ಪಡೆದು ರೈತ ಚಟುವಟಿಕೆಯಲ್ಲಿ ತೊಡಗಿಸಿಕೊಳ್ಳಬಹುದಾಗಿದೆ. ಪಡೆದ ಸಾಲವನ್ನು ಸಕಾಲದಲ್ಲಿ ಪಾವತಿಸುತ್ತಿರುವುದು ಸಹ ಕೊಡಗು ಜಿಲ್ಲೆಯ ವಿಶೇಷವಾಗಿದೆ ಎಂದರು.**

ಕೊಡಗು ಡಿಸಿಸಿ ಬ್ಯಾಂಕ್ 24 ಶಾಖೆಗಳನ್ನು ಹೊಂದಿದ್ದು, ಉಳಿದಂತೆ ತಿತಿಮತಿ, ಕಕ್ಕಬ್ಬೆ, ಗುಡ್ಡೆ ಹೊಸೂರು ಮತ್ತಿತರ ಕಡೆಗಳಲ್ಲಿ ಡಿಸಿಸಿ ಬ್ಯಾಂಕ್ ಶಾಖೆಗಳನ್ನು ಆರಂಭಿಸಲಾಗುತ್ತದೆ. ಇದರಿಂದ ರೈತರಿಗೆ ಸಾಲ ಸೌಲಭ್ಯ ಪಡೆಯಲು ಸಹಕಾರಿಯಾಗಲಿದೆ ಎಂದು ಕೊಡಂದೇರ ಗಣಪತಿ ಅವರು ಹೇಳಿದರು.

ಕೊಡಗು ಜಿಲ್ಲೆಯ ಸಹಕಾರ ಕ್ಷೇತ್ರದ ದೊಡ್ಡಯ್ಯ ಅವರ ಭಾವಚಿತ್ರವನ್ನು ಜಿಲ್ಲೆಯ ಎಲ್ಲಾ ಸಹಕಾರ ಸಂಘಗಳ ಕಚೇರಿಯಲ್ಲಿ ಅಳವಡಿಸಲು ಇದೇ ಸಂದರ್ಭದಲ್ಲಿ ಕರೆ ನೀಡಿದರು. ಇದೇ ಡಿಸೆಂಬರ್, 07 ರಿಂದ 5 ದಿನಗಳ ಕಾಲ ಕೃಷಿ ಪತ್ತಿನ ಸಹಕಾರ ಸಂಘ ತರಬೇತಿ ಕಾರ್ಯಾಗಾರವು ಕೊಡಗು ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕ್‌ನ ಪಂದ್ಯಂಡ ಬೆಳ್ಯಪ್ಪ ಸಭಾಂಗಣದಲ್ಲಿ ನಡೆಯಲಿದೆ ಎಂದು ತಿಳಿಸಿದರು.

ಕೊಡಗು ಜಿಲ್ಲಾ ಸಹಕಾರ ಯೂನಿಯನ್‌ನ ಅಧ್ಯಕ್ಷ ರಾಬಿನ್ ದೇವಯ್ಯ ಅವರು ಮಾತನಾಡಿದರು.

ಕೊಡಗು ಸಹಕಾರ ರತ್ನ ಪ್ರಶಸ್ತಿ ಪಡೆದ ಹಿರಿಯ ಸಹಕಾರಿ ಚೆರಿಯಪಂಡ ಕೆ.ಉತ್ತಪ್ಪ ಹಾಗೂ ಕೊಡಗು ಜಿಲ್ಲಾ ಸಹಕಾರ ಯೂನಿಯನ್‌ನ ನಿರ್ದೇಶಕಎಂ.ಎಂ.ಶ್ಯಾಮಲಾ ಮಾತನಾಡಿದರು. ಶ್ರೇಷ್ಠ ಸಹಕಾರಿಗಳಾದ ಎಚ್.ಎಸ್.ಮುದ್ದಪ್ಪ, ತಳೂರು ಕಿಶೋರ್ ಕುಮಾರ್, ಶ್ರೇಷ್ಠ ಮಹಿಳಾ ಸಹಕಾರಿ ದೇವಾಂಬಿಕಾ ಮಹೇಶ್, ಉತ್ತಮ ಸಹಕಾರಿ ಸಿಬ್ಬಂದಿ ಆಲೆಮಾಡ ಎಸ್.ಕಾವೇರಮ್ಮ ಅವರಿಗೆ ಸನ್ಮಾನಿಸಲಾಯಿತು. ಕೊಡಗು ಜಿಲ್ಲಾ ಸಹಕಾರ ಯೂನಿಯನ್ ಹಾಗೂ ಕೊಡಗು ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕ್‌ನ ನಿರ್ದೇಶಕ ಎಚ್.ಕೆ.ಮಾದಪ್ಪ, ಕೊಡಗು ಜಿಲ್ಲಾ ಸಹಕಾರ ಯೂನಿಯನ್‌ನ ಉಪಾಧ್ಯಕ್ಷಕೆ. ಹರೀಶ್ ಪೂವಯ್ಯ, ಕೊಡಗು ಜಿಲ್ಲಾ ಸಹಕಾರ ಯೂನಿಯನ್‌ನ ನಿರ್ದೇಶಕಮನುಮುತ್ತಪ್ಪ, ಕೆ.ಎಂ. ತಮ್ಮಯ್ಯ, ಅಜಯ್ ಕುಮಾರ್, ಶ್ಯಾಮಚಂದ್ರ, ಕೆ.ಟಿ. ಪರಮೇಶ್, ಬಲ್ಲಾರಂಡ ಮಣಿಉತ್ತಪ್ಪ, ಅಮೃತ್ ವಿ.ಸಿ., ಎಸ್.ಆರ್.ಸುನೀಲ್ ರಾವ್, ಎ.ಸಿ.ಕುಶಾಲಪ್ಪ, ಎಂ.ಟಿ.ಸುಬ್ಬಯ್ಯ, ಎ.ಎಂ.ಮುತ್ತಪ್ಪ, ಪಿ.ಎಂ.ಚಂದ್ರಪ್ರಕಾಶ್, ಎಚ್.ಎಂ.ರಮೇಶ್, ಕೊಡಗು ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕ್‌ನ ನಿರ್ದೇಶಕಹೊಸೂರು ಸತೀಶ್ ಕುಮಾರ್, ಕಾಂಗೀರ ಸತೀಶ್, ಅರುಣ್ ಭೀಮಯ್ಯ, ಪಿ.ಪಿ.ಪೆಮ್ಮಯ್ಯ, ಕಿಲನ್ ಗಣಪತಿ, ಶರತ್ ಶೇಖರ್, ನಾಪಂಡ ಉಮೇಶ್ ಉತ್ತಪ್ಪ, ಪಟ್ರಪಂಡ ರಘುನಾಣಯ್ಯ, ಕೊಡಗು ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕ್‌ನ ವೃತ್ತಿಪರ ನಿರ್ದೇಶಕ ಮುಂಡಂಡ ಸಿ.ನಾಣಯ್ಯ, ಎ.ಗೋಪಾಲಕೃಷ್ಣ, ಸಹಕಾರ ಸಂಘಗಳ ಉಪ ನಿಬಂಧಕಎಚ್.ಡಿ.ರವಿಕುಮಾರ್, ಸಹಕಾರ ಸಂಘಗಳ ಲೆಕ್ಕಪರಿಶೋಧನಾ ಇಲಾಖೆಯ ಉಪ ನಿರ್ದೇಶಕಎಂ.ಎನ್.ಹೇಮಾವತಿ, ಸಹಕಾರ ಸಂಘಗಳ ಸಹಾಯಕ ನಿಬಂಧಕಶೈಲಜಾ, ಕೊಡಗು ಜಿಲ್ಲಾ ಸಹಕಾರ ಯೂನಿಯನ್ ಉಪಾಧ್ಯಕ್ಷರು ಹಾಗೂ ಡಿಸಿಸಿ ಬ್ಯಾಂಕ್ ನಿರ್ದೇಶಕಎಚ್.ಕೆ.ಮಾದಪ್ಪ, ಮಂಜುಳ, ಕೊಡಗು ಜಿಲ್ಲಾ ಸಹಕಾರ ಯೂನಿಯನ್‌ನ ಸಿಇಒ ಯೋಗೇಂದ್ರ ನಾಯಕ್ ಇದ್ದರು.

# ಜೀತ ಪದ್ಧತಿಯನ್ನು ಗ್ರಾಮಮಟ್ಟದಲ್ಲೇ ತಡೆಗಟ್ಟಿ

ರಾಮನಗರ: ಗ್ರಾಮಮಟ್ಟದಲ್ಲಿರುವ ಅಧಿಕಾರಿಗಳು ಜೀತ ಪದ್ಧತಿ ಎಂಬ ಸಾಮಾಜಿಕ ಕಳಂಕವನ್ನು ತಡೆಗಟ್ಟಲು ಜವಾಬ್ದಾರಿಯುತವಾಗಿ ಮತ್ತು ಸಂಪೂರ್ಣವಾಗಿತೊಡಗಿಸಿಕೊಳ್ಳಬೇಕು ಎಂದು ಅಪರ ಜಿಲ್ಲಾಧಿಕಾರಿ ಆರ್.ಚಂದ್ರಯ್ಯ ಸೂಚಿಸಿದರು.

ನಗರದಲ್ಲಿರುವ ಜಿಲ್ಲಾ ಪಂಚಾಯತ್ ಭವನದಲ್ಲಿ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಜಿಲ್ಲಾ ವಕೀಲರ ಸಂಘ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಮುಕ್ತಿ ಒಕ್ಕೂಟ ಕರ್ನಾಟಕ, ಶಾಂತ ಜೀವ ಜ್ಯೋತಿ ಸಂಸ್ಥೆ ಹಾಗೂ ವಿವಿಧ ಇಲಾಖೆಗಳ ಸಹಯೋಗದಲ್ಲಿ ರಾಮನಗರ ತಾಲ್ಲೂಕಿನಲ್ಲಿ ಕಾರ್ಯನಿರ್ವಹಿಸುತ್ತಿರುವ ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳು, ಕಂದಾಯ ನಿರೀಕ್ಷಕರು, ಗ್ರಾಮ ಲೆಕ್ಕಾಧಿಕಾರಿಗಳು ಹಾಗೂ ಆಶಾ ಕಾರ್ಯಕರ್ತೆಯರುಗಳಿಗೆ ಜೀತ ಪದ್ಧತಿ ನಿರ್ಮೂಲನೆ ವಿ?ಯದ ಕುರಿತು ಆಯೋಜಿಸಲಾಗಿದ್ದ ಒಂದು ದಿನದ ಕಾರ್ಯಾಗಾರಕ್ಕೆ ಚಾಲನೆ ನೀಡಿ ಮಾತನಾಡಿದರು.

ಜೀತ ಪದ್ಧತಿ ಎಂಬ ಅನಿ?ಟ ಪದ್ಧತಿಯನ್ನು, ಅಧಿಕಾರಿಗಳು, ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳು, ಆಶಾ ಕಾರ್ಯಕರ್ತೆಯರು ಹಾಗೂ ಅಂಗನವಾಡಿ ಕಾರ್ಯಕರ್ತರು ಸೇರಿದಂತೆ ಎಲ್ಲರೂ ಸಾರ್ವಜನಿಕರೊಂದಿಗೆ ನಿರಂತರ ಸಂಪರ್ಕವಿಟ್ಟುಕೊಂಡು ಸಮರ್ಥವಾಗಿ, ಸೇವಾ ಮನೋಭಾವದೊಂದಿಗೆ ಕಾರ್ಯನಿರ್ವಹಿಸಿ ಗ್ರಾಮ ಮಟ್ಟದಲ್ಲಿಯೇ ತಡೆಗಟ್ಟಬೇಕು ಎಂದರು.



ಗ್ರಾಮಮಟ್ಟದ ಅಧಿಕಾರಿಗಳು ತಮ್ಮ ವ್ಯಾಪ್ತಿಯಲ್ಲಿರುವ ಇಟ್ಟಿಗೆ ಗೂಡುಗಳು, ತೋಟದ ಮನೆಗಳು ಮತ್ತು ಕಲ್ಲು ಕೋರಿಗಳಲ್ಲಿ ಕೆಲಸ ಮಾಡುವವರನ್ನು ಸೂಕ್ಷ್ಮವಾಗಿ ಗಮನಿಸಬೇಕು, ಮಾಹಿತಿ ಕಲೆಹಾಕಬೇಕು. ಅಲ್ಲೇನಾದರೂ ಜೀತ ಪದ್ಧತಿ ಆಚರಣೆಗಳು ಕಂಡು ಬಂದಲ್ಲಿ ಕಾನೂನಿನ ಮೂಲಕ ನಿರ್ದಾಕ್ಷಿಣ್ಯ ಕ್ರಮ ಕೈಗೊಂಡು ಜೀತ ಪದ್ಧತಿಯನ್ನು ಕೊನೆಗೊಳಿಸಬೇಕು ಎಂದರು.

ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿಗಳಾದ ಸವಿತಾ ಪಿ. ಆರ್, ಜಿಲ್ಲಾ ಪಂಚಾಯತ್ ಉಪಕಾರ್ಯದರ್ಶಿ ಧನರಾಜ್, ಬೆಂಗಳೂರು ದಕ್ಷಿಣ ಜಿಲ್ಲೆಯ ವಕೀಲರ ಸಂಘದ ಅಧ್ಯಕ್ಷ ಬಿ.ಎಂ ಶ್ರೀವತ್ಸ, ಕಾರ್ಯದರ್ಶಿ ತಿಮ್ಮೇಗೌಡ, ಗ್ಲೋಬಲ್ ಕನ್ಸರ್ನ್ಸ್ ಇಂಡಿಯಾ ಸ್ಥಾಪಕರು ಮತ್ತು ಮುಕ್ತಿ ಅಲೈಯನ್ಸ್ ಕರ್ನಾಟಕದ ಸಂಚಾಲಕರು ಹಾಗೂ ಮಾನವ ಕಳ್ಳಸಾಗಣೆ ವಿರುದ್ಧದ ರಾಜ್ಯ ಉನ್ನತ ಮಟ್ಟದ ಸಮಿತಿ ಸದಸ್ಯರಾದ ಬೃಂದ ಅಡಿಗ, ರಾಮನಗರದ ಎಸ್.ಟಿ.ಎಫ್.ಸಿ ಮತ್ತು ಜಾಗೃತಿ ಸಮಿತಿ ಸದಸ್ಯ ?ಣ್ಮುಗ ಸುಂದರಂ, ಬೆಂಗಳೂರಿನ ಐಜೆಎಂನ ವಿಭಾಗೀಯ ಮುಖ್ಯಸ್ಥರಾದ ರಾಜೇಂದ್ರ, ಜಿಲ್ಲಾ ಹಾಗೂ ತಾಲೂಕು ಮಟ್ಟದ ಅಧಿಕಾರಿಗಳು ಉಪಸ್ಥಿತರಿದ್ದರು. ಕರ್ನಾಟಕ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರದ ಮಾನವ ಕಳ್ಳ ಸಾಗಾಣಿಕೆ ತಡೆ ವಿಶೇ? ಕಾರ್ಯಪಡೆ ಸದಸ್ಯರಾದ ವಿಲಿಯಂ ಕ್ರಿಸ್ಟೋಫರ್ ಅವರು ಜೀತ ಪದ್ಧತಿ ನಿರ್ಮೂಲನೆ ವಿ?ಯದ ಕುರಿತು ಉಪನ್ಯಾಸ ನೀಡಿದರು. ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳು, ಕಂದಾಯ ನಿರೀಕ್ಷಕರು, ಗ್ರಾಮ ಲೆಕ್ಕಾಧಿಕಾರಿಗಳು ಹಾಗೂ ಆಶಾ ಕಾರ್ಯಕರ್ತೆಯರು ಕಾರ್ಯಾಗಾರದಲ್ಲಿ ಭಾಗವಹಿಸಿದ್ದರು.

## ಇಂದಿನಿಂದ ತೆರೆಗೆ ಫುಲ್ ಮಿಲ್ಸ್

ಮೈಸೂರು: ಪ್ರತಿಯೊಬ್ಬ ಛಾಯಾಚಿತ್ರ ಗ್ರಾಹಕರ ಜೀವನಕ್ಕೆ ಹತ್ತಿರುವಾದ ಕಥೆಯ ಎಳೆಯುಳ್ಳ 'ಫುಲ್ ಮೀಲ್ಸ್' ಚಲನಚಿತ್ರ ಇದೇ ನ. 21 ರಂದು ರಾಜ್ಯದಾದ್ಯಂತ ತೆರೆ ಕಾಣಲಿದೆ ಎಂದು ನಿರ್ಮಾಪಕ ಲಿಖಿತ್ ಶೆಟ್ಟಿ ತಿಳಿಸಿದರು.

ನಗರದಲ್ಲಿ ಸುದ್ದಿಗಾರರೊಡನೆ ಮಾತನಾಡಿ, ಛಾಯಾಗ್ರಾಹಕನ ಜೀವನ ಪಯಣ ವಿಶಿಷ್ಟ ರೀತಿಯದ್ದಾಗಿದೆ. ಸಂಕಷ್ಟಹರ ಗಣಪತಿ, ಫ್ಯಾಮಿಲಿ ಪ್ಯಾಕ್, ಅಬ್ಬಬ್ಬ ಖ್ಯಾತಿಯ ತಾವೇ ನಾಯಕ ನಟರಾಗಿ ನಟಿಸಿದ್ದು, ನಾಯಕಿಯರಾಗಿ ಖುಷಿ ರವಿ ಹಗೂ ತೇಜಸ್ವಿನಿ ನಟಿಸಿದ್ದಾರೆ. ವೆಡ್ಡಿಂಗ್ ಫೋಟೋಗ್ರಾಫರ್‌ನ ಸುತ್ತ ಸುತ್ತುವ ಕಥಾ ಹಂದರ ಈ ಚಿತರ ಹೊಂದಿದೆ. ಪೂರ್ಣ ರೋಮ್ಯಾಂಟಿಕ್ ಹಾಗೂ ಹಾಸ್ಯಮಯ ಚಲನಚಿತ್ರವಾಗಿದೆ. ಹೀಗಾಗಿ ಸಿನಿಮಾ ಪ್ರೇಕ್ಷಕರು ಚಿತ್ರಮಂದಿರಕ್ಕೆ ಆಗಮಿಸಿ, ಚಿತ್ರ ವೀಕ್ಷಿಸಬೇಕೆಂದು ಕೋರಿದರು. ನಿರ್ದೇಶಕ ಎನ್. ವಿನಾಯಕ, ನಾಯಕಿ ನಟಿಯರಾದ ಖುಷಿ ರವಿ, ತೇಜಸ್ವಿನಿ ಇದ್ದರು.

**ಆಕ್ಷೇಪ**

ಇದೇ ವೇಳೆ ಫುಲ್ ಮೀಲ್ಸ್ ಚಲನಚಿತದಲ್ಲಿ ವೆಡ್ಡಿಂಗ್ ಫೋಟೋಗ್ರಾಫರ್‌ಗಳೆಲ್ಲ ಫ್ಲರ್ಟ್ಗಳು ಎಂಬ ವಾಕ್ಯ ಬಳಸಲಾಗಿದೆ. ಇದು ಸಮಾಜದಲ್ಲಿ ತಪ್ಪು ಸಂದೇಶ ಹರಡುತ್ತಿದೆ. ಹೀಗಾಗಿ ಈ ವಾಕ್ಯ ತೆಗೆಯದಿದ್ದರೆ ಹೋರಾಟ ನಡೆಸಲಾಗುವುದು ಎಂದು ಜಿಲ್ಲಾ ಛಾಯಾಗ್ರಾಹಕರು ಹಾಗೂ ವಿಡಿಯೋಗ್ರಾಫರ್‌ಗಳ ಸಂಘದ ಜಿಲ್ಲಾಧ್ಯಕ್ಷ ಬಿ. ವಿಜಯ್ ಎಚ್ಚರಿಸಿದರು.




ನಗರದಲ್ಲಿ ಸುದ್ದಿಗಾರರೊಡನೆ ಮಾತನಾಡಿ, ಚಲನಚಿತ್ರದಲ್ಲಿ ನಾಯಕಿ ನಟಿ ಈ ಮಾತನ್ನು ಹೇಳುತ್ತಾಳೆ. ಇದು ಎಲ್ಲ ಛಾಯಾಗ್ರಾಹಕರನ್ನು ಅಪಮಾನಿಸುತ್ತದೆ. ಜೊತೆಗೆ ವಿವಾಹ ಸಮಾರಂಭ ಮೊದಲಾದವುಗಳಿಗೆ ಛಾಯಾಗ್ರಾಹಕರನ್ನು ಕರೆಯುವ ಬಗ್ಗೆ ಜನತೆ ಹಿಂದೆ ಮುಂದೆ ನೋಡುವಂತಾಗುತ್ತದೆ. ಆದ್ದರಿಂದ ಆ ವಾಕ್ಯ ತೆಗೆದುಹಾಕಬೇಕೆಂದು ಆಗ್ರಹಿಸಿದರು. ಇನ್ನಿತರ ಪದಾಧಿಕಾರಿಗಳಾದ ಸಂತೋಷ್, ಉಮಾ ಶಂಕರ್,

**ಅಗತ್ಯ ಸಿದ್ಧತೆಗೆ ಆರ್.ಐಶ್ವರ್ಯ ಸೂಚನೆ**

## ನ.26 ರಂದು ಸಂವಿಧಾನ ದಿನಾಚರಣೆ

ಮಡಿಕೇರಿ: ನ.26ರಂದು ಸಂವಿಧಾನ ದಿನಾಚರಣೆಯನ್ನು ಜಿಲ್ಲಾ ಹಾಗೂ ತಾಲ್ಲೂಕು ಮಟ್ಟದಲ್ಲಿ ಆಚರಿಸಲಾಗುತ್ತಿದ್ದು, ಅಗತ್ಯ ಸಿದ್ಧತೆ ಮಾಡಿಕೊಳ್ಳುವಂತೆ ಹೆಚ್ಚುವರಿ ಜಿಲ್ಲಾಧಿಕಾರಿ ಆರ್.ಐಶ್ವರ್ಯ ಸೂಚಿಸಿದ್ದಾರೆ.


ವಿಡಿಯೋ ಕಾನ್ಫರೆನ್ಸ್ ಮೂಲಕ ಮಾತನಾಡಿದ ಹೆಚ್ಚುವರಿ ಜಿಲ್ಲಾಧಿಕಾರಿ ಅವರು ಸರ್ಕಾರ ಸಂವಿಧಾನ ದಿನಾಚರಣೆಯನ್ನು ಅರ್ಥಪೂರ್ಣವಾಗಿ ಆಚರಿಸಲು ಸೂಚಿಸಿದೆ. ಆ ದಿಸೆಯಲ್ಲಿ ಜಾಥ ಹಾಗೂ ಸಭಾ ಕಾರ್ಯಕ್ರಮ ಏರ್ಪಡಿಸಿ ಸಂವಿಧಾನದ ಮಹತ್ವ ಕುರಿತು ಉಪನ್ಯಾಸ ನೀಡುವಂತಾಗಬೇಕು ಎಂದು ಸಲಹೆ ಮಾಡಿದರು. ಕಾರ್ಯಕ್ರಮ ಆಯೋಜನೆ ಸಂಬಂಧ ವಿವಿಧ ಇಲಾಖೆ ಅಧಿಕಾರಿಗಳ ಜೊತೆ ಸರ್ಕಾರೇತರ ಸಂಸ್ಥೆಗಳು ಹಾಗೂ ವಿವಿಧ ಸಮಾಜದ ಮುಖಂಡರನ್ನು ಆಹ್ವಾನಿಸಿ ಸಂವಿಧಾನ ದಿನಾಚರಣೆ ಆಚರಿಸುವಂತೆ ನಿರ್ದೇಶನ ನೀಡಿದರು.



ಈ ಸಂದರ್ಭದಲ್ಲಿ ಮಾತನಾಡಿದ ಸಮಾಜ ಕಲ್ಯಾಣ ಇಲಾಖೆ ಉಪ ನಿರ್ದೇಶಕರಾದ ಶೇಖರ್ ಅವರು ನವೆಂಬರ್, 26 ರಂದು ಸಂವಿಧಾನ ದಿನಾಚರಣೆ ಪ್ರಯುಕ್ತ ಜಾಥ ಏರ್ಪಡಿಸಬೇಕಿದೆ. ತೆರೆದ ವಾಹನದಲ್ಲಿ ಅಂಬೇಡ್ಕರ್ ವೇಷಧಾರಿ ವಿದ್ಯಾರ್ಥಿ ಒಳಗೊಂಡಂತೆ ಸಂವಿಧಾನ ಪುಸ್ತಕ ಪ್ರದರ್ಶಿಸಿ ತೆರಳಬೇಕಿದೆ. ಅಂಬೇಡ್ಕರ್ ಅವರ ಚಿಂತನೆಗಳು, ಸಂವಿಧಾನದ ಆಶಯಗಳು, ಮೂಲಭೂತ ಕರ್ತವ್ಯಗಳು ಹಾಗೂ ರಾಜ್ಯ ನಿರ್ದೇಶಕ ತತ್ವಗಳು ಮತ್ತಿತರ ಮಾಹಿತಿ ಒಳಗೊಂಡ ಭಿತ್ತಿ ಪತ್ರಗಳ ಪ್ರದರ್ಶನ ಕಾರ್ಯಕ್ರಮ ಆಯೋಜಿಸಬೇಕಿದೆ ಎಂದರು.

ಸ್ಥಳೀಯರ ಸಹಕಾರ ಪಡೆದು ಕಾರ್ಯಕ್ರಮ ಆಯೋಜನೆಗೆ ತಾಲ್ಲೂಕು ಮಟ್ಟದಲ್ಲಿ ಕ್ರಮವಹಿಸುವಂತೆ ತಹಶೀಲ್ದಾರರು ಹಾಗೂ ತಾ.ಪಂ.ಇಒ ಅವರಿಗೆ ಕೋರಿದರು. ನವೆಂಬರ್, 21 ರಂದು ಸಮಾಜ ಕಲ್ಯಾಣ ಸಚಿವರ ಅಧ್ಯಕ್ಷತೆಯಲ್ಲಿ ವಿಡಿಯೋ ಸಂವಾದ ನಡೆಯಲಿದ್ದು, ಪೂರ್ವತಯಾರಿ ಮಾಡಿಕೊಳ್ಳಲು ಕೂಡಲೇ ಮಾಹಿತಿ ಒದಗಿಸುವಂತೆ ಶೇಖರ್ ಅವರು ಕೋರಿದರು.ಶಾಲಾ ಕಾಲೇಜು, ಎನ್‌ಸಿಸಿ, ಎನ್‌ಎಸ್‌ಎಸ್ ವಿದ್ಯಾರ್ಥಿಗಳು ಸಂವಿಧಾನ ದಿನಾಚರಣೆ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳುವಂತಾಗಬೇಕು. ಆ ನಿಟ್ಟಿನಲ್ಲಿ ಸಂಬಂಧಪಟ್ಟ ಇಲಾಖೆಗಳು ಅಗತ್ಯ ಕ್ರಮವಹಿಸುವಂತೆ ಮನವಿ ಮಾಡಿದರು.

ತಾಲ್ಲೂಕು ಮಟ್ಟದಲ್ಲಿ ತಹಶೀಲ್ದಾರರು, ತಾ.ಪಂ. ಇಒ, ಸ್ಥಳೀಯ ಸಂಸ್ಥೆ ಮುಖ್ಯಾಧಿಕಾರಿಗಳು, ತಾಲ್ಲೂಕು ಸಮಾಜ ಕಲ್ಯಾಣ ಅಧಿಕಾರಿಗಳು ಸೇರಿದಂತೆ ವಿವಿಧ ಇಲಾಖೆ ಅಧಿಕಾರಿಗಳು ಅಗತ್ಯ ಪೂರ್ವಸಿದ್ಧತೆ ಮಾಡಿಕೊಳ್ಳುವಂತೆ ಶೇಖರ್ ಅವರು ಮನವಿ ಮಾಡಿದರು. ತಹಶೀಲ್ದಾರರಾದ ಪ್ರವೀಣ್, ಕಿರಣ್ ಗೌರಯ್ಯ, ಶ್ರೀಧರ, ನಗರಾಭಿವೃದ್ಧಿ ಪ್ರಾಧಿಕಾರದ ಯೋಜನಾ ನಿರ್ದೇಶಕರಾದ ಬಿ.ಬಸಪ್ಪ, ತಾ.ಪಂ.ಇಒ ಅಪ್ಪಣ್ಣ, ತಾಲ್ಲೂಕು ಸಮಾಜ ಕಲ್ಯಾಣ ಅಧಿಕಾರಿಗಳು, ಶಾಲಾ ಶಿಕ್ಷಣ ಹಾಗೂ ಪದವಿ ಪೂರ್ವ ಶಿಕ್ಷಣ ಇಲಾಖೆ ಅಧಿಕಾರಿಗಳು ಇತರರು ಇದ್ದರು.



## ಫುಲ್ ಮೀಲ್ಸ್ ಬಡಿಸಲು ಬರುತ್ತಿದೆ

" ಲಿಖಿತ ಶೆಟ್ಟಿ ನಿರ್ಮಾಣ ಹಾಗೂ ನಟನೆಯ "ಫುಲ್ ಮೀಲ್ಸ್" ಚಿತ್ರ ಈ ವಾರ ತೆರೆಗೆ ಬರಲು ಸಿದ್ದವಾಗಿದೆ.

ಖುಷಿ ರವಿ, ತೇಜಸ್ವಿನಿ ಶರ್ಮ ನಾಯಕಿಯರಾಗಿ ನಟಿಸಿರುವ ಈ ಚಿತ್ರವನ್ನು ಎನ್ ವಿನಾಯಕ ನಿರ್ದೇಶಿಸಿದ್ದಾರೆ. ಚಿತ್ರದ ಕುರಿತು ಮಾಹಿತಿ ನೀಡಲು ಆಯೋಜಿಸಲಾಗಿದ್ದ ಪತ್ರಿಕಾಗೋಷ್ಠಿಯಲ್ಲಿ ಚಿತ್ರತಂಡದ ಸದಸ್ಯರು ಮಾತನಾಡಿದರು.

ಪತ್ರಿಕಾಗೋಷ್ಠಿಗೂ ಮುನ್ನ ಚಿತ್ರತಂಡದ ಸದಸ್ಯರು ಮಾಧ್ಯಮದ ಮಿತ್ರರಿಗೆ ಬಾಳೆ ಎಲೆ ಊಟ ಫುಲ್ ಮಿಲ್ಸ್ ಬಡಿಸಿದರು.

ಎನ್ ವಿನಾಯಕ ಕಥೆ ಹೇಳಿದಾಗ ನಾನು ಮೊದಲು ಸಂಗೀತ ನಿರ್ದೇಶಕ ಗುರುಕಿರಣ್ ಅವರ ಹತ್ತಿರ ಕಥೆ ಹೇಳಿ ಅವರು ಒಪ್ಪಿಕೊಂಡರೆ ನನಗೆ ಒಪ್ಪಿಗೆ ಆದ ಹಾಗೆ ಎಂದು ಹೇಳಿದೆ. ಗುರುಕಿರಣ್ ಅವರು ಕಥೆ ಮೆಚ್ಚಿಕೊಂಡರು. ಅವರೆ ಸಂಗೀತವನ್ನು ನೀಡಲು ಒಪ್ಪಿಕೊಂಡರು. ನಾನೇ ಈ ಚಿತ್ರದ ನಿರ್ಮಾಣಕ್ಕೆ ಮುಂದಾದೆ. ತೇಜಸ್ವಿನಿ ಶರ್ಮ ಹಾಗೂ ಖುಷಿ ರವಿ ನಾಯಕಿಯರಾಗಿ ಅಭಿನಯಿಸಿದ್ದಾರೆ. ವಿಜಯ್ ಚಂಡೂರ್, ಸೂರಜ್ ಲೋಕ್ರೆ, ರಾಜೇಶ್ ನಟರಂಗ, ಸುಜಯ್ ಶಾಸ್ತ್ರಿ, ರವಿಶಂಕರ್ ಗೌಡ, ಕೋಟೆ ಪ್ರಭಾಕರ್ ಹೀಗೆ ಅನೇಕ ಕಲಾವಿದರು ಈ ಚಿತ್ರದ ತಾರಾಬಳಗದಲ್ಲಿದ್ದಾರೆ. ಮನೋಹರ್ ಜೋಶಿ ಛಾಯಾಗ್ರಹಣ ಹಾಗೂ ದೀಪು ಎಸ್ ಕುಮಾರ್ ಸಂಕಲನ ಈ ಚಿತ್ರಕ್ಕಿದೆ. ನಾನು ಈ ಫೋಟೋಗ್ರಾಫರ್ ಆಗಿ ಕಾಣಿಸಿಕೊಂಡಿದ್ದೇನೆ. ಹಾಗಾಗಿ ಫೋಟೋಗ್ರಾಫರ್ಸ್ ಮತ್ತು ಮೇಕಪ್ ಆರ್ಟಿಸ್ಟ್ ಗಳಿಗಾಗಿ ವಿಶೇಷ ಪ್ರದರ್ಶನ ಆಯೋಜಿಸುತ್ತಿದ್ದೇವೆ ಹಾಗೂ ಬಿಡುಗಡೆಯ ಹಿಂದಿನ ದಿನ ಪ್ರೇಕ್ಷಕರಿಗೆ ವಿಶೇಷ ಜಾಹೀರಾತು ಹಾಕಿಸುತ್ತಿದ್ದೇವೆ. ಅದರಲ್ಲಿ ಒಂದು ವಿಶೇಷತೆ ಖಂಡಿತ ಇರುತ್ತದೆ. ನವೆಂಬರ್ 21 ನಮ್ಮ ಚಿತ್ರ ನಿಮ್ಮ ಮುಂದೆ ಬರಲಿದೆ ನೋಡಿ. ಪ್ರೋತ್ಸಾಹ ನೀಡಿ ಎಂದರು ನಿರ್ಮಾಪಕ ಹಾಗೂ ನಾಯಕ ಲಿಖಿತ್ ಶೆಟ್ಟಿ.

ಇನ್ಸ್ಟಾಗ್ರಾಮ್ ನಲ್ಲಿ ಲಿಖಿತ್ ಶೆಟ್ಟಿ ಅವರ ಪರಿಚಯವಾಯಿತು. ಆನಂತರ ಕಥೆ ಕೇಳಿ ಮೆಚ್ಚಿಕೊಂಡರು. ತಾವೇ ಸಿನಿಮಾ ನಿರ್ಮಾಣ ಮಾಡುವಿದಾಗಿಯೂ ಹೇಳಿದರು. ಇದೊಂದು ರೊಮ್ಯಾಂಟಿಕ್ ಕಾಮಿಡಿ ಜಾನರ್ ನ ಚಿತ್ರ. ಲಿಖಿತ್ ಶೆಟ್ಟಿ ವೆಡ್ಡಿಂಗ್ ಫೋಟೋಗ್ರಾಫರ್ ಪಾತ್ರದಲ್ಲಿ ಕಾಣಿಸಿಕೊಂಡಿದ್ದಾರೆ. ಸುತ್ತ ಸುತ್ತುವ ಕಥಾ ಹಂದರವನ್ನು ಹೊಂದಿರುವ ರೊಮ್ಯಾಂಟಿಕ್ ಕಾಮಿಡಿ ಸಿನೆಮಾ..ಕಥೆ ಕೂಡ ಫೋಟೋಗ್ರಾಫರ್ ಸುತ್ತ ಸಾಗುತ್ತದೆ. ಅನೇಕ ಕಿರುಚಿತ್ರಗಳನ್ನು ನಿರ್ದೇಶಿಸಿದ್ದ ನನಗೆ ಹಿರಿತೆರೆಯಲ್ಲಿ ಇದು ಮೊದಲ ಚಿತ್ರ. ಕಥೆ, ಚಿತ್ರಕಥೆ ನಾನೇ ಬರೆದಿದ್ದೇನೆ. ಸಂಭಾಷಣೆ ಹರೀಶ್ ಅವರದು. ಇನ್ನೂ ನಮ್ಮ ಚಿತ್ರದ ಟ್ರೇಲರ್ ಅನ್ನು ಇನ್ಸ್ಟಾಗ್ರಾಮ್ ನಲ್ಲಿ ಬಿಡುಗಡೆ ಮಾಡಿದಾಗ ಪಿ.ಆರ್.ಕೆ ಸಂಸ್ಥೆಯ ಅಶ್ವಿನಿ ಪುನೀತ್ ರಾಜಕುಮಾರ್ ಅವರು ಸೇರಿದಂತೆ ಚಿತ್ರರಂಗದ ಅನೇಕ ಗಣ್ಯರು ಹಾಗೂ ಕಲಾವಿದರು ಟ್ರೇಲರ್ ಅನ್ನು ಶೇರ್ ಮಾಡುವ ಮೂಲಕ ಸಹಾಯ ಮಾಡಿದ್ದಾರೆ. ಎಲ್ಲರಿಗೂ ಧನ್ಯವಾದ. ಇಡೀ ಚಿತ್ರತಂಡದ ಸಹಕಾರದಿಂದ ಒಂದೊಳ್ಳೆ ಸಿನಿಮಾ ನಿಮ್ಮ ಮುಂದೆ ಬರುತ್ತಿದೆ ಎಂದು ನಿರ್ದೇಶಕ ಎನ್ ವಿನಾಯಕ ಹೇಳಿದರು.

ನಾನು ಲಿಖಿತ್ ಶೆಟ್ಟಿ ಅವರನ್ನು ಸಹೋದರನಂತೆ ಭಾವಿಸಿದ್ದೇನೆ. ಅವರ ನಿರ್ಮಾಣ ಹಾಗೂ ನಟನೆಯ ಈ ಚಿತ್ರ ಭರ್ಜರಿ ಯಶಸ್ಸು ಕಾಣವುದರಲ್ಲಿ ಸಂದೇಹವಿಲ್ಲ. ನಾನು ಈ ಚಿತ್ರ ನೋಡಿದ್ದೇನೆ. ನೋಡುಗರಿಗೆ ಬೇಕಾದ ಎಲ್ಲಾ ಅಂಶಗಳು ಈ ಚಿತ್ರದಲ್ಲಿದೆ. ಹಾಡುಗಳು ಸುಮಧುರವಾಗಿದೆ ಎಂದು ಸಂಗೀತ ನಿರ್ದೇಶಕ ಗುರುಕಿರಣ್ ತಿಳಿಸಿದರು.

"ದಿಯಾ" ಚಿತ್ರದ ಪಾತ್ರಕ್ಕೂ ಈ ಪಾತ್ರಕ್ಕೂ ವಿರುದ್ದವಾಗಿದೆ. ಪೂಜಾ ನನ್ನ ಪಾತ್ರದ ಹೆಸರು ಎಂದರು ನಾಯಕಿ ಖುಷಿ ರವಿ.

ನನ್ನ ಪಾತ್ರ ಕೂಡ ಚೆನ್ನಾಗಿದೆ. "ಫುಲ್ ಮೀಲ್ಸ್" ತಂಡದ ಜೊತೆಗೆ ಕೆಲಸ ಮಾಡಿದ್ದು ಖುಷಿಯಾಗಿದೆ ಎಂದು ಮತ್ತೊಬ್ಬ ನಾಯಕಿ ತೇಜಸ್ವಿನಿ ಶರ್ಮ ತಿಳಿಸಿದರು.




## ವಾರಣಾಸಿ ಟೈಟಲ್ ಟೀಸರ್ ಬಿಡುಗಡೆ

RRR ಚಿತ್ರದ ನಂತರ ಮಹೇಶ್ ಬಾಬು ಅಭಿನಯದಲ್ಲಿ ಎಸ್.ಎಸ್. ರಾಜಮೌಳಿ ಒಂದು ಚಿತ್ರ ನಿರ್ದೇಶಿಸುತ್ತಿರುವ ಸುದ್ದಿ ಕೇಳಿ ಬಂದಿತ್ತು. ಆ ಚಿತ್ರದ ಹೆಸರೇನು, ಕಥೆ ಏನಿರಬಹುದು, ಚಿತ್ರ ಯಾವ ಹಂತದಲ್ಲಿದೆ ಮುಂತಾದ ಹಲವು ಪ್ರಶ್ನೆಗಳಿಗೆ ರಾಜಮೌಳಿ ಕೊನೆಗೂ ಉತ್ತರ ನೀಡಿದ್ದಾರೆ. ಚಿತ್ರಕ್ಕೆ ?ವಾರಣಾಸಿ? ಎಂಬ ಹೆಸರಿಡಲಾಗಿದ್ದು, ಈ ಚಿತ್ರದ ಟೈಟಲ್ ಟೀಸರ್, ರಾಮೋಜಿ ಫಿಲಂ ಸಿಟಿಯಲ್ಲಿ ಬಿಡುಗಡೆಯಾಗಿದೆ.

ಬೃಹತ್ತಾದ ಎಲ್.ಇ.ಡಿ ಪರದೆಯನ್ನು ಈ ಕಾರ್ಯಕ್ರಮಕ್ಕಾಗಿ ಸೃಷ್ಟಿಸಲಾಗಿತ್ತು. ಅದಕ್ಕಾಗಿ 45 ಜನರೇಟರ್ ಗಳನ್ನು ಬಳಸಲಾಗಿತ್ತು. ವೇದಿಕೆಯ ಮೇಲೆ ವಾರಣಾಸಿಯ ಮಣಿಕರ್ಣಿಕಾ ಘಾಟ್ ಅನ್ನು ಪ್ರತಿನಿಧಿಸುವ ಸೆಟ್‌ಗಳನ್ನು ನಿರ್ಮಿಸಲಾಗಿತ್ತು. ಇದೆಲ್ಲದರ ಮಧ್ಯೆಯೇ, ಚಿತ್ರದ ಟೀಸರ್ ಅನಾವರಣಗೊಳಿಸಲಾಯಿತು. ಗೂಳಿಯ ಮೇಲೆ ಕುಳಿತು, ಮಹೇಶ್ ಬಾಬು ತ್ರಿಶೂಲ ಹಿಡಿದು ಬರುವಾಗ, ?ಜೈ ಬಾಬು, ಜೈಜೈ ಬಾಬು? ಎಂಬ ಅಭಿಮಾನಿಗಳು ಕೂಗು ಮುಗಿಲು ಮುಟ್ಟಿತ್ತು.

ಇದೊಂದು ಪೌರಾಣಿಕ ಹಿನ್ನೆಲೆಯ ಫ್ಯಾಂಟಸಿ ಚಿತ್ರವಾಗಿದ್ದು, ?ವಾರಣಾಸಿ? ಚಿತ್ರವನ್ನು ಶ್ರೀ ದುರ್ಗಾ ಆರ್ಟ್ಸ್ ಮತ್ತು ಶೋಯಿಂಗ್ ಬಿಝಿನೆಸ್ ಸಂಸ್ಥೆಗಳಡಿ ಕೆ.ಎಲ್. ನಾರಾಯಣ ಮತ್ತು ಎಸ್. ಎಸ್. ಕಾರ್ತಿಕೇಯ ಜೊತೆಯಾಗಿ ನಿರ್ಮಿಸುತ್ತಿದ್ದು, ರಾಜಮೌಳಿ ನಿರ್ದೇಶಿಸುತ್ತಿದ್ದಾರೆ. ಚಿತ್ರಕ್ಕೆ ರಾಜಮೌಳಿ ತಂದೆ ವಿಜಯಪ್ರಸಾದ್ ಕಥೆ–ಚಿತ್ರಕಥೆ ರಚಿಸಿದ್ದು, ಆಸ್ಕರ್ ಪ್ರಶಸ್ತಿ ವಿಜೇತ ಎಂ.ಎಂ. ಕೀರವಾಣಿ ಸಂಗೀತ ಸಂಯೋಜಿಸುತ್ತಿದ್ದಾರೆ. ಚಿತ್ರದಲ್ಲಿ ಮಹೇಶ್ ಬಾಬು, ರುದ್ರ ಎಂಬ ಪಾತ್ರದಲ್ಲಿ ಅಭಿನಯಿಸಿದರೆ, ಪ್ರಿಯಾಂಕಾ ಚೋಪ್ರಾ ಮತ್ತು ಪೃಥ್ವಿರಾಜ್ ಸುಕುಮಾರನ್, ಮೋಹಿನಿ ಮತ್ತು ಕುಂಭ ಎಂಬ ಪಾತ್ರಗಳನ್ನು ನಿರ್ವಹಿಸುತ್ತಿದ್ದಾರೆ.



ಈ ಚಿತ್ರವು 2027ರಲ್ಲಿ ಬಿಡುಗಡೆಯಾಗಲಿದೆ. ಈ ಚಿತ್ರದ ಮೂಲಕ ರಾಜಮೌಳಿ, ತೆಲುಗು ಚಿತ್ರರಂಗಕ್ಕೆ ಪ್ರೀಮಿಯಮ್ ಫುಲ್ ಸ್ಕ್ರೀಮ್ ಐಮ್ಯಾಕ್ಸ್ ಫಾರ್ಮ್ಯಾಟ್ ಎಂಬ ಹೊಸ ತಂತ್ರಜ್ಞಾನವನ್ನು ಪರಿಚಯಿಸುತ್ತಿದ್ದಾರೆ.

ಟೀಸರ್ ಬಿಡುಗಡೆಯ ನಂತರ ಮಾತನಾಡಿದ ರಾಜಮೌಳಿ, ?ನನಗೆ ಬಾಲ್ಯದಿಂದಲೂ ರಾಮಾಯಣ ಮತ್ತು ಮಹಾಭಾರತವೆಂದರೆ ಬಹಳ ಇಷ್ಟ. ಇದು ನನ್ನ ಡ್ರೀಮ್ ಪ್ರಾಜೆಕ್ಟ್. ರಾಮಾಯಣದ ಒಂದು ಪ್ರಮುಖ ಪ್ರಸಂಗವನ್ನು ಆಧರಿಸಿ ಚಿತ್ರ ಮಾಡುತ್ತೇನೆ ಎಂದು ನಾನು ಅಂದುಕೊಂಡಿರಲಿಲ್ಲ. ಒಂದೊಂದು ದೃಶ್ಯವನ್ನೂ ಚಿತ್ರೀಕರಿಸುವಾಗ ಗಾಳಿಯಲ್ಲಿ ತೇಲಾಡಿದಂತಹ ಭಾವನೆ ಬರುತ್ತಿತ್ತು. ರಾಮನಂತಹ ಪ್ರಶಾಂತವಾದ ಪಾತ್ರಕ್ಕೆ ಮಹೇಶ್ ಸೂಟ್ ಆಗುತ್ತಾರಾ ಎಂಬ ಪ್ರಶ್ನೆ ಇತ್ತು. ಮೊದಲ ದಿನ ಮಹೇಶ್ ಬಾಬು ಅವರನ್ನು ರಾಮನ ವೇಷದಲ್ಲಿ ನೋಡಿ ರೋಮಾಂಚನವಾಯಿತು. ಇದುವರೆಗೂ ಸುಮಾರು 60 ದಿನಗಳ ಕಾಲ ಚಿತ್ರೀಕರಣ ಮಾಡಿದ್ದೇವೆ. ಪ್ರತಿಯೊಂದನ್ನೂ ಹೊಸದಾಗಿ ಯೋಚಿಸಿ, ಪ್ಲಾನ್ ಮಾಡುವುದರ ಜೊತೆಗೆ ಹಲವು ಸವಾಲುಗಳನ್ನು ಸ್ವೀಕರಿಸಿದ್ದೇವೆ? ಎಂದರು.

## ಜಗತ್ತಿನ ಮೊದಲ ಎಐ ಚಿತ್ರ ತಯಾರಕ ಕನ್ನಡಿಗ ನೂತನ್ ಇಂಡೋ-ಕೊರಿಯಾ ಫಿಲಂ ಫೆಸ್ಟಿವಲ್ ನಲ್ಲಿ ಸನ್ಮಾನ





ಜಗತ್ತಿನ ಮೊದಲ ಎಐ (AI) ಚಿತ್ರ ತಯಾರಿಸಿದ ಕನ್ನಡದ ತಂತ್ರಜ್ಞ ನೂತನ್ ಅವರಿಗೆ ?ಇಂಡೋ–ಕೊರಿಯಾ ಫಿಲಂ ಫೆಸ್ಟಿವಲ್?ನಲ್ಲಿ ಸನ್ಮಾನಿಸಿ ಗೌರವಿಸಲಾಯಿತು.

ಕನ್ನಡದಲ್ಲಿ ?ಲವ್ ಯು? ಎಂಬ ಹೆಸರಿನಲ್ಲಿ ಜಗತ್ತಿನ ಮೊದಲ ಸಂಪೂರ್ಣ ಎಐ (AI) ಚಿತ್ರವನ್ನು ತಯಾರಿಸಿದ್ದ ನೂತನ್, ಬಳಿಕ ಅದನ್ನು ಅಧಿಕೃತ ಎಐ (AI) ಸಿನಿಮಾವಾಗಿ ಥಿಯೇಟರಿನಲ್ಲಿ ಬಿಡುಗಡೆಗೊಳಿಸಿ, ಹೊಸ ದಾಖಲೆ ಬರೆದಿದ್ದರು.

ಸದ್ಯ ನೂತನ್ ಅವರು ?ಮೀ ವಿಥ್ ದಿ ಕಿಂಗ್ ಕೆಂಪೇಗೌಡ? ಮತ್ತು ?ಆಪರೇಷನ್ ಸಿಂಧೂರ? ಹೆಸರಿನ

ಎಐ ಸಿನಿಮಾಗಳ ತಯಾರಿಕೆಯಲ್ಲಿ ನಿರತರಾಗಿದ್ದು, ಶೀಘ್ರದಲ್ಲಿಯೇ ಈ ಸಿನಿಮಾಗಳು ತೆರೆಗೆ ಬರಲಿದೆ.

## 'ನೆನಪುಗಳ ಮಾತು ಮಧುರ' ತೆರೆಗೆ ಸಿದ್ಧ..



ಪತ್ರಕರ್ತ, ಕಾರ್ಯಕಾರಿ ನಿರ್ಮಾಪಕನಾಗಿ ಚಿತ್ರರಂಗಕ್ಕೆ ಪರಿಚಯವಿರುವ ಕಥೆ, ಚಿತ್ರಕಥೆ, ಸಂಭಾಷಣೆ ಬರೆದು ನೃತ್ಯ ನಿರ್ದೇಶನದ ಜೊತೆಗೆ ನಿರ್ದೇಶನವನ್ನು ಮಾಡಿರುವ ಹಾಗೂ ಖಇಆ & ಫಊಖಖಇ ಸೆವೆನ್ ರಾಜ್ ನಟಿಸಿ, ನಿರ್ಮಿಸಿರುವ "ನೆನಪುಗಳ ಮಾತು ಮಧುರ" ಚಿತ್ರದ ಟ್ರೇಲರ್ ಇತ್ತೀಚಿಗೆ ಬಿಡುಗಡೆಯಾಯಿತು.

ನಿರ್ಮಾಪಕ ಉಮೇಶ್ ಬಣಕಾರ್ ಟ್ರೇಲರ್ ಅನಾವರಣ ಮಾಡಿದರು. ನವಶಕ್ತಿ ನಾಗರಾಜ್, ಮಹೇಂದರ್, ಲೋಕೇಂದ್ರ, ಮುನಿಕೃಷ್ಣ ಮುಂತಾದವರು ಮುಖ್ಯ ಅತಿಥಿಗಳಾಗಿ ಆಗಮಿಸಿದ್ದರು. ಟ್ರೇಲರ್ ಬಿಡುಗಡೆ ನಂತರ ಚಿತ್ರತಂಡದ ಸದಸ್ಯರು ಮಾತನಾಡಿದರು.ನನ್ನ ಹುಟ್ಟುಹಬ್ಬದ ದಿನ ಟ್ರೇಲರ್ ಬಿಡುಗಡೆಯಾಗಿದ್ದು ಖುಷಿಯಾಗಿದೆ. ನೋಡುಗನಿಗೆ ಬೇಕಾದ ಎಲ್ಲಾ ಅಂಶಗಳು ಈ ಚಿತ್ರದಲ್ಲಿದೆ. ಸದ್ಯದಲ್ಲೇ ಚಿತ್ರ ತೆರೆಗೆ ಬರಲಿದೆ. ರೆಡ್ & ವೈಟ್ ಸೆವೆನ್ ರಾಜ್.

"ನೆನಪುಗಳ ಮಾತು ಮಧುರ" ನಾಲ್ಕು ಕಥೆಗಳ ಸಂಗಮ. ಒಂದು ಕಥೆ ಇಪ್ಪತ್ತೈದು ನಿಮಿಷಗಳ ಅವಧಿ ಇರುತ್ತದೆ. ನಾಲ್ಕು ಕಥೆಗಳು ಬೇರೆಯದೆ ಆಯಾಮದಲ್ಲಿ ಸಾಗುತ್ತದೆ. ಸದ್ಯದಲ್ಲೇ ನಾವು ಎದುರಿ ಸುತ್ತಿರುವ ಹಾಗೂ ಕಣ್ಣಮುಂದೆ ನೋಡುತ್ತಿರುವ ಕೆಲವು ವಿಷಯಗಳೇ ಈ ಚಿತ್ರದ ಕಥೆಗೆ ಸ್ಪೂರ್ತಿ. ಇದು ನನ್ನ ನಿರ್ದೇಶನದ ಮೂರನೇ ಚಿತ್ರ. ನನ್ನ ಚಿತ್ರದಲ್ಲಿ ನಟಿಸಲು ಬಂದಿದ್ದ ನಿರ್ಮಾಪಕ ಸೆವೆನ್ ರಾಜ್ ಅವರು ಈ ಚಿತ್ರವನ್ನು ನಿರ್ಮಾಣ ಮಾಡಲು ಹೇಳಿದರು. ಕಥೆ, ಚಿತ್ರಕಥೆ, ಸಂಭಾಷಣೆ, ನೃತ್ಯ ನಿರ್ದೇಶನದ ಜವಾಬ್ದಾರಿಯನ್ನೂ ನಿರ್ವಹಿಸಿರುವ ನಾನು ಪ್ರಮುಖಪಾತ್ರದಲ್ಲಿ ಅಭಿನಯ ಕೂಡ ಮಾಡಿದ್ದೇನೆ. ಕಳೆದವರ್ಷ ನಿರ್ಮಾಪಕರ ಹುಟ್ಟುಹಬ್ಬದ ದಿನ ಈ ಚಿತ್ರ ಆರಂಭವಾಗಿತ್ತು. ಈ ವರ್ಷ ಅವರ ಹುಟ್ಟುಹಬ್ಬದ ದಿನ ಟ್ರೇಲರ್ ಬಿಡುಗಡೆಯಾಗಿದೆ. ಸದ್ಯದಲ್ಲೇ ಚಿತ್ರ ತೆರೆಗೆ ಬರಲಿದೆ. ಚಿತ್ರದ ತಮಿಳು ರೈಟ್ಸ್ ಕೂಡ ಮಾರಾಟವಾಗಿದೆ ಎಂದು ನಿರ್ದೇಶಕ ತಿಳಿಸಿದರು. ಹಾಡುಗಳ ಕುರಿತು ರಾಜು ಎಮ್ಮಿಗನೂರು ಮಾಹಿತಿ ನೀಡಿದರು. ಚಿತ್ರದಲ್ಲಿ ನಟಿಸಿರುವ ವಸಿಷ್ಠ ಬಂಟನೂರು, ರಣವೀರ್, ರಾಜ್ ಪ್ರಭು, ಅಂಜಲಿ, ರೇಖಾ ರಮೇಶ್ ಮುಂತಾದವರು ಚಿತ್ರದ ಕುರಿತು ಮಾತನಾಡಿದರು.



ವಿಶ್ವೇಶ್ವರಯ್ಯ ಕೈಗಾರಿಕಾ ಮತ್ತು ತಾಂತ್ರಿಕ ವಸ್ತು ಸಂಗ್ರಹಾಲಯ ಆಯೋಜಿತ ದಕ್ಷಿಣ ಭಾರತ ವಿಜ್ಞಾನ ನಾಟಕ ಸ್ಪರ್ಧೆಯನ್ನು ಕಲಾವಿದೆ ತಾರಾ ಅನುರಾಧ ಗುರುವಾರ ಉದ್ಘಾಟಿಸಿದರು

## ಅಮೃತ ವಿಜಯ ಟಾಟಾಗೆ 2025 ಸಾಲಿನ ವಿಮೆನ್ಸ್ ಆಫ್ ದ ಯೂನಿವರ್ಸ ಕಿರೀಟ



ಉದ್ಯಮಿ ನಿರ್ಮಾಪಕಿ ಅಮೃತ ವಿಜಯ ಟಾಟಾ ಚೀನಾದಲ್ಲಿ ನಡೆದ 2025 ಸಾಲಿನ ವಿಮೆನ್ಸ್ ಆಫ್ ದ ಯೂನಿವರ್ಸ್ ಕಿರೀಟ ಮೂಡಿಗೆರಿಸಿಕೊಂಡಿದ್ದಾರೆ..

ಹಿಂದೆ ಭಾರತದಲ್ಲಿ ನಡೆದ ಮಿಸಸ್ ಇಂಡಿಯಾ ಸ್ಪರ್ಧೆಯಲ್ಲಿ ವಿಜೇತರಾಗಿದ್ದ ಅಮೃತ ವಿಜಯ ಟಾಟಾ ಪಂಜಾಬಿನವರು. ಬೆಂಗಳೂರಿನಲ್ಲಿ ನೆಲೆಸಿದ ಕಾರಣಕ್ಕೆ ಕರ್ನಾಟಕವನ್ನು ಪ್ರತಿನಿಧಿಸುವ ಮೂಲಕ ಮಿಸಸ್ ಇಂಡಿಯಾ ಕಿರೀಟವನ್ನು ಮುಡಿಗೇರಿಸಿಕೊಂಡಿದ್ದರು.. ಆ ಕ್ಷಣಕ್ಕೆ ಸಾಕ್ಷಿಯಾಗಿ ಅಮೃತ ಸಿನಿ ಕ್ರಾಫ್ಟ್ ಎಂಬ ಪ್ರೊಡಕ್ಷನ್ ಹೌಸ್ ಅನ್ನು ಪ್ರಾರಂಭಿಸಿ ಹಲವಾರು ಕನ್ನಡ ಸಿನಿಮಾಗಳನ್ನು ನಿರ್ಮಾಣ ಮಾಡುವ ಕೆಲಸದಲ್ಲಿ ನಿರತರಾಗಿದ್ದಾರೆ... ಇದೀಗ ಮೊನ್ನೆ ಚೀನಾದಲ್ಲಿ ನಡೆದ ವಿಮೆನ್ ಆಫ್ ಯುನಿವರ್ಸ್ ಸ್ಪರ್ಧೆಲ್ಲೂ ಕೂಡ ಮಿಸ್ಸಸ್ ಇಂಡಿಯಾ ಆಗಿರುವಂತಹ ಅಮೃತವರು ಭಾಗವಹಿಸಿ ವಿಮೆನ್ ಆಫ್ ಯುನಿವರ್ಸ್ ಕಿರೀಟವನ್ನು ಮುಡಿಗೇರಿಸಿಕೊಂಡು ಕರ್ನಾಟಕಕ್ಕೆ ಹೆಮ್ಮೆ ತಂದಿದ್ದಾರೆ

## ಭಯೋತ್ಪಾದನೆಯ ವಿರುದ್ಧ ಸಮರದ 'ರಕ್ತಕಾಶ್ಮೀರ'

MDM ಪ್ರೊಡಕ್ಷನ್ ಲಾಂಛನದಲ್ಲಿ ನಿರ್ಮಾಣವಾಗಿರುವ, ವೃತ್ತಿಜೀವನದಲ್ಲಿ ಐವತ್ತು ವರ್ಷಗಳನ್ನು ಪೂರೈಸಿರುವ ಹಿರಿಯ ನಿರ್ದೇಶಕ ಎಸ್ ವಿ ರಾಜೇಂದ್ರ ಸಿಂಗ್ ಬಾಬು ನಿರ್ದೇಶನದ ಹಾಗೂ ಉಪೇಂದ್ರ – ರಮ್ಯ ಮುಖ್ಯಪಾತ್ರದಲ್ಲಿ ನಟಿಸಿರುವ "ರಕ್ತ ಕಾಶ್ಮೀರ" ಚಿತ್ರ ಸದ್ಯದಲ್ಲೇ ತೆರೆಗೆ ಬರಲಿದೆ ಈ ಕುರಿತು ಮಾಹಿತಿ ನೀಡಲು ನಿರ್ದೇಶಕರು ಪತ್ರಿಕಾಗೋಷ್ಠಿ ಆಯೋಜಿಸಿದ್ದರು. ಚಿತ್ರದ ಎರಡು ಹಾಡುಗಳು ಹಾಗೂ ಟ್ರೇಲರ್ ಅನ್ನು ಪ್ರದರ್ಶಿಸಲಾಯಿತು.

"ರಕ್ತ ಕಾಶ್ಮೀರ" ಒಂದು ಸಾಮಾಜಿಕ ಸಂದೇಶವುಳ್ಳ ಚಿತ್ರ. ಭಯೋತ್ಪಾದನೆಯ ವಿರುದ್ಧ ಸಮರ ಸಾರುವ ಚಿತ್ರವೂ ಹೌದು. ಉಪೇಂದ್ರ ಅವರು ಈ ಚಿತ್ರದಲ್ಲಿ ದ್ವಿಪಾತ್ರದಲ್ಲಿ ಕಾಣಿಸಿಕೊಂಡಿದ್ದಾರೆ. ರಮ್ಯ ಈ ಚಿತ್ರದ ನಾಯಕಿ. ಚಿತ್ರದಲ್ಲಿ ನಾಯಕ(ಉಪೇಂದ್ರ) ಮಕ್ಕಳಿಗೆ ಭಯೋತ್ಪಾದನೆಯ ವಿರುದ್ಧ ಹೋರಾಡುವುದು ಹೇಗೆ ಎಂಬುದನ್ನು ಮಕ್ಕಳಿಗೆ ತರಭೇತಿ ನೀಡಿರುತ್ತಾರೆ. ಈ ಸನ್ನಿವೇಶ ಎದುರಾದಾಗ ಮಕ್ಕಳು ಹೇಗೆ ಪಾರಾಗುತ್ತಾರೆ ಹಾಗೂ ನಗರದಲ್ಲಿ ನಡೆಯಬಹುದಾಗಿದ್ದ ಭಾರಿ ಸ್ಪೋಟವನ್ನು ಹೇಗೆ ತಪ್ಪಿ ಸುತ್ತಾರೆ ಎಂಬುದನ್ನು ತೋರಿಸಲಾಗಿದೆ. "ನಾಗರಹೊಳೆ" ಚಿತ್ರದ ನಂತರ ಮಕ್ಕಳನ್ನು ಪ್ರಧಾನವಾಗಿಟ್ಟುಕೊಂಡು ಮಾಡಿರುವ



ಚಿತ್ರವಿದು. ಇದರಲ್ಲಿ ನೂರಕ್ಕೂ ಆಧಿಕ ಮಕ್ಕಳು ಅಭಿನಯಿಸಿದ್ದಾರೆ. ಪ್ರಮುಖಪಾತ್ರದಲ್ಲಿ ಏಳುಜನ ಮಕ್ಕಳು ನಟಿಸಿದ್ದಾರೆ. ಚಿತ್ರದ ಮತ್ತೊಂದು ವಿಶೇಷವೆಂದರೆ ಈ ಚಿತ್ರದಲ್ಲಿ ಹದಿನೆಂಟು ನಿಮಿಷದ ಒಂದು ಹಾಡು. ಈ ಹಾಡಿನಲ್ಲಿ ವಿಷ್ಣುವರ್ಧನ್, ಅಂಬರೀಶ್, ಶ್ರೀನಾಥ್, ಶಿವರಾಜಕುಮಾರ್, ಪುನೀತ್ ರಾಜಕುಮಾರ್, ಜಗ್ಗೇಶ್, ಉಪೇಂದ್ರ, ರಮೇಶ್ ಅರವಿಂದ್, ದರ್ಶನ್, ಜೈ ಜಗದೀಶ್, ಆದಿತ್ಯ, ರಾಕ್ ಲೈನ್ ವೆಂಕಟೇಶ್ ಸೇರಿದಂತೆ ಕನ್ನಡದ ದಿಗ್ಗಜ ನಾಯಕರು ಅಭಿನಯಿಸಿದ್ದಾರೆ. ಒಂದೇ ಹಾಡಿನಲ್ಲಿ ಇಷ್ಟು ಜನ ನಾಯಕರು ಅಭಿನಯಿಸಿರುವ ದಾಖಲೆ ಯಾವ ಭಾಷೆಯ ಚಿತ್ರದಲ್ಲೂ ಇಲ್ಲ. ಇದೊಂದು ದಾಖಲೆಯೇ ಸರಿ. ನನ್ನ ಮೇಲೆ ಪ್ರೀತಿಯಿಟ್ಟು ಅಭಿನಯಿಸಿದ ಅಷ್ಟು ನಾಯಕರಿಗೂ ಧನ್ಯವಾದ. ಇನ್ನೂ ಈ ರೀತಿಯ ಹಲವು ವಿಷಯಗಳನ್ನೊಳಗೊಂಡಿರುವ ಈ ಚಿತ್ರವನ್ನು ಸದ್ಯದಲ್ಲೇ ತಮ್ಮ ಮುಂದೆ ತರುವ ಪ್ರಯತ್ನ ನಡೆಯುತ್ತಿದೆ. ನನ್ನ ನಿರ್ದೇಶನ ಮತ್ತೊಂದು ಚಿತ್ರ "ವೀರ ಕಂಬಳ" ಕೂಡ ಜನವರಿಯಲ್ಲಿ ಬಿಡುಗಡೆಯಾಗಲಿದೆ. ಆನಂತರ "ರಾಣಿ ಚೆನ್ನ ಭೈರಾದೇವಿ" ಚಿತ್ರವನ್ನು ಮಾಡಲು ಸಿದ್ದತೆ ಮಾಡಿಕೊಳ್ಳುತ್ತಿದ್ದೇನೆ. ರಮ್ಯ ಅವರು ಈ ಪಾತ್ರಕ್ಕೆ ಸೂಕ್ತ. ಹಾಗಾಗಿ ಸದ್ಯದಲ್ಲೇ ಅವರ ಜೊತೆಗೂ ಮಾತನಾಡುತ್ತೇನೆ. ಧರ್ಮಸ್ಥಳದ ಧರ್ಮಾಧಿಕಾರಿಗಳಾದ ವೀರೇಂದ್ರ ಹೆಗ್ಗಡೆ ಅವರು ಈ ಚಿತ್ರವನ್ನು ನಿರ್ದೇಶನ ಮಾಡಲು ಹೇಳಿದ್ದಾರೆ

## "ಗುಳಿಗ...ಗುಳಿಗ... ಘೋರ್ಗರೆತ....ಅಬ್ಬರ...

ಜೀ ಮ್ಯೂಜಿಕ್ ಇಂದಿನಿಂದ , ತ್ರಿವಿಕ್ರಮ ಸಿನೆಮಾಸ್ ಮತ್ತು ಸಕ್ಸಸ್ ಫಿಲ್ಮ್ಸ್ ಬ್ಯಾನರ್ ಅಡಿಯ

ಅತ್ಯಂತ ನಿರೀಕ್ಷೆಯ "ಕೊರಗಜ್ಜ" ಚಿತ್ರದಲ್ಲಿ ಮೂಡಿ ಬರುವ ಕರಾವಳಿಯ ಉಗ್ರಭಯಂಕರ,ರಕ್ತ

ದಾಹದ ದೈವ "ಗುಳಿಗ" ನ ಕುರಿತಾದ ಹಾಡನ್ನು ಜನಮನ್ನಣೆಯ "ಮರಳಿ ಮರೆಯಾಗಿ..." ಯಂತಹ ಗೀತೆಯ ಸಾಹಿತಿ– ನಿರ್ದೇಶಕ,ಸುಧೀರ್ ಅತ್ತಾವರ್ ರವರೇ ಬರೆದಿರುವ "ಗುಳಿಗ..,ಗುಳಿಗ...ಗುಳಿಗ...ಗುಳಿಗ...ಗುಳಿಗ...ಗುಳಿಗ...ಘೋರ ಗುಳಿಗಾ...!" ಎನ್ನುವ ರ್ ಯಾಪ್ ಮಿಶ್ರಿತ ಹಾಡು

ಇಂದು ಎಲ್ಲೆಡೆ ಘೋರ್ಗರೆಯಲಿದೆ...! ದಕ್ಷಿಣ ಭಾರತದ ಖ್ಯಾತ ಸಂಗೀತಗಾರ ಗೋಪಿಸುಂದರ್ ರ ಸಂಗೀತಕ್ಕೆ ಖ್ಯಾತ ಬಾಲಿವುಡ್ ಗಾಯಕ ಜಾವೆದ್ ಆಲಿ ಜೊತೆ ಸುಧೀರ್ ಅತ್ತಾವರ್ ಹಾಡಿದ್ದಾರೆ. ಕೆಲವು ಭಾಗಗಳಲ್ಲಿ ಗೋಪಿ ಸುಂದರ್ ಕೂಡಾ ಧ್ವನಿ ನೀಡಿದ್ದಾರೆ.

ನೆಲವುಲ್ಲ ಸಂಕೆಯ 24 ನೆಯ ಮಗನಾಗಿ ಹುಟ್ಟಿದ "ಗುಳಿಗ" ಹುಟ್ಟುವಾಗಲೇ ಭಯಂಕರ ಹಸಿವಿನಿಂದಾಗಿ ಸಾವಿರ ಕೋಳಿ,ಸಾವಿರ ಕುದುರೆಯ ರಕ್ತ ಹೀರಿದರೂ ಹಸಿವು ನಿಲ್ಲದಿದ್ದಾಗ, ಶ್ರೀಮನ್ನಾರಾಯಣ ದೇವರ ಕಿರುಬೆರಳಿನಿಂದ ಅವರ ರಕ್ತವನ್ನೆಲ್ಲ ಹೀರಿದ...ಎನ್ನುವ ಜನಪದ ಕಥೆ ಗುಳಿಗನ ಹುಟ್ಟಿನ ಕುರಿತಾಗಿ ಇದೆ.

ಇಂತಹ ಘೋರ ಗುಳಿಗನ ಕೋಲ ಸೇವೆಯೂ ಘನ ಘೋರ ರೂಪದಲ್ಲಿ ತುಳುನಾಡಿನಾದ್ಯಂದ ಆಚರಿಸಲ್ಪಡುತ್ತಿದೆ.ಈ ಘೋರ ಗುಳಿಗನ ರಕ್ತ ಹೀರುವ ರುದ್ರ ನರ್ತನವನ್ನು ನೋಡಲಾಗದೆ ಭಯಭೀತಿಯಿಂದ ಅನೇಕರು ಕಣ್ಣು ಮುಚ್ಚಿಕೊಳ್ಳುವುದೂ ಇದೆ. ರಕ್ತ ದಾಹದಿಂದ ಎಲ್ಲೆಂದೆಲ್ಲಿ ಓಡುವ ಗುಳಿಗನನ್ನು ಹಿಡಿಯಲು ಹರಸಾಹಸ ಮಾಡುವ ದೃಶ್ಯವಂತೂ ಮೈ ಝುಂ ಎನಿಸುತ್ತದೆ.

ರುದ್ರಭಯಂಕರ ಗುಳಿಗದೈವ ಪಂಜುರ್ಲಿ ಜೊತೆ ಸೇರಿ "ಕೊರಗಜ್ಜ" ನನ್ನು ಭೇಟಿಯಾಗುವ ಸನ್ನಿವೇಶವು ಚಿತ್ರದಲ್ಲಿ ಮೂಡಿಬರಲಿದೆ.

ಗುಳಿಗ ದೈವದ ರಣ ಭಯಂಕರ ನರ್ತನವನ್ನು ಹಾಲಿವುಡ್–



ಬಾಲಿವುಡ್ ನ ಡಾನ್ಸರ್–ಕೊರಿಯೋಗ್ರಾಫರ್ ಸಂದೀಪ್ ಸೋಪರ್ಕರ್

ನಿರ್ವಹಿಸಿದ್ದು, ಗುಳಿಗ ದೈವದ ರುದ್ರನರ್ತನದ ಕೊರಿಯೋಗ್ರಾಫಿ ಯನ್ನು ಸ್ವತಃ ಸೋಪರ್ಕರ್ ಮಾಡಿರುತ್ತಾರೆ.ಪಂಜುರ್ಲಿಯಾಗಿ ಸರ್ದಾರ್ ಸತ್ಯ ಅಭಿನಯಿಸಿರುವರು.

## ಕನ್ನಡ ಭಾಷೆಯಲ್ಲಿ ತಾಂತ್ರಿಕ ಶಿಕ್ಷಣ: ಅವಕಾಶ ಮತ್ತು ಸವಾಲುಗಳು

'ಆತ್ಮನಿರ್ಭರತೆ' ಎಂಬ ಈ ಒಂದು ಪದ ಪ್ರತಿಯೋರ್ವ ಭಾರತೀಯನ ಅಂತರಂಗದ ಕನ್ನಡಿಯ ನಾಡಿಮಿಡಿತದ ಪ್ರತಿಬಿಂಬದಂತೆ. ಇಂತಿ, ಪ್ರಧಾನಿ ಮೋದಿಯವರು ಕೂಡ ಆತ್ಮನಿರ್ಭರ ಭಾರತವನ್ನು ನಿರ್ಮಿಸಲಿಕ್ಕೆ ಹಗಲಿರುಳು ಶ್ರಮಿಸುತ್ತಿರುವರು. ಅವರ ಆಡಳಿತದ ಭಾಗವಾಗಿಯೇ ರೂಪುಗೊಂಡಂತಹ ಯೋಜನೆಗಳಲ್ಲಿ 'ರಾಷ್ಟ್ರೀಯ ಶಿಕ್ಷಣ ನೀತಿ' ಕೂಡ ಒಂದಾಗಿದೆ. ಇದರ ಭಾಗವಾಗಿಯೇ ಸ್ಥಳೀಯ ಭಾಷೆಗಳಲ್ಲಿ ಎಂಜಿನಿಯರಿಂಗ್ ಕೋರ್ಸುಗಳನ್ನು ಕಲಿಸಲು ಐಐಟಿ ಸೇರಿದಂತೆ ಎಲ್ಲ ತಾಂತ್ರಿಕ ಸಂಸ್ಥೆಗಳು ಮುಂದಾಗಲಿವೆ ಎಂಬ ಸುಳುಹನ್ನು 2021 ರಲ್ಲಿ ಕೇಂದ್ರ ಸರ್ಕಾರ ನೀಡಿತ್ತು. ನಮ್ಮಲ್ಲಿ ಮಾತೃಭಾಷೆ ಅಥವಾ ಪ್ರಾದೇಶಿಕ ಭಾಷೆಯಲ್ಲಿ ವಿದ್ಯಾಭ್ಯಾಸ ಮಾಡಿದವರಿಗೆ ಆಂಗ್ಲ ಭಾಷೆಯಲ್ಲಿರುವ ವೃತ್ತಿಪರ ಕೋರ್ಸ್‌ಗಳು ಯಾವತ್ತಿಗೂ ಕಬ್ಬಿಣದ ಕಡಲೆಯೇ. ಹೀಗಾಗಿ ವೃತ್ತಿಪರ ಕೋರ್ಸ್‌ಗಳು ಆಂಗ್ಲ ಭಾಷೆಯಲ್ಲೇ ಇರುವುದರಿಂದ ಹೇಗಾದರೂ ಮಾಡಿ ಕಲಿಯಲೇಬೇಕಾದ ಅನಿವಾರ್ಯತೆ ವಿದ್ಯಾರ್ಥಿಗಳದ್ದಾಗಿರುತ್ತದೆ. ಇಂಜಿನಿಯರಿಂಗ್, ವೈದ್ಯಕೀಯ ಹಾಗೂ ಇನ್ನಿತರೆ ತಾಂತ್ರಿಕ ಕೋರ್ಸುಗಳನ್ನು ಅಭ್ಯಾಸ ಮಾಡಲು ಇಂಗ್ಲೀಷ್ ಬೇಕೆ ಬೇಕು. ಪಠ್ಯ ಕೂಡ ಆಂಗ್ಲಭಾಷೆಯದ್ದಾಗಿರುವುದರಿಂದ ಕಷ್ಟಪಟ್ಟು ಅರ್ಥೈಸಿಕೊಂಡು ಓದುವ ಜವಾಬ್ದಾರಿ ಹೆಚ್ಚಿರುತ್ತದೆ. ಹೀಗೆ ಇಂಗ್ಲೀಷ್ ಭಾಷೆಯಲ್ಲೇ ಕೋರ್ಸ್‌ಗಳನ್ನ ಮುಗಿಸಿ ಪ್ರತಿವರ್ಷವೂ ಲಕ್ಷಾಂತರ ವಿದ್ಯಾರ್ಥಿಗಳು ಶಿಕ್ಷಣ ಸಂಸ್ಥೆಗಳಿಂದ ಹೊರಗೆ ಬರುತ್ತಿದ್ದಾರೆ. ಆದರೆ ಇನ್ನುಮುಂದೆ ಟೆಕ್ನಿಕಲ್ ಕೋರ್ಸ್ ಮಾಡುವ ವಿದ್ಯಾರ್ಥಿಗಳಿಗೆ ಭಾಷೆಯ ಟೆನ್ಷನ್ ಇರುವುದಿಲ್ಲ. ರಾಷ್ಟ್ರೀಯ ಶಿಕ್ಷಣ ನೀತಿ (ಎನ್‌ಇಪಿ) 2020 ರ ಅನುಷ್ಠಾನದ ಭಾಗವಾಗಿ 2021 ರಲ್ಲಿ ಮಾತೃಭಾಷೆಯಲ್ಲಿ ತರಗತಿಗಳು ಪ್ರಾರಂಭವಾಗುವ ಅಪಾರವಾದ ನಿರೀಕ್ಷೆಯನ್ನು ಕೇಂದ್ರ ಸರ್ಕಾರ ಹುಟ್ಟುಹಾಕಿತು. ಸರ್ಕಾರದ ಯೋಜನೆ, ಉದ್ದೇಶ ಎಲ್ಲವೂ ಕೂಡ ಅತ್ಯಂತ ಸೂಕ್ತವಾದದ್ದೇ. ಆದರೆ ಯೋಜನೆಯ ಸಾಧಕ, ಬಾಧಕಗಳನ್ನು ಇಂದು ಮಗದೊಮ್ಮೆ ಕೂಲಂಕುಷವಾಗಿ ಅವಲೋಕಿಸಬೇಕಾಗಿದೆ.



ಈ ಹಿಂದೆ ಕೇಂದ್ರದಿಂದ ಅನುದಾನ ಪಡೆಯುವ ತಾಂತ್ರಿಕ ಸಂಸ್ಥೆಗಳು, ಕಡ್ಡಾಯವಾಗಿ ಭಾರತೀಯ ಭಾಷೆಗಳಲ್ಲಿ ಶೈಕ್ಷಣಿಕ ವಿಷಯಗಳನ್ನು ಅಭಿವೃದ್ಧಿಪಡಿಸುವತ್ತ ಗಮನ ಹರಿಸಬೇಕು. ನಾವು ಭಾರತೀಯ ಭಾಷೆಗಳಲ್ಲಿ ತಾಂತ್ರಿಕ ಶಿಕ್ಷಣದ ಸುವ್ಯವಸ್ಥೆಯನ್ನು ಅಭಿವೃದ್ಧಿಪಡಿಸುವ ಅಗತ್ಯವಿದೆ ಎಂದು ಮೋದಿಯವರು ಹೇಳಿದ್ದರು. ಸ್ಥಳೀಯ ಭಾಷೆಗಳಲ್ಲಿ ಸಂಶೋಧನಾ ಜರ್ನಲ್‌ಗಳನ್ನು ಅನುವಾದಿಸುವುದರಿಂದ ಹಿಡಿದು ಶಿಕ್ಷಣ, ಆರೋಗ್ಯ ರಕ್ಷಣೆ, ಕೃಷಿ, ರಕ್ಷಣಾ ಮತ್ತು ಸೈಬರ್ ತಂತ್ರಜ್ಞಾನ ಕ್ಷೇತ್ರಗಳು ಸೇರಿದಂತೆ ಅನೇಕ ವಿಭಾಗಗಳಲ್ಲಿ ಉಂಟಾಗಬಹುದಾದ ಭವಿಷ್ಯದ ಸಮಸ್ಯೆಗಳಿಗೆ ಪರಿಹಾರಗಳನ್ನು ಕಂಡುಕೊಳ್ಳುವತ್ತ ಗಮನಹರಿಸುವಂತೆ ಸೂಚಿಸಿದ್ದರು. ಮೇಲ್ಕಂಡ ಎಲ್ಲ ವಿಷಯಗಳನ್ನು ಸಹಜವಾಗಿ ಗಮನಿಸಿದರೆ ಎಲ್ಲರಿಗೂ ಸಂತೋಷವಾಗಬಲ್ಲವೇ ಆಗಿವೆ. ಆದರೆ ದಿಟದಲ್ಲಿ 'ರಾಷ್ಟ್ರೀಯ ಶಿಕ್ಷಣ ನೀತಿಯ' ಅನುಷ್ಠಾನ, ಮಾತೃಭಾಷಾ ಶಿಕ್ಷಣದ ವ್ಯವಸ್ಥೆಯಿಂದ ಹೊರಬಂದ ವಿದ್ಯಾರ್ಥಿಯ ಭವಿತವ್ಯ ಸೇರಿದಂತೆ ಎಲ್ಲವನ್ನು ಎರೆಡು ತಕ್ಕಡಿಗಳಲ್ಲಿ ತೂಗಿಹಾಕಿ ನೋಡಬೇಕಿದೆ.

### ■ ಸಾಧ್ಯತೆಗಳು ಮತ್ತು ಶೈಕ್ಷಣೀಕ ಲಾಭ

ವಿದ್ಯಾರ್ಥಿಗಳು ತಮ್ಮ ಮಾತೃಭಾಷೆಯಲ್ಲಿ (ಕನ್ನಡ) ಬೋಧನೆಯನ್ನು ಪಡೆದಾಗ ಸಂಕೀರ್ಣ ತಾಂತ್ರಿಕ ಪರಿಕಲ್ಪನೆಗಳನ್ನು ಸುಲಭವಾಗಿ ಅರ್ಥಮಾಡಿಕೊಳ್ಳುತ್ತಾರೆ, ಇದು ಅವರ ಉತ್ತಮ ಶೈಕ್ಷಣಿಕ ಸಾಧನೆಗೆ ಕಾರಣವಾಗುತ್ತದೆ. ಇನ್ನು ಪ್ರಾದೇಶಿಕ ಭಾಷೆಗಳಲ್ಲಿ ಕೋರ್ಸ್‌ಗಳು ಇದ್ದರೆ, ಗ್ರಾಮೀಣ ಅಥವಾ ಇಂಗ್ಲಿಷ್ ಶಿಕ್ಷಣರಹಿತ ಹಿನ್ನೆಲೆಯಿಂದ ಬಂದಂತಹ ವಿದ್ಯಾರ್ಥಿಗಳು ಸುಲಭವಾಗಿ ತಾಂತ್ರಿಕ ಶಿಕ್ಷಣ ಪಡೆಯಬಹುದು, ಇದು ಶಿಕ್ಷಣದಲ್ಲಿ ಸಮಾನತೆಯನ್ನು ಉತ್ತೇಜಿಸುತ್ತದೆ. ಜೊತೆಗೆ ಬೋಧನಾ ಮಾಧ್ಯಮದಲ್ಲಿ ಆರಾಮದಾಯಕತೆ ಇದ್ದರೆ, ವಿದ್ಯಾರ್ಥಿಗಳು ತರಗತಿಯ ಚರ್ಚೆಗಳಲ್ಲಿ ಸಕ್ರಿಯವಾಗಿ ಭಾಗವಹಿಸುತ್ತಾರೆ. ಇನ್ನು ಮಾತೃಭಾಷೆಯ ಕಲಿಕೆಯು ಸ್ಥಳೀಯ ಸಂಸ್ಕೃತಿ, ಸಾಹಿತ್ಯ ಮತ್ತು ಪರಂಪರೆಗಳನ್ನು ಉಳಿಸುವಲ್ಲಿ ಪ್ರಮುಖ ಪಾತ್ರವಹಿಸುತ್ತದೆ. ಈ ಹಿಂದೆ ಯುನೆಸ್ಕೋ ಕೂಡ ಹೇಳಿದಂತೆ ಪ್ರಾದೇಶಿಕ ಭಾಷೆಯ ಪ್ರಾವೀಣ್ಯತೆಯು ಅಧ್ಯಯನಾ ವಿಷಯಗಳನ್ನು ಆಳವಾಗಿ ಅರ್ಥೈಸಿಕೊಳ್ಳುವಲ್ಲಿ ನೆರವಾಗಬಲ್ಲದು. ಇಂತಿ ಸ್ಥಳೀಯ ಆಡಳಿತ ಮತ್ತು ದೈನಂದಿನ ಕೆಲಸಗಳಲ್ಲಿ ಬಹುವಾಗಿ ಉಪಯೋಗಕ್ಕೆ ಬರುತ್ತದೆ.

### ■ ಬಾಧ್ಯತೆಗಳು ಹಾಗೂ ಸವಾಲು

ತಾಂತ್ರಿಕ ಶಿಕ್ಷಣವನ್ನು ಕನ್ನಡದಲ್ಲಿ ಕೊಡಬೇಕೆಂಬ ಯೋಜನೆಯ ಪ್ರಮುಖ ಸವಾಲೇ ಅಕಾಡೆಮಿಕ್ ವಲಯದಿಂದ ನಿರೀಕ್ಷಿಸುವ ನಿರಂತರ ಬದ್ಧತೆ. ಇಂಗ್ಲಿಷ್‌ನಲ್ಲಿ ಮಾತ್ರ ಲಭ್ಯವಿರುವ ಹೊಸ ತಾಂತ್ರಿಕ ಪುಸ್ತಕಗಳು, ರಿಸರ್ಚ್ ಪೇಪರ್‌ಗಳು ಮತ್ತು ಇಂಟರ್ನ್ಯಾಷನಲ್ ಜರ್ನಲ್‌ಗಳನ್ನು ಕನ್ನಡಕ್ಕೆ ಸಮರ್ಪಕವಾಗಿ ಅನುವಾದಿಸುವುದು, ಮತ್ತು ಅಂತಹ ಸಂಪನ್ಮೂಲ ವ್ಯಕ್ತಿಗಳನ್ನು ನಿರಂತರವಾಗಿ ಕಾರ್ಯೋನ್ಮುಖರಾಗುವಂತೆ ಮಾಡುವುದೇ ಪ್ರಥಮ ಸವಾಲು. ಎರಡನೆಯದಾಗಿ ಎಂ ಎನ್ ಸಿ ಗಳು, ಸ್ಟಾರ್ಟಪ್‌ಗಳು, ಇಂಟರ್ನ್ಯಾಷನಲ್ ಕಾನ್ಫರೆನ್ಸ್‌ಗಳಲ್ಲಿ ಇಂಗ್ಲಿಷ್ ಅನಿವಾರ್ಯ. ಕೇವಲ ಮಾತೃಭಾಷೆಯಲ್ಲಿ ಮಾತ್ರ ಕಲಿತ ವಿದ್ಯಾರ್ಥಿಗಳು ಇಲ್ಲಿ ಹಿನ್ನಡೆ ಅನುಭವಿಸಬಹುದು. ಇದು ಉದ್ಯೋಗವನ್ನರಸುವವರಿಗೂ ಕಠಿಣವಾಗಬಹುದು. ಇನ್ನು ಎ ಐ, ಎಂ ಎಲ್, ಬ್ಲಾಕ್ ಚೈನ್ ನಂತಹ ಹೊಸ ಪದಗಳಿಗೆ ಕನ್ನಡದಲ್ಲಿ ಸ್ಟ್ಯಾಂಡರ್ಡ್, ಸಾರ್ವತ್ರಿಕವಾಗಿ ಸ್ವೀಕೃತ ಪದಗಳನ್ನು ರಚಿಸುವುದು ಕಷ್ಟ. ವಿವಿಧ ಸಂಸ್ಥೆಗಳು ವಿಭಿನ್ನ ಪದಗಳನ್ನು ಬಳಸಿದರೆ ಗೊಂದಲ ಉಂಟಾಗುತ್ತದೆ. ಇವೆಲ್ಲಕ್ಕಿಂತ ಮಿಗಿಲಾಗಿ ಇಂತಹ ಯೋಜನೆಗೆ ಸರ್ಕಾರ ಮುಂದಾದಾಗ ಮೇಲಿನವುಗಳನ್ನೆಲ್ಲ ಸಾಧ್ಯವಾಗಿಸಲು ಅದೆಷ್ಟು ತಜ್ಞರು ಕಲಿಸಲು ಸ್ವಯಂ –ಪ್ರೇರಿತರಾಗಿ ಮುಂದೆ ಬಂದರು ಅದೆಷ್ಟು ವಿದ್ಯಾರ್ಥಿಗಳನ್ನು ಮಾತೃಭಾಷೆಯಲ್ಲೇ ಕಲಿಯಬೇಕೆಂದು ಮುಂದೆ ಬಂದರು ಹೀಗಾಗಿಯೇ ಸರ್ಕಾರ ಮಗದೊಮ್ಮೆ ಈ ನೀತಿಯ ಮೇಲೆ ಸಮಗ್ರವಾಗಿ ಕಾರ್ಯನಿರ್ವಹಿಸಿ, ಮತ್ತಷ್ಟು ಉತ್ತಮವಾಗಿ ಅನುಷ್ಠಾನಕ್ಕೆ ತರಬೇಕಿದೆ. ಆ ಕಾರ್ಯ ಶೀಘ್ರದಲ್ಲಾಗಲೆಂಬುದೇ ಆಶಯ.

ಕನ್ನಡ ಭಾಷೆಯಲ್ಲಿ ಕಲಿತರು ವ್ಯವಹಾರ ಮತ್ತು ಸಂಪರ್ಕ ಇನ್ನೂ ಕೂಡ ಆಂಗ್ಲದಲ್ಲಿ ಆಗುತ್ತಿರುವುದು. ಕನ್ನಡದಲ್ಲಿ ಶಿಕ್ಷಣ ಪಡೆದು ಕೂಡ ತಡಬಡಾಯಿಸುವ ಪರಿಸ್ಥಿತಿ ವಿದ್ಯಾರ್ಥಿಗಳಿಗೆ ಬಂದಿದೆ. ಇದಕ್ಕೆ ಸೂಕ್ತ ಕ್ರಮ ಕೈ ಗೊಂಡು ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಒಗ್ಗೂಡಿ ನೀತಿ ರೂಪಿಸಬೇಕು



ಸೋಮೇಶ್ವರ
ಆರ್ ಗುರುಮಠ

---

**ಎಲ್ಲಿ ಜಾರಿತೋ ಮನವು ಎಲ್ಲೆ ಮೀರಿತೋ**
**ಬನ್ನಿ ಭಾವಗಳೆ ಬನ್ನಿ ನನ್ನೆದೆಗೆ**
**ಎಲ್ಲಿರುವೆ ಕಾಣಿಸದೆ ಕರೆವ ಕೊರಳೆ**
**ಆಹಾ! ಎಂತಹ ಅದ್ಭುತ ಭಾವಗೀತೆಗಳು!**

ಸುಮಾರು 80–90 ರ ದಶಕದಲ್ಲಿ ಸುಗಮ ಸಂಗೀತ ಲೋಕಕ್ಕೆ ಹೊಸ ಚೈತನ್ಯ ನೀಡಿ , ಭದ್ರ ಬುನಾದಿ ಹಾಕಿ ಕೊಟ್ಟಂತಹ ಹಾಡುಗಳಿವು. ಕನ್ನಡಿಗರ ಭಾವಲೋಕಕ್ಕೆ ಲಗ್ಗೆ ಇಟ್ಟಂತಹ ಇಂತಹ ಸೊಗಸಾದ ಗೀತೆಗಳನ್ನು ನಮಗೆ ನೀಡಿದವರು ನಮ್ಮ ಹೆಮ್ಮೆಯ ಶ್ರೀ ಎನ್. ಎಸ್. ಲಕ್ಷ್ಮೀನಾರಾಯಣಭಟ್ಟರು.

ಧ್ವನಿಮುದ್ರಿಕೆಗಳಲ್ಲಿ ಅವರ ಹಾಡುಗಳನ್ನು ಕೇಳುತ್ತಲೇ ಬೆಳೆದವರು ನಾವೆಲ್ಲಾ. ಭಾವಗೀತೆಗಳು ಎಂದರೆ ಇಂದಿನವರೂ ಆಯ್ದುಕೊಳ್ಳುವುದು ಅಂದಿನ ಈ ಗೀತೆಗಳನ್ನೇ ಅಂದರೆ ಅದಕ್ಕೆ ಅವರ ಕವನಗಳ ಅಪ್ರತಿಮ ಸಾಹಿತ್ಯದ ಸೊಗಡೇ ಕಾರಣ.

ದಿನಾಂಕ 29/10/1936 ರಂದು ಶಿವಮೊಗ್ಗದಲ್ಲಿ ಜನಿಸಿದ ಶ್ರೀಯುತರು , ತಮ್ಮ ವಿದ್ಯಾಭ್ಯಾಸವನ್ನು ಶಿವಮೊಗ್ಗದಲ್ಲಿ ಆರಂಭಿಸಿ, ಮೈಸೂರಿನಲ್ಲಿ ಮುಂದುವರೆಸಿ , 1965 ರಲ್ಲಿ ಅಧ್ಯಾಪಕರಾಗಿ ಬೆಂಗಳೂರಿನ ಆಚಾರ್ಯ ಪಾಠಶಾಲೆಯನ್ನು ಸೇರಿದರು. ನಂತರ ಬೆಂಗಳೂರು ವಿಶ್ವವಿದ್ಯಾನಿಲಯದ ಸ್ನಾತಕೋತ್ತರ ವಿಭಾಗದ ಪ್ರಾಧ್ಯಾಪಕರಾಗಿ ಸೇರಿದವರು, ಕನ್ನಡ ಅಧ್ಯಯನ ಸಂಸ್ಥೆಯ ನಿರ್ದೇಶಕರಾಗಿ, ಆರ್ಟ್ ಫ್ಯಾಕಲ್ಟಿ ಡೀನ್ ಆಗಿ, ಸೆನೆಟ್ ಸದಸ್ಯರಾಗಿ, ಸಿಂಡಿಕೇಟ್ ಸದಸ್ಯರಾಗಿಯೂ ಸೇವೆ ಸಲ್ಲಿಸಿ 1990 ರಲ್ಲಿ ನಿವೃತ್ತರಾದರು. ಹಳೆಗನ್ನಡ ಕಾವ್ಯಗಳಿಂದ ಹಿಡಿದು, ನವೀನ ಸಾಹಿತ್ಯದವರೆಗೂ ಓದಿ ಜೀರ್ಣಿಸಿಕೊಂಡಿದ್ದ ಅವರು, ಕನ್ನಡವಷ್ಟೇ ಅಲ್ಲದೆ ಇಂಗ್ಲಿಷ್ ಹಾಗೂ ಸಂಸ್ಕೃತ ಭಾಷೆಯಲ್ಲಿಯೂ ಸಹ ಸಾಹಿತ್ಯ ರಚನೆ ಮಾಡಿದ್ದಾರೆ. ಉತ್ತರ ಕರ್ನಾಟಕಕ್ಕಷ್ಟೇ ಸೀಮಿತವಾಗಿದ್ದ ಶ್ರೀ ಶಿಶುನಾಳ ಷರೀಫರ ತತ್ತ್ವಪದಗಳನ್ನು ರಾಜ್ಯಾದ್ಯಂತ, ದೇಶಾದ್ಯಂತವಷ್ಟೇ ಅಲ್ಲದೇ ಹೊರನಾಡಿಗೂ ಪಸರಿಸಿದ ಕೀರ್ತಿ ಅವರದ್ದು. ಅಂತೆಯೇ ಷರೀಫ ಭಟ್ಟರು ಎಂದೇ ಖ್ಯಾತಿಗೊಂಡವರು. ನವ್ಯ ಕಾವ್ಯದ ರಭಸಕ್ಕೆ ತೆವಳುತ್ತಿದ್ದ ಕನ್ನಡ ಸುಗಮ ಸಂಗೀತ ಲೋಕಕ್ಕೆ ಅತ್ಯದ್ಭುತ ಭಾವಗೀತೆಗಳನ್ನು



ಆಕಾಶವಾಣಿಯಷ್ಟೇ ಇದ್ದ ಆ ಕಾಲದಲ್ಲಿ, ಅದರಲ್ಲಿ ನಿರಂತರವಾಗಿ ಪ್ರಸಾರವಾಗುತಿದ್ದ ಭಟ್ಟರ ಭಾವಗೀತೆಗಳಿಗೆ ಕಾದು ಕುಳಿತು ಕೇಳುತ್ತಿದ್ದ ಅಪಾರ ಅಭಿಮಾನಿ ವರ್ಗವೇ ಇತ್ತು.

ಕನ್ನಡ ಸಾರಸ್ವತ ಲೋಕಕ್ಕೆ ಆಧುನಿಕತೆಯ ಮೆರಗನ್ನು ನೀಡುತ್ತಲೇ, ಅನುವಾದಗಳ ಮೂಲಕ ಹೊಸ ಹೊಳಹನ್ನೂ ಒದಗಿಸಿದ ಅಪರೂಪದ ಸಾಹಿತಿ ಅವರು. ಸ್ವಯಂ ಪ್ರತಿಭೆ, ಅಧ್ಯಯನ ಹಾಗೂ ಚಿಂತನೆಗಳ ಸಾಕಾರ ಮೂರ್ತಿಯಾದ ಭಟ್ಟರು ನಮ್ಮ ಕನ್ನಡದ ದೊಡ್ಡ ಆಸ್ತಿ. ಸುಳಿ , ವೃತ್ತ , ದಂತಹ ಹಲವಾರು ಕವನ ಸಂಕಲನಗಳು, ದೀಪಿಕಾ , ಭಾವ ಸಂಗಮದಂತಹ ನಾನೂರಕ್ಕೂ ಹೆಚ್ಚು ಭಾವಗೀತೆಗಳು ಇರುವ ಸಂಕಲನಗಳು, ಚಿನ್ನದ ಹಕ್ಕಿ , ಸುನೀತ ದಂತಹ ಕಾವ್ಯಾನುವಾದಗಳು ಅಲ್ಲದೆ, ಹಲವಾರು ನಾಟಕಾನುವಾದಗಳು, ಶಾಸ್ತ್ರೀಯ ಗ್ರಂಥಗಳು, ನೂರಕ್ಕೂ ಹೆಚ್ಚು ಶಿಶುಸಾಹಿತ್ಯ, ಹಲವು ವಿಮರ್ಶೆಗಳು, ಸಂಪಾದನಾ ಗ್ರಂಥಗಳನ್ನು

ಬರೆದಿರುವ ಶ್ರೀಯುತರಿಗೆ , ಸಂದ ಪ್ರಶಸ್ತಿಗಳೂ ಅನೇಕ.

## ಎನ್‌ಎಸ್‌ಎಲ್ ಎಂಬ ಮಾದರಿ!



ಕೊಟ್ಟು, ಕಾಯಕಲ್ಪ ನೀಡಿ, ತನ್ಮೂಲಕ ಹಲವರಿಗೆ ಭಾವಗೀತೆ ಬರೆಯಲು ಪ್ರೇರಣೆಯಾದವರು ಶ್ರೀ ಎನ್ ಎಸ್ ಎಲ್ ಭಟ್ಟರು. ಕನ್ನಡ ಸಾಹಿತ್ಯದಲ್ಲಷ್ಟೇ ಕಾಣಬಹುದಾದ ಈ ಭಾವಗೀತೆ ಗಳನ್ನು ಅಂದು ಜನಸಾಮಾನ್ಯರ ಹೃದಯ ತಟ್ಟುವಂತೆ ಬರೆದು ಮನೆ ಮನೆಗಳ ಮಾತಾದ ಪ್ರಖ್ಯಾತರು. ಅವರ ಕವನಗಳಿಗೆ ಸಿ. ಅಶ್ವಥ್, ಶಿವಮೊಗ್ಗ ಸುಬ್ಬಣ್ಣ, ಮೈಸೂರು ಅನಂತ ಸ್ವಾಮಿ , ಹೆಚ್ ಕೆ ನಾರಾಯಣರಂತಹ ದಿಗ್ಗಜರು ಸಂಗೀತ ನಿರ್ದೇಶಿಸಿ, ಹತ್ತು ಹಲವು ಧ್ವನಿಮುದ್ರಿಕೆಗಳನ್ನು ಹೊರತಂದು, ಕನ್ನಡ ಭಾವಗೀತೆಗಳು ಎಲ್ಲೆಡೆ ಘಮ ಘಮಿಸುವಂತೆ ಮಾಡಿದರು. ಮನರಂಜನೆಗಾಗಿ

ಮೂರು ಬಾರಿ ರಾಜ್ಯ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ಕೇಂದ್ರ ಬಾಲ ಸಾಹಿತ್ಯ ಪುರಸ್ಕಾರ, ರಾಜ್ಯೋತ್ಸವ ಪ್ರಶಸ್ತಿ, ಆರ್ಯಭಟ ಪ್ರಶಸ್ತಿ, ಮಾಸ್ತಿ ಪ್ರಶಸ್ತಿ, ಶಿವರಾಮ ಕಾರಂತ ಪ್ರಶಸ್ತಿ.. ಹೀಗೆ ಹತ್ತು ಹಲವು ಪ್ರಶಸ್ತಿಗಳು ಲಭಿಸಿವೆ.

ಶ್ರೀ ಎನ್ ಎಸ್ ಲಕ್ಷ್ಮೀನಾರಾಯಣಭಟ್ಟರು

ಪ್ರತಿಯೊಬ್ಬ ಉದಯೋನ್ಮುಖ ಬರಹಗಾರರಿಗೆ ಮಾದರಿಯಾಗಿ ನಿಲ್ಲುವಂತಹವರು. ಸಾಹಿತ್ಯ ಕ್ಷೇತ್ರದಲ್ಲಿ

ಅವರು ಕೈಯ್ಯಾಡಿಸದ ವಿಭಾಗವೇ ಇಲ್ಲವೇನೋ. ಈ ರೀತಿಯ ಸಮಷ್ಠಿ ಕೃಷಿ, ಪ್ರತಿಯೊಂದು ಭಾಷೆಗೆ ಅತ್ಯಗತ್ಯ. ಕಲೆಯ ಯಾವ ವಿಭಾಗವಾದರೂ ಸರಿಯೇ, ಹೀಗೆ ಹಳತನ್ನು ಬಿಡದೆ, ನಿಂತ ನೀರಾಗದೆ, ಹೊಸತನ್ನೂ ಒಗ್ಗೂಡಿಸಿಕೊಂಡು ನಿರಂತರ ಅಧ್ಯಯನದ ಮೂಲಕ, ಬೆಳೆಯುತ್ತಾ ಹೋದರಷ್ಟೇ

ವಿಕಾಸ ಸಾಧ್ಯ. ಅಂತಹ ಒಂದು ಅಮೂಲ್ಯ ಮಾದರಿ ಸಾಹಿತಿಯಾಗಿದ್ದ ಭಟ್ಟರು ದಿನಾಂಕ 06/03/2021 ರಂದು ಈ ಲೋಕವನ್ನು ಭೌತಿಕವಾಗಿ ಅಷ್ಟೇ ಬಿಟ್ಟು ಹೋಗಿದ್ದಾರೆ . ಅವರ ಬರಹಗಳ ಮೂಲಕ ಅವರೆಂದೆಂದೂ ಕನ್ನಡಿಗರ ಹೃದಯ ಸಾಮ್ರಾಜ್ಯದಲ್ಲಿ ವಿರಾಜಮಾನರಾಗಿಯೇ ಇರುತ್ತಾರೆ. ಅವರ ಅಪ್ರತಿಮ ಸಾಧನೆ, ನವ ಪೀಳಿಗೆಯ ಬರಹಗಾರರಿಗೆ ನಿತ್ಯ ಪ್ರೇರಣೆ ನೀಡುತ್ತಲಿರಲಿ ಎಂಬುದೇ ಆಶಯ!



ಸುಮಾ ಸೂರ್ಯ

---

## ತೈಲಪ ಅಹವಮಲ್ಲನಾಳಿದ ನಾಡೇ

ಕರುನಾಡ ತಾಯಿ ಸದಾ ಚಿನ್ಮಯಿಈ ಪುಣ್ಯ ಭೂಮಿ ನಮ್ಮ ದೇವಾಲಯಪ್ರೇಮಾಲಯ
ಈ ದೇವಾಲಯಕರುನಾಡ ತಾಯಿ ಸದಾ ಚಿನ್ಮಯಿ
ವೀರ ಧೀರರಾಳಿದ ನಾಡು ನಿನ್ನದುಶಾಂತಿ ಮಂತ್ರ
ಪಾಡಿದ ಬೀಡು ನಿನ್ನದುವರ ಸಾಧು ಸಂತರ ನೆಲೆ
ನಿನ್ನದುಮಹಾ ಶಿಲ್ಪಕಾರರ ಕಲೆ ನಿನ್ನದುಸಂಗೀತ
ಸಾಹಿತ್ಯ ಸೆಲೆ ನಿನ್ನದು

ಕಲ್ಯಾಣದ ಚಾಲುಕ್ಯ ಸಾಮ್ರಾಜ್ಯವನ್ನು ಸ್ಥಾಪಿಸಿದ ಮತ್ತು ರಾಷ್ಟ್ರಕೂಟರ ಆಳ್ವಿಕೆಯನ್ನು ಕೊನೆಗೊಳಿಸಿದ ಪ್ರಮುಖ ಐತಿಹಾಸಿಕ ವ್ಯಕ್ತಿಯಾದ ಎರಡನೆಯ ತೈಲಪನ ಕುರಿತು ಸಮಗ್ರ ಮತ್ತು ಆಕರ್ಷಕವಾದ ವಿವರಗಳನ್ನು ಇಲ್ಲಿ ನೀಡಲಾಗಿದೆ. ಇವನ ಕಥೆ ಕೇವಲ ಅಧಿಕಾರ ಪಲ್ಲಟದ ಕಥೆಯಲ್ಲ, ಇದು ಅವಮಾನ ಮತ್ತು ಪ್ರತೀಕಾರದ ಕಿಚ್ಚಿನಿಂದ ಹೊಸ ಸಾಮ್ರಾಜ್ಯ ಕಟ್ಟಿದ ಶೌರ್ಯದ ಗಾಥೆ!

ಎರಡನೆಯ ತೈಲಪ: ಕಲ್ಯಾಣ ಚಾಲುಕ್ಯ ಸಾಮ್ರಾಜ್ಯದ ಸಂಸ್ಥಾಪಕ

ಆಡಳಿತದ ಅವಧಿ: ಸುಮಾರು ಕ್ರಿ.ಶ. 973 997

ಕಲ್ಯಾಣಿ ಚಾಲುಕ್ಯರು (ಅಥವಾ ಪಶ್ಚಿಮ ಚಾಲುಕ್ಯರು) ಕರ್ನಾಟಕವನ್ನು ಆಳಿದ ಪ್ರಮುಖ ರಾಜವಂಶಗಳಲ್ಲಿ ಒಂದು. ಈ ವಂಶದ ಸ್ಥಾಪಕ ಎರಡನೆಯ ತೈಲಪನು ರಾಷ್ಟ್ರಕೂಟ ಸಾಮ್ರಾಜ್ಯದ ಅಡಿಯಲ್ಲಿ ದೀರ್ಘಕಾಲ ದಮನಿತವಾಗಿದ್ದ ಚಾಲುಕ್ಯರ ಕೀರ್ತಿಯನ್ನು ಪುನಃ ಸ್ಥಾಪಿಸಿದ ವೀರ. ಇವನ ರಾಜಕೀಯ ನಡೆ ಮತ್ತು ಮಿಲಿಟರಿ ವಿಜಯಗಳು ಕನ್ನಡ ನಾಡಿನ ರಾಜಕೀಯ ಭೂಪಟವನ್ನು ಸಂಪೂರ್ಣವಾಗಿ ಬದಲಾಯಿಸಿದವು.

ಚಾಲುಕ್ಯರ ಪುನರುತ್ಥಾನಕ್ಕೆ ಅಡಿಪಾಯ (ಪೂರ್ವರಂಗ)

ತೈಲಪನ ಉದಯವನ್ನು ಅರಿಯಲು, ಆತ ಹುಟ್ಟಿ ಬಂದ ಐತಿಹಾಸಿಕ ಹಿನ್ನೆಲೆಯನ್ನು ಅರ್ಥಮಾಡಿಕೊಳ್ಳಬೇಕು. ಇವನು ಬಾದಾಮಿಯ ಚಾಲುಕ್ಯ ವಂಶದ ಕೊನೆಯ ದೊರೆಯ ಸಹೋದರನ ವಂಶಸ್ಥನಾಗಿದ್ದನು.

### ■ ವಂಶಸ್ಥರ ಹೆಮ್ಮೆ ಮತ್ತು ಸಾಮಂತರ ಸ್ಥಿತಿ:

ಬಾದಾಮಿಯ ಚಾಲುಕ್ಯರ ವೈಭವವನ್ನು ರಾಷ್ಟ್ರಕೂಟರ ಸಂಸ್ಥಾಪಕ ದಂತಿದುರ್ಗನು ಕ್ರಿ.ಶ. 753ರಲ್ಲಿ ಕೊನೆಗೊಳಿಸಿದ್ದನು. ತೈಲಪನು ಅದೇ ಪ್ರಸಿದ್ಧ ಚಾಲುಕ್ಯ ವಂಶದ ಹಕ್ಕುದಾರನಾಗಿದ್ದನು. ರಾಷ್ಟ್ರಕೂಟರ ಆಳ್ವಿಕೆಯ ಉದ್ದಕ್ಕೂ, ತೈಲಪನ ಪೂರ್ವಜರು ಮತ್ತು ತೈಲಪ ಸ್ವತಃ ರಾಷ್ಟ್ರಕೂಟರಿಗೆ ಸಾಮಂತರಾಗಿ, ವಿಜಾಪುರದ ಸುತ್ತಮುತ್ತಲಿನ ಪ್ರದೇಶಗಳಾದ ತರ್ದವಾಡಿ–1000 ಎಂಬ ಪ್ರಾಂತ್ಯದ ಅಧಿಕಾರವನ್ನು ಮಾತ್ರ ಅನುಭವಿಸುತ್ತಿದ್ದರು.

### ■ ಸಾಮಂತರಾಗಿ ಸೇವೆ ಮತ್ತು ಬೆಳೆಯುವಿಕೆ:

ತೈಲಪನು ರಾಷ್ಟ್ರಕೂಟ ದೊರೆ ಮೂರನೆಯ ಕೃಷ್ಣನಿಗೆ ನಿಷ್ಠನಾದ ಸಾಮಂತನಾಗಿದ್ದನು. ಆತ ತನ್ನ ಶೌರ್ಯ ಮತ್ತು ದಕ್ಷತೆಯನ್ನು ಮೂರನೆಯ ಕೃಷ್ಣನ ಅಡಿಯಲ್ಲಿ ನಡೆದ ಹಲವಾರು ಯುದ್ಧಗಳಲ್ಲಿ ಸಾಬೀತುಪಡಿಸಿದನು. ಕೃಷ್ಣನು ಇವನ ಸಾಮರ್ಥ್ಯವನ್ನು ಗುರುತಿಸಿ, ಆತನಿಗೆ ಪ್ರಮುಖ ಪ್ರಾದೇಶಿಕ ಜವಾಬ್ದಾರಿಗಳನ್ನು ವಹಿಸಿದ್ದನು. ಈ ಅವಧಿಯಲ್ಲಿ, ತೈಲಪನು ತನ್ನ ಸಾಮರ್ಥ್ಯವನ್ನು ಹೆಚ್ಚಿಸಿಕೊಂಡು, ತನ್ನದೇ ಆದ ಸೇನಾಬಲವನ್ನು ವೃದ್ಧಿಸಿಕೊಂಡು, ಭವಿಷ್ಯದ ಬೃಹತ್ ಯೋಜನೆಗಳಿಗೆ ಸಿದ್ಧತೆ ನಡೆಸುತ್ತಿದ್ದನು.

ಮಹಾ ಕ್ರಾಂತಿ – ರಾಷ್ಟ್ರಕೂಟ ಸಾಮ್ರಾಜ್ಯದ ಪತನ (ಕ್ರಿ.ಶ. 973)

**ತೈಲಪನ ಬದುಕಿನ ನಿರ್ಣಾಯಕ ತಿರುವು**

ರಾಷ್ಟ್ರಕೂಟರ ಸಿಂಹಾಸನಕ್ಕೆ ಎದುರಾದ ಆಂತರಿಕ ಬಿಕ್ಕಟ್ಟು.

### ■ ರಾಷ್ಟ್ರಕೂಟರ ದೌರ್ಬಲ್ಯ:

ಮೂರನೆಯ ಕೃಷ್ಣನ ಮರಣದ ನಂತರ (ಕ್ರಿ.ಶ. 967), ರಾಷ್ಟ್ರಕೂಟರ ಸಾಮ್ರಾಜ್ಯದಲ್ಲಿ ಆಂತರಿಕ ಕಲಹಗಳು ಮತ್ತು ದುರ್ಬಲ ದೊರೆಗಳ ಆಳ್ವಿಕೆ ಆರಂಭವಾಯಿತು. ಕೊನೆಯ ರಾಷ್ಟ್ರಕೂಟ ದೊರೆ ಎರಡನೆಯ ಕರ್ಕನು ದುರ್ಬಲನಾಗಿದ್ದನು ಮತ್ತು ಸಾಮಂತರಿಗೆ ಗೌರವ ನೀಡುತ್ತಿರಲಿಲ್ಲ. ಸಾಮ್ರಾಜ್ಯದ ಗೌರವ ಮತ್ತು ಆಡಳಿತ ಕುಸಿಯತೊಡಗಿತು.

### ■ ತೈಲಪನ ಪ್ರತೀಕಾರದ ಕಿಚ್ಚು:

ತನ್ನ ಪೂರ್ವಜರಿಗೆ ಆದ ಅವಮಾನ ಮತ್ತು ಪ್ರಸ್ತುತ ಸಾಮ್ರಾಜ್ಯದ ದೌರ್ಬಲ್ಯವನ್ನು ಗಮನಿಸಿದ ತೈಲಪನು, ರಾಷ್ಟ್ರಕೂಟರ ಪತನಕ್ಕೆ ಇದು ಸಕಾಲ ಎಂದು ನಿರ್ಧರಿಸಿದನು. ಕ್ರಿ.ಶ. 973ರಲ್ಲಿ, ಆತ ತನ್ನ ಸೇನೆಯೊಂದಿಗೆ ರಾಷ್ಟ್ರಕೂಟರ ರಾಜಧಾನಿ ಮಾನ್ಯಖೇಡದ ಮೇಲೆ ಮಿಂಚಿನ ದಾಳಿ ನಡೆಸಿದನು.

### ■ ಎರಡನೆಯ ಕರ್ಕನ ಸೋಲು ಮತ್ತು ಸಾಮ್ರಾಜ್ಯದ ಅಂತ್ಯ:


ಈ ಆಕ್ರಮಣವನ್ನು ಎದುರಿಸಲು ಅಸಮರ್ಥನಾದ



ಎರಡನೆಯ ಕರ್ಕ ಕೃಷ್ಣನಗರದಲ್ಲಿ (ಆಧುನಿಕ ನಾಸಿಕ್) ಸೋತು ಮರಣ ಹೊಂದಿದನು. ತೈಲಪನು ಮಾನ್ಯಖೇಟವನ್ನು ವಶಪಡಿಸಿಕೊಂಡು, ರಾಷ್ಟ್ರಕೂಟರ ಸಾಮ್ರಾಜ್ಯದ ಆಳ್ವಿಕೆಗೆ ಶಾಶ್ವತ ತೆರೆ ಎಳೆದನು. ಈ ವಿಜಯದ ನಂತರ, ಇಡೀ ಡೆಕನ್ ಪ್ರಸ್ಥಭೂಮಿಯ ರಾಜಕೀಯ ಶಕ್ತಿಯು ಕನ್ನಡಿಗ ರಾಷ್ಟ್ರಕೂಟರಿಂದ ಮತ್ತೊಬ್ಬ ಕನ್ನಡಿಗ ರಾಜವಂಶವಾದ ಚಾಲುಕ್ಯರಿಗೆ ಹಸ್ತಾಂತರಗೊಂಡಿತು.

ಕಲ್ಯಾಣ ಚಾಲುಕ್ಯರ ಸ್ಥಾಪನೆ ಮತ್ತು ವಿಸ್ತರಣೆ

ರಾಷ್ಟ್ರಕೂಟರನ್ನು ಸೋಲಿಸಿದ ನಂತರ, ತೈಲಪನು ಹಿಂದಿನ ಸಾಮ್ರಾಜ್ಯದ ಅವಶೇಷಗಳ ಮೇಲೆ ಹೊಸ, ಪ್ರಬಲ ಸಾಮ್ರಾಜ್ಯವನ್ನು ನಿರ್ಮಿಸಲು ಮುಂದಾದನು.




### ■ ಹೊಸ ರಾಜಧಾನಿ - ಕಲ್ಯಾಣ:

ತೈಲಪನು ತನ್ನ ಹೊಸ ಸಾಮ್ರಾಜ್ಯದ ರಾಜಧಾನಿಯನ್ನು ಹಿಂದಿನ ರಾಷ್ಟ್ರಕೂಟರ ರಾಜಧಾನಿ ಮಾನ್ಯಖೇಟದಿಂದ ಆಧುನಿಕ ಕರ್ನಾಟಕದ ಬೀದರ್ ಜಿಲ್ಲೆಯ ಕಲ್ಯಾಣಕ್ಕೆ (ಇಂದಿನ ಬಸವಕಲ್ಯಾಣ) ಸ್ಥಳಾಂತರಿಸಿದನು. ಈ ರಾಜಧಾನಿಯಿಂದಲೇ ಈ ವಂಶಕ್ಕೆ 'ಕಲ್ಯಾಣದ ಚಾಲುಕ್ಯರು' ಎಂಬ ಹೆಸರು ಬಂತು. ಆ ಮೂಲಕ ತೈಲಪನು ಕಲ್ಯಾಣವನ್ನು ದಕ್ಷಿಣ ಭಾರತದ ಹೊಸ ರಾಜಕೀಯ ಮತ್ತು ಸಾಂಸ್ಕೃತಿಕ ಕೇಂದ್ರವನ್ನಾಗಿ ಮಾಡಿದನು.

### ■ ಉತ್ತರ ಮತ್ತು ದಕ್ಷಿಣದ ವಿಜಯಗಳು:

**ಕರ್ನಾಟಕದಲ್ಲಿ ಸ್ಥಿರೀಕರಣ:** ರಾಷ್ಟ್ರಕೂಟರ ಅನೇಕ ಸಾಮಂತ ರಾಜರುಗಳು ದಂಗೆ ಏಳಲು ಯತ್ನಿಸಿದರೂ, ತೈಲಪನು ಅವರನ್ನು ಕಠಿಣವಾಗಿ ಹತ್ತಿಕ್ಕಿ, ಇಡೀ ಕರ್ನಾಟಕ ಪ್ರದೇಶದ ಮೇಲೆ ತನ್ನ ಪ್ರಭುತ್ವವನ್ನು ಸ್ಥಾಪಿಸಿದನು.

**ಪರಮಾರರೊಂದಿಗಿನ ಹೋರಾಟ:** ಉತ್ತರದ ವೈರಿಗಳಾದ ಮಾಳ್ವದ ಪರಮಾರ ದೊರೆ ಮುಂಜನು ರಾಷ್ಟ್ರಕೂಟರ ಪತನದ ಲಾಭ ಪಡೆಯಲು ಯತ್ನಿಸಿದಾಗ, ತೈಲಪನು ಆತನನ್ನು ಸೋಲಿಸಿ, ಬಂಧಿಸಿ, ಕೊನೆಗೆ ವಧಿಸಿದನು. ಈ ವಿಜಯವು ಇಡೀ ಮಧ್ಯ ಮತ್ತು ಡೆಕನ್ ಭಾಗದಲ್ಲಿ ತೈಲಪನ ಶೌರ್ಯವನ್ನು ಸಾರಿತು.

**ಚೋಳರ ನಿಯಂತ್ರಣ:** ದಕ್ಷಿಣದಲ್ಲಿ ತಮಿಳುನಾಡಿನಲ್ಲಿ ಮತ್ತೆ ಪ್ರಬಲರಾಗಲು ಯತ್ನಿಸುತ್ತಿದ್ದ ಚೋಳರು (ಮುಖ್ಯವಾಗಿ ರಾಜರಾಜನ ಕಾಲದ ಆರಂಭ) ಮತ್ತು ಕೃಷ್ಣನು ಬಿಟ್ಟುಹೋಗಿದ್ದ ಇತರ ದಕ್ಷಿಣದ ರಾಜರನ್ನು ನಿಯಂತ್ರಣದಲ್ಲಿಡಲು ತೈಲಪನು ಯಶಸ್ವಿಯಾದನು.

**ಬಿರುದುಗಳು:**

ತೈಲಪನು ತನ್ನ ವಿಜಯಗಳ ನಂತರ "ಆಹವಮಲ್ಲ" (ಯುದ್ಧದಲ್ಲಿ ಮಲ್ಲನಂತಹವನು) ಮತ್ತು "ಸಮರವೀರ" ಎಂಬಂತಹ ಯುದ್ಧವೀರ ಸೂಚಕ ಬಿರುದುಗಳನ್ನು ಧರಿಸಿದನು. ಈ ಬಿರುದುಗಳು ಆತನ ಆಡಳಿತದ ಬಹುಪಾಲು ಯುದ್ಧದಲ್ಲಿ ಕಳೆದಿರುವುದನ್ನು ಸೂಚಿಸುತ್ತವೆ.

ಕನ್ನಡ ನಾಡಿಗೆ ಕೊಡುಗೆ ಮತ್ತು ಪರಂಪರೆ ತೈಲಪನು ತನ್ನ ಆಳ್ವಿಕೆಯ ಬಹುಪಾಲು ಸಮಯವನ್ನು ಯುದ್ಧಗಳಲ್ಲಿ ಕಳೆದರೂ, ಆತ ಸ್ಥಾಪಿಸಿದ ಸಾಮ್ರಾಜ್ಯವು ಕನ್ನಡ ನಾಡಿಗೆ ಅಮೂಲ್ಯ ಕೊಡುಗೆಗಳನ್ನು ನೀಡಿತು.

### ■ ಕನ್ನಡ ಸಾಹಿತ್ಯದ ಪುನರುಜ್ಜೀವನಕ್ಕೆ ಬುನಾದಿ:

ರಾಷ್ಟ್ರಕೂಟರ ಯುಗದಲ್ಲಿ ಬೆಳೆದ ಕನ್ನಡ ಸಾಹಿತ್ಯದ ಪರಂಪರೆಯನ್ನು ತೈಲಪನು ಮುಂದುವರೆಸಿದ. ಇವನ ಆಸ್ಥಾನದಲ್ಲಿ ಪ್ರಖ್ಯಾತ ಜೈನ ಕವಿ ರನ್ನನಿಗೆ ಆಶ್ರಯ ದೊರಕಿತ್ತು. ರನ್ನನು ಕನ್ನಡ ಸಾಹಿತ್ಯದ 'ರತ್ನತ್ರಯ'ರಲ್ಲಿ ಕೊನೆಯವನು ಮತ್ತು ಈತನು 'ಸಾಹಸಭೀಮವಿಜಯಂ' (ಗದಾ ಯುದ್ಧ) ಎಂಬ ತನ್ನ ಮಹಾಕಾವ್ಯವನ್ನು ತೈಲಪನ ಸಾಮಂತನಾದ ಇರಿವಬೆಡಂಗ ಸತ್ಯಾಶ್ರಯನಿಗೆ ಅರ್ಪಿಸಿದನು. ಈ ಮೂಲಕ ರನ್ನನು ಕನ್ನಡ ಸಾಹಿತ್ಯವನ್ನು ಮತ್ತಷ್ಟು ಶ್ರೀಮಂತಗೊಳಿಸಿದನು.


### ■ ಆಡಳಿತಾತ್ಮಕ ಮತ್ತು ಸಾಂಸ್ಕೃತಿಕ ಸ್ಥಿರತೆ:

ರಾಷ್ಟ್ರಕೂಟರ ಪತನದ ನಂತರ ಉಂಟಾಗಬಹುದಾಗಿದ್ದ ಅಸ್ತವ್ಯಸ್ತತೆಯನ್ನು ತಡೆದು, ಕನ್ನಡ ನಾಡಿಗೆ ಹೊಸ ಆಡಳಿತಾತ್ಮಕ ಸ್ಥಿರತೆಯನ್ನು ತೈಲಪನು ನೀಡಿದನು. ಆತನ ನೇತೃತ್ವದಲ್ಲಿ ಕಲ್ಯಾಣವು ಮುಂದಿನ ಎರಡು ಶತಮಾನಗಳ ಕಾಲ ರಾಜಕೀಯ ಮತ್ತು ಸಾಂಸ್ಕೃತಿಕ ಕೇಂದ್ರವಾಗಿ ಮೆರೆಯಿತು.

### ■ ಪರಂಪರೆ:

ತೈಲಪನು ಸ್ಥಾಪಿಸಿದ ಕಲ್ಯಾಣಿ ಚಾಲುಕ್ಯರ ರಾಜವಂಶವು ಇಮ್ಮಡಿ ಜಯಸಿಂಹ, ಆರನೆಯ ವಿಕ್ರಮಾದಿತ್ಯ ಮುಂತಾದ ಮಹಾನ್ ದೊರೆಗಳನ್ನು ಕಂಡಿತು. ಈ ದೊರೆಗಳ ಕಾಲದಲ್ಲಿ ಕಲೆ, ವಾಸ್ತುಶಿಲ್ಪ ಮತ್ತು ಕನ್ನಡ ಸಾಹಿತ್ಯ ಉತ್ತುಂಗಕ್ಕೇರಿತು. ಈ ಸಮಸ್ತ ವೈಭವಕ್ಕೆ ದಂತಿದುರ್ಗನನ್ನು ಸೋಲಿಸಿ ತಳಪಾಯ ಹಾಕಿದವನು ಎರಡನೆಯ ತೈಲಪ.

ಎರಡನೆಯ ತೈಲಪನು ಕರ್ನಾಟಕದ ಇತಿಹಾಸದಲ್ಲಿ ಒಂದು ಯುಗಾಂತ್ಯಕ್ಕೆ ಕಾರಣನಾದ ಮತ್ತು ಇನ್ನೊಂದು ಹೊಸ ಯುಗಕ್ಕೆ (ಕಲ್ಯಾಣಿ ಚಾಲುಕ್ಯ) ನಾಂದಿ ಹಾಡಿದ ಮಹಾಪುರುಷ. ಇವನು ಯುದ್ಧ ಮತ್ತು ರಾಜಕೀಯ ಚಾಣಾಕ್ಷತೆ ಎರಡರಿಂದಲೂ ತನ್ನ ಸಾಮ್ರಾಜ್ಯವನ್ನು ಭದ್ರಪಡಿಸಿ, ಕನ್ನಡ ನಾಡಿನ ಕೀರ್ತಿಯನ್ನು ಮುಂದಿನ ಪೀಳಿಗೆಗೂ ಹಸ್ತಾಂತರಿಸಿದ ಕ್ರಾಂತಿಕಾರಿ ದೊರೆ.ಇಂಥ ವೀರಾಧಿವೀರನನ್ನು ಹಡೆದ ಕನ್ನಡ ತಾಯಿ ಮಹಾಧನ್ಯಳಲ್ಲವೇ ಕರುನಾಡ ತಾಯಿ ಇಂಥ ಸುಪುತ್ರರಿಂದ ಸದಾ ಚಿನ್ಮಯಿ. ಆಕೆಗೆ ನನ್ನ ಪಾದಾಭಿವಂದನೆಗಳು.



ರೂಪ ಮಂಜುನಾಥ
ಹೊಳೆನರಸೀಪುರ

Published by Mihir Akash K.R Printed by M.S.Shivaprakash on behalf of Mihir Akash K.R. Printed at M.S. Shivaprakash, IDEAL OFFSET PRINTERS, #337, SLJ Temple Street, Old Town Mandya Dist-571401, Karnataka. Published from Mihir Akash K.R, #78, Daya Marga Near Geetha School, Siddartha Nagar Mysore-570011, Editor K.N Ravi,